ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 3 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 197 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನ.8ರಂದು ಕೆಬಿಜಿ ಸೇರಿ ದತ್ತಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಅಭಿನಂದನೆ

ಮೈಸೂರು, ನ.2(ಆರ್‌ಕೆ)–ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನವೆಂಬರ್ 8ರಂದು ಬೆಳಗ್ಗೆ 11 ಗಂಟೆಗೆ ಪತ್ರಕರ್ತರ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪದವಿ ಪಡೆದಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿಯವರು ಸೇರಿದಂತೆ ದತ್ತಿ, ರಾಜ್ಯೋತ್ಸವ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತ ಪತ್ರಕರ್ತರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಮಾಜಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಪ್ರಶಸ್ತಿ ಪ್ರದಾನ ಮಾಡಲಿದ್ದು, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ವಿಜಯ ಕರ್ನಾಟಕ ಸ್ಥಾನಿಕ ಸಂಪಾದಕ ಐತಿಚಂಡ ರಮೇಶ್ ಉತ್ತಪ್ಪ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿರುವ ಸಮಾರಂಭದಲ್ಲಿ ನಿರಂಜನ ನಿಕ್ಕಂ ಪ್ರಶಸ್ತಿ ಪುರಸ್ಕೃತ ರಾಜಕುಮಾರ್ ಭಾವಸಾರ್, ನೇತ್ರರಾಜು ಪ್ರಶಸ್ತಿ ಪುರಸ್ಕೃತ ಎಂ.ಎನ್. ಲಕ್ಷ್ಮೀ ನಾರಾಯಣ ಯಾದವ್, ರಾಜ್ಯೋತ್ಸವ ಪ್ರಶಸ್ತಿ ಗಳಿಸಿರುವ ಹಿರಿಯ ಪತ್ರಿಕಾ ವಿತರಕ ಜವರಪ್ಪ, ಜಿಲ್ಲಾ ರಾಜ್ಯೋತ್ಸವ ಸನ್ಮಾನಿತರಾದ ನಾಗೇಶ್ ಪಾಣತ್ತಲೆ, ದೊಡ್ಡನಹುಂಡಿ ರಾಜಣ್ಣ ಎಸ್.ಉದಯ ಶಂಕರ್, ಸುತ್ತೂರು ನಂಜುಂಡನಾಯಕ, ಮಹೇಶ್ ಕೆಬ್ಬೇಪುರ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಗೆ ಭಾಜನರಾಗಿರುವ ಕೆ.ಬಿ. ರಮೇಶ್‌ನಾಯಕ ಮತ್ತು ಕೆ.ಪಿ.ನಾಗರಾಜ್ ಅವರನ್ನು ಸನ್ಮಾನಿಸ ಲಾಗುವುದು ಎಂದು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೆ.ಬಿ. ಗಣಪತಿ

ಆಡಳಿತದಲ್ಲಿ ಕನ್ನಡ ಭಾಷೆ ಪರಿಪೂರ್ಣವಾಗಿ ಬಳಕೆಯಾಗದ ಹೊರತು ಕನ್ನಡ ಉಸಿರಾಗದು

ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಅಭಿಪ್ರಾಯ

ಮೈಸೂರು, ನ.2(ಬಿಎಲ್‌ಯು)– ಆಡಳಿತದಲ್ಲಿ ಕನ್ನಡ ಭಾಷೆ ಪರಿಪೂರ್ಣವಾಗಿ ಬಳಕೆಯಾಗದ ಹೊರತು ಕನ್ನಡ ಉಸಿರಾಗದು ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಕನ್ನಡ ಹಬ್ಬ–2023 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ವಾಸ ಮಾಡುವ ಪ್ರತಿಯೊಬ್ಬರಿಗೂ ಕನ್ನಡ ಅನ್ನದ ಭಾಷೆ ಎಂಬ ಮನೋಭಾವ ಬಾರದ ಹೊರತು ಕನ್ನಡ ಉಸಿರಾಗದು ಎಂದು ಹೇಳಿದರು.

ಕನ್ನಡಕ್ಕೆ ಅಗ್ರಸ್ಥಾನ ನೀಡಬೇಕು, ಸಾರ ಭೌಮ ನೀಡಬೇಕು, ಗೌರವ ನೀಡಬೇಕು, ನಿಸಂಕೋಚವಾಗಿ ತಾಯಿ ಭಾಷೆ ಮಾತನಾಡಬೇಕು. ಕನ್ನಡ ನಮ್ಮ ಮಾತೃ ಭಾಷೆ ಎಂಬ ಅಭಿಮಾನ ತೋರಬೇಕು, ಹೊರ ರಾಜ್ಯದ ಭಾಷೆಗಳು ನಮ್ಮ ಚಿಕ್ಕಮ್ಮ, ದೊಡ್ಡಮ್ಮ ಎಂಬ ಮನೋಭಾವ ಬಂದು ತಾಯಿ ಭಾಷೆಯನ್ನು ಮೇಲುಸ್ತರದಲ್ಲಿಟ್ಟು ಪ್ರೀತಿಸಬೇಕು ಎಂದು ಸಲಹೆ ನೀಡಿದರು. ಭಾರತದ 7 ಚಿರಂಜೀವಿಗಳಲ್ಲಿ ಕನ್ನಡ ನಾಡಿನ ಕಿಷ್ಕಿಂಧೆಯ ಹನುಮಂತ ಕೂಡ ಒಬ್ಬನಾಗಿದ್ದಾನೆ. ಹನುಮಂತ ನಮ್ಮ ಕನ್ನಡ ನಾಡಿನವನು ಎಂಬ ಹೆಮ್ಮೆ ಇದೆ ಎಂದು ಹೇಳಿದರು.


ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತಿದೆ. ಸಂಗೀತ ಕ್ಷೇತ್ರದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ದೊರೆತಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಜೊತೆಗೆ ಕರ್ನಾಟಕ ಶಾಸ್ತ್ರೀಯ ಮಾನ್ಯತೆ ದೊರೆಕಿದೆ. ಈ ಮಾನ್ಯತೆ ದೇಶದ ಯಾವ ರಾಜ್ಯದ ಸಂಗೀತಕ್ಕೂ ದೊರೆತಿಲ್ಲ ಎಂದರು.

ಕರ್ನಾಟಕದ ಏಕೀಕರಣಕ್ಕೆ ಮೈಸೂರಿನ ಪ್ರಾಮುಖ್ಯತೆ ಇದೆ. ಏಕೀಕರಣಕ್ಕೆ ಕಾರಣ ಕರ್ತರಾದ ಡಿ.ದೇವರಾಜ ಅರಸು ಇದೇ ಮೈಸೂರಿನವರಾಗಿದ್ದಾರೆ. ಕರ್ನಾಟಕ ರಾಜ್ಯ ಎಂಬ ಹೆಸರು ಬರುವುದಕ್ಕಿಂತ ಮೊದಲು ಇದನ್ನು ಮೈಸೂರು ರಾಜ್ಯ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು ಇದರಿಂದ ಮೈಸೂರಿನ ಗಡಿಗೆ ಬರಬೇಕಾದರೆ ನಮಸ್ಕಾರ ಮಾಡಿ ಕಾಲಿಡಬೇಕು ಎಂಬ ಅಭಿಮಾನವನ್ನು ಎಲ್ಲರೂ ಹೊಂದಬೇಕು ಎಂದು ಸಲಹೆ ನೀಡಿದರು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ದೊಡ್ಡಚಾರ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮುನ್ನ ಮೈಸೂರಿನ ಕೆ.ಜಿ.ಕೊಪ್ಪಲಿನಿಂದ ತಾಯಿ ಭುವನೇಶ್ವರಿ ಭಾವಚಿತ್ರವಿರುವ ಮೆರವಣಿಗೆ ಆರಂಭವಾಯಿತು. ಡೊಳ್ಳು ಕುಣಿತ, ಲಿಂಗಧಿರ ಕುಣಿತ ಸೇರಿದಂತೆ ಇತರೆ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರುಗು ನೀಡಿತು. ಸರಸ್ವತಿಪುರಂ, ಕುಕ್ಕರಹಳ್ಳಿ ಕೆರೆ ಮೂಲಕ ಮೆರವಣಿಗೆಯು ಕಾರ್ಯಕ್ರಮ ನಡೆದ ಕಲಾಮಂದಿರ ತಲುಪಿತು.



ಮೈಸೂರಿನ ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಕನ್ನಡ ಹಬ್ಬ–2023 ಕಾರ್ಯಕ್ರಮ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಉದ್ಘಾಟಿಸಿದರು. ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಶಾಸಕ ಶ್ರೀವತ್ಸ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ದೊಡ್ಡಚಾರ್ಯ ಇನ್ನಿತರರಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ರಾಜ್ಯೋತ್ಸವ ಆಚರಣೆ, ಅಭಿನಂದನೆ



ಮೈಸೂರು, ನ.2– ಮೈಸೂರು ನಗರದ ಶ್ರೀ ರಾಘವೇಂದ್ರ ಪ್ರತಿಷ್ಠಾನದ ವತಿಯಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ರಾಜ್ಯೋತ್ಸವವನ್ನು ಆಚರಿಸಲಾಯಿತು. ಮೈಸೂರು ಅವಧೂತ ದತ್ತಪೀಠದ ಪೀಠಾಧಿಪತಿಗಳಾದ ಡಾ.ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರನ್ನು ಅಭಿನಂದಿಸಿ, ಗೌರವಿಸಲಾಯಿತು. ಈ ವೇಳೆ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಕಾರ್ಯಕ್ರಮದ ಆಯೋಜಕರು ಹಾಗೂ ಶ್ರೀ ರಾಘವೇಂದ್ರ ಪ್ರತಿಷ್ಠಾನದ ಅಧ್ಯಕ್ಷ ಎಸ್.ನಾಗರಾಜ, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಶಿಕ್ಷಣ ಸಂಸ್ಥೆಯ ಸ್ಥಾಪಕರು, ಉದ್ಯಮಿ ಡಾ.ರವೀಂದ್ರ ದೊಡ್ಡಮನೆ, ನಿವೃತ್ತ ಶಿಕ್ಷಕರಾದ ರಾಜೇಂದ್ರ ಉಪಸ್ಥಿತರಿದ್ದರು. ರಾಜ್ಯೋತ್ಸವದ ಅಂಗವಾಗಿ ಡಾ.ರವೀಂದ್ರ ದೊಡ್ಡಮನಿಯವರನ್ನು ಈ ವೇಳೆ ಅಭಿನಂದಿಸಲಾಯಿತು.

> ಕನ್ನಡ ಸರಳ ಭಾಷೆ ಮತ್ತು ವಿಶ್ವಮನ್ನಣೆ ಪಡೆದ ಭಾಷೆಯಾಗಿದೆ. ಕನ್ನಡ ನಾಡಿನ ಪ್ರಗತಿಗಾಗಿ ಸಾಹಿತಿಗಳು, ಹೋರಾಟಗಾರರು ಶ್ರಮಿಸಿದ್ದಾರೆ. ಕರ್ನಾಟಕದಲ್ಲಿರುವ ಜನರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಹಾಗೂ ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸವನ್ನು ಪೋಷಕರು ಕೊಡಿಸಬೇಕು. ಸಂಗೀತ ವಿಶ್ವ ಭಾಷೆ. ಸಂಗೀತಕ್ಕಾಗಿ ತಮಗೆ ಗೌರವ ಡಾಕ್ಟರೇಟ್ ನೀಡಿದ್ದಾರೆ. ಇದು ಸಂಗೀತ ಕ್ಷೇತ್ರಕ್ಕೆ ಸಂದ ಗೌರವವಾಗಿದೆ. ಸಂಗೀತ ಕಾಯಿಲೆಗಳನ್ನು ವಾಸಿ ಮಾಡುತ್ತದೆ. ಮನಸ್ಸನ್ನು ಉಲ್ಲಾಸ ಗೊಳಿಸುತ್ತದೆ.
> –ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಸ್ವಯಂಪ್ರೇರಿತ ರಕ್ತದಾನ ಶಿಬಿರ



ಮೈಸೂರು ಬಿಎನ್ ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋರೂಂನಲ್ಲಿ ಲಯನ್ಸ್ ಬ್ಲಡ್ ಸೆಂಟರ್ ಜೀವಾಧಾರ ಸಂಸ್ಥೆ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವ ಹಾಗೂ ಮಲಬಾರ್ ದಿನದ ಪ್ರಯುಕ್ತ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು. ಮಲಬಾರ್ ಗೋಲ್ಡ್‌ನ ಸಹಾಯಕ ಸ್ಟೋರ್ ಹೆಡ್ ಫಸಲು ರೆಹಮಾನ್, ಮಲಬಾರ್ ಸಿಬ್ಬಂದಿ ವರ್ಗ ಹಾಗೂ ಜೀವಧಾರ ಸಿಬ್ಬಂದಿ ಉಪಸ್ಥಿತರಿದ್ದರು.



ಹೊಯ್ಸಳ ಟ್ರಸ್ಟ್ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವ ಅಂಗವಾಗಿ ಮೈಸೂರಿನ ದೇವರಾಜ ಮಾರ್ಕೆಟ್ ಮುಂಭಾಗ ಸಾರ್ವಜನಿಕರಿಗೆ ಕನ್ನಡ ದಿನಪತ್ರಿಕೆ ಕೊಂಡುಓದಿ ಎಂಬ ಅಭಿಯಾನವನ್ನು ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಉದ್ಘಾಟಿಸಿದರು. ವರುಣಾ ಮಹದೇವ್, ಎಂ.ಪಿ.ರಾಜೇಶ್, ಮಂಜುಗೌಡ, ಲೋಕೇಶ್, ಗೋಪಾಲ್, ನಾಗೇಂದ್ರ, ಇನ್ನಿತರರು ಉಪಸ್ಥಿತರಿದ್ದರು.

ನೃಪತುಂಗ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ



ಮೈಸೂರು, ನ. 2– ಮೈಸೂರಿನ ನೃಪತುಂಗ ಕನ್ನಡ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಈ ವೇಳೆ ಧನಂಜಯ ಎಲಿಯೂರು ಮಾತನಾಡಿ, ಶಾಲೆಯಿಂದಲೇ ಕನ್ನಡವನ್ನು ಸ್ಪಷ್ಟವಾಗಿ ಮಾತನಾಡುವುದನ್ನು ಮತ್ತು ಶುದ್ಧವಾಗಿ ಬರೆಯುವುದನ್ನು ಕಲಿಯಬೇಕು. ತಂದೆ ತಾಯಿಯೊಂದಿಗೆ ಮಾತೃಭಾಷೆಯಲ್ಲಿಯೇ ಮಾತನಾಡಿ, ತಂದೆ–ತಾಯಿಗೆ, ಸ್ನೇಹಿತರಿಗೆ, ಸಂಬಂಧಿಕರಿಗೆ ಇಂಗ್ಲಿಷ್ ಪದಗಳನ್ನು ಬಳಸದೆ, ಕಲುಷಿತವಿಲ್ಲದ ಶುದ್ಧ ಕನ್ನಡದಲ್ಲಿಯೇ ಪತ್ರವನ್ನು ಬರೆಯುವುದನ್ನು ಅಭ್ಯಾಸ ಮಾಡಿ. ಕನ್ನಡವನ್ನು ಉಳಿಸಿ, ಬೆಳೆಸಿ ಎಂದು ಮಕ್ಕಳಿಗೆ ತಿಳಿಹೇಳಿದರು. ಕನ್ನಡದ ಒತ್ತಕ್ಷರಗಳಿಂದ ಕನ್ನಡ ಅಂಕಿಗಳು ಸೃಷ್ಟಿಯಾಗಿದೆ ಎಂಬುದನ್ನು ತಿಳಿಸಿಕೊಟ್ಟರು.


ಕಾರ್ಯದರ್ಶಿ ಸವಿತಾ ಪ.ಮಲ್ಲೇಶ್, ಪ್ರೊ.ಹೆಚ್.ಜಿ.ಕೃಷ್ಣಪ್ಪ, ಕಾಲೇಜಿನ ಪ್ರಾಂಶುಪಾಲರಾದ ಮಮತಾ, ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಶೀಲಾ ಮತ್ತು ಸೌಮ್ಯಶ್ರೀ ಕಾಲೇಜಿನ ಉಪನ್ಯಾಸಕರು, ಶಿಕ್ಷಕರು ಮತ್ತು ಮಕ್ಕಳು ಉಪಸ್ಥಿತರಿದ್ದರು.

ಸುಬ್ಬಲಕ್ಷ್ಮಮ್ಮ ನಿಧನ



ಮೈಸೂರು, ನ.2–ಮೈಸೂರಿನ ರಾಮಕೃಷ್ಣನಗರ ನಿವಾಸಿ ದಿವಂಗತ ಶೀಳನೇರೆ ಗುಂಡಪ್ಪ ಅವರ ಪತ್ನಿ ಶ್ರೀಮತಿ ಸುಬ್ಬಲಕ್ಷ್ಮಮ್ಮ (87) ಗುರುವಾರ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಬೆಳಗ್ಗೆ 10 ಗಂಟೆಗೆ ಕೆ.ಜಿ.ಕೊಪ್ಪಲಿನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜೋಯ್ ಅಲುಕ್ಕಾಸ್ ಆತ್ಮಚರಿತ್ರೆ ನ.5ರಂದು ಕಾಜಲ್‌ರಿಂದ ಬಿಡುಗಡೆ



ದುಬೈ, ನ.2– ಜೋಯ್ ಅಲುಕ್ಕಾಸ್ ಸಮೂಹದ ದೃಷ್ಟಾರ ಮತ್ತು ಉದ್ಯಮಿ ಜೋಯ್ ಅಲುಕ್ಕಾಸ್ ಅವರ 'ಸ್ಪ್ರೆಡಿಂಗ್ ಜಾಯ್–ಹೌ ಜೋಯ್ ಅಲುಕ್ಕಾಸ್ ಬಿ ಕೇಮ್ ದಿ ವರ್ಲ್ಡ್ ಫೇವರೀಟ್ ಜ್ಯುವೆಲ್ಲರ್' ಆತ್ಮಚರಿತ್ರೆಯನ್ನು ಬಾಲಿವುಡ್ ಖ್ಯಾತ ನಟಿ ಕಾಜೋಲ್ ದೇವಗನ್ ನ.5ರಂದು ಬಿಡುಗಡೆ ಮಾಡಲಿದ್ದಾರೆ.

ದುಬೈನ ಶಾರ್ಜಾ ಇಂಟರ್‌ನ್ಯಾಷನಲ್ ಬುಕ್‌ಫೇರ್‌ನಲ್ಲಿ ಕೃತಿ ಬಿಡುಗಡೆಯಾಗಲಿದ್ದು, ಜೋಯ್ ಅಲುಕ್ಕಾಸ್ ಆತ್ಮಚರಿತ್ರೆಯು ನಾಯಕತ್ವ, ಬ್ರಾಂಡ್ ನಿರ್ಮಾಣ, ಸ್ಪಷ್ಟ ಗುರಿಯೆಡೆಗೆ ಸಾಗುವ ಒಳನೋಟಗಳನ್ನು ಒಳಗೊಂಡಿದೆ.

ಪ್ರಕಾಶಕ ಹಾರ್ಪರ್ ಕಾಲಿನ್ಸ್ ಪ್ರಕಟಿಸಿದ ಈ ಕೃತಿಯು ಮಲಯಾಳಂ ಮತ್ತು ಅರೇಬಿಕ್ ಭಾಷೆಗಳಿಗೆ ಅನುವಾದವಾಗುತ್ತಿದೆ. ಈಗಾಗಲೇ ಈ ಕೃತಿಯೂ ಸಾಹಿತ್ಯ ಮತ್ತು ಉದ್ಯಮ ವಲಯದಲ್ಲಿ ಸಂಚಲನ ಸೃಷ್ಟಿಸಿದ್ದು, ಅಮೆಜಾನ್ ಯುಎಇ, ಭಾರತ, ಯುಕೆ, ಯುಎಸ್‌ಎ ಸೇರಿದಂತೆ ಪ್ರಮುಖ ಇ–ಕಾಮರ್ಸ್ ಪೋರ್ಟಲ್‌ಗಳಲ್ಲಿ ಲಭ್ಯವಿದೆ.

ತಮ್ಮ ಆತ್ಮಚರಿತ್ರೆ ಕುರಿತು ಮಾತನಾಡಿರುವ ಜೋಯ್ ಅಲುಕ್ಕಾಸ್, ನಮ್ಮ ಬ್ರ್ಯಾಂಡ್ ಜೋಯ್ ಅಲುಕ್ಕಾಸ್‌ನ ಯಶಸ್ಸಿನ ಕಥೆ ರಾತ್ರೋ ರಾತ್ರಿ ಹುಟ್ಟಿಕೊಂಡಿದ್ದಲ್ಲ. ನನ್ನ ತಂದೆ ಅಲುಕ್ಕಾ ಜೋಸೆಫ್ ವರ್ಗೀಸ್ ಅವರು, 1956ರಲ್ಲಿ ಹುಟ್ಟುಹಾಕಿದ ಪರಂಪರೆ ಈ ವರ್ಷ ಯುಎಇಯಲ್ಲಿ ಉತ್ತಮ ಪ್ರಭಾವವನ್ನು ಮೂಡಿಸುವುದಕ್ಕೆ ಆರಂಭಿಸಿದೆ. ನಾವು ನಮ್ಮ ಗ್ರಾಹಕರು ಮತ್ತು ಉದ್ಯಮ ವಲಯದಿಂದ ಅಪಾರ ಪ್ರೀತಿ, ವಿಶ್ವಾಸ, ಮನ್ನಣೆ ಹಾಗೂ ಮೆಚ್ಚುಗೆಯನ್ನು ಪಡೆದಿದ್ದೇವೆ. ನಿರಂತರ ಪ್ರಯತ್ನದ ಫಲವಾಗಿ ನಾವು ಯಶಸ್ಸು ಮತ್ತು ಪ್ರಗತಿ ಸಾಧಿಸಿದ್ದೇವೆ. ನನ್ನ ಆತ್ಮಕಥೆ 'ಸ್ಪ್ರೆಡಿಂಗ್ ಜಾಯೋ' ಅನ್ನು ನನ್ನ ತಂದೆಗೆ ಅರ್ಪಿಸುತ್ತೇನೆ ಎಂದಿದ್ದಾರೆ.

ಯುಎಇ ವಿದೇಶಾಂಗ ವ್ಯಾಪಾರದ ರಾಜ್ಯ ಸಚಿವ ಥನಿ ಅಹ್ಮದ್ ಅಲ್ ಝೆಯೌದಿ ಮಾತನಾಡಿ, ಯುನೈಟೆಡ್ ಅರಬ್ ಎಮಿರೇಟ್ಸ್ ಅನ್ನು ರೂಪಿಸುವಲ್ಲಿ ಅವಿರತವಾಗಿ ಶ್ರಮಿಸಿದ ವ್ಯಕ್ತಿಗಳಲ್ಲಿ ಜೋಯ್ ಅಲುಕ್ಕಾಸ್ ಕೂಡ ಒಬ್ಬರಾಗಿದ್ದಾರೆ. ಅವರ ದೂರದೃಷ್ಟಿ ಮತ್ತು ನಾಯಕತ್ವವು ಜೋಯ್ ಅಲುಕ್ಕಾಸ್ ಅನ್ನು ಒಂದು ಬ್ರ್ಯಾಂಡ್ ಆಗಿ ರೂಪಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಾತಿಗಣತಿ ಸಂಬಂಧ ಒಕ್ಕಲಿಗ ಸಮುದಾಯದ ಮಹತ್ವದ ಸಭೆ

ಬೆಂಗಳೂರು, ನ.2– ಜಾತಿಗಣತಿ ವರದಿ ಸ್ವೀಕಾರ ಸಂಬಂಧ ಗುರುವಾರ ಒಕ್ಕಲಿಗ ಸಮುದಾಯದ ಮುಖಂಡರ ಸಭೆ ಬೆಂಗಳೂರಿನ ಕಿಮ್ಸ್ ಆವರಣದಲ್ಲಿ ನಡೆಯಿತು.

ಸಭೆಯಲ್ಲಿ ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಸಚಿವರು, ಶಾಸಕರು, ಸಮುದಾಯದ ಮುಖಂಡರು ಪಾಲ್ಗೊಂಡಿದ್ದರು.

ಈ ಸಭೆಯಲ್ಲಿ ವರದಿ ಸ್ವೀಕಾರಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಲಾಯಿತು. ಕಾಂತರಾಜ ವರದಿ ಜಾರಿ ಮಾಡುವ ಬಗ್ಗೆ ಸರ್ಕಾರ ತಯಾರಿ ನಡೆಸಿದೆ. ಈ ಮೂಲಕ ಸರ್ಕಾರಕ್ಕೆ ಸೌಜನ್ಯಯುತ ಮನವಿ ಮಾಡುತ್ತೇವೆ. ನಮಗೆ ನ್ಯಾಯಯುತವಾಗಿ ಸಿಗಬೇಕಾದ ಮೀಸಲಾತಿ ಕೇಳುತ್ತಿದ್ದೇವೆ ಎಂದು ಆದಿಚುಂಚನಗಿರಿ ಶ್ರೀಗಳು ತಿಳಿಸಿದ್ದಾರೆ.

ನಾವೆಲ್ಲ ಒಟ್ಟಾಗಿ ರಾಜ್ಯದ ಮೂಲೆ ಮೂಲೆಗಳಿಂದ ಇಲ್ಲಿ ಸೇರಿದ್ದೇವೆ. ಕಾಂತರಾಜ ವರದಿ ಅನುಷ್ಠಾನ ಮಾಡುವ ಮುನ್ನ ನಮ್ಮ ಅಭಿಪ್ರಾಯ ಕೇಳಿ ಎಂದು ಹೇಳಿದ್ದೇವೆ. ಸಮುದಾಯದ ಮೀಸಲಾತಿ ವಿಚಾರ ಸಹ ಸ್ಪಷ್ಟ ನಿಲುವು ಎಂದು ಹೇಳಿದ್ದೇವೆ. ನಾಲ್ಕರಿಂದ ಶೇ.16ರ ಮೀಸಲಾತಿ ಏರಿಕೆ ಮಾಡಬೇಕು ಎಂಬುದು ನಮ್ಮ ಆಗ್ರಹ. ಮುಂದಿನ ದಿನಗಳಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಮುಂದೆ ಬರುತ್ತೇವೆ. ಈ ವಿಷಯದಲ್ಲಿ ಯಾವುದೇ ಗೊಂದಲವಿಲ್ಲ ಎಂದು ನಂಜಾವಧೂತ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

> ಇದೇ ವೇಳೆ ಐದು ವರ್ಷ ನಾವೇ ಮುಖ್ಯಮಂತ್ರಿ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಖಡಕ್ ಪ್ರತಿಕ್ರಿಯೆ ನೀಡಿದ್ದಾರೆ. ಯಾರ‍್ಯಾರು ಏನ್ ಮಾತಾಡಿದ್ರೂ ಕೇಳಿಸಿಕೊಂಡು ಹೋಗ್ತೀವಿ. ಮಾತನಾಡುವವರು ಮಾತನಾಡಲಿ. ಪಾರ್ಟಿ ಏನ್ ಹೇಳುತ್ತದೋ ಅದನ್ನು ಕೇಳಿಕೊಂಡು ಹೋಗುವುದಷ್ಟೇ ಗೊತ್ತು. ಅದನ್ನು ಬಿಟ್ಟು ಬೇರೆ ಗೊತ್ತಿಲ್ಲ.

ಪರಿಹಾರಕ್ಕೆ ಆಗ್ರಹಿಸಿ ಕೆ.ಆರ್.ಮಿಲ್ ಮಾಜಿ ಕಾರ್ಮಿಕರ ಪ್ರತಿಭಟನೆ



ಮೈಸೂರು,ನ.2(ಜಿಎ)–ಮೈಸೂರಿನ ಶ್ರೀಕೃಷ್ಣ ರಾಜೇಂದ್ರ ಮಿಲ್ಸ್ ಕಾರ್ಮಿಕರ ಪರಿಹಾರ ಬರುವ ವಿಚಾರದಲ್ಲಿ ವಿಳಂಬ ಮಾಡುವ ಉದ್ದೇಶದಿಂದ ಅಟ್ಲಾಂಟಿಕ್ ಸ್ಪಿನಿಂಗ್ ಮಿಲ್ ಮತ್ತೆ ಪ್ರಕರಣ ದಾಖಲಿಸಿರುವುದನ್ನು ಖಂಡಿಸಿ ಶ್ರೀಕೃಷ್ಣರಾಜೇಂದ್ರ ಮಿಲ್ಸ್ ಮಾಜಿ ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಸಾರ್ವಜನಿಕರಿಗೆ ಉದ್ಯೋಗ ಸೃಷ್ಟಿಸುವವ ನಿಟ್ಟಿನಲ್ಲಿ 1928ರಲ್ಲಿ ಶ್ರೀಕೃಷ್ಣರಾಜೇಂದ್ರ ಒಡೆಯರ್ ಶ್ರೀಕೃಷ್ಣರಾಜೇಂದ್ರ ಮಿಲ್ಸ್ ಸ್ಥಾಪಿಸಿದರು. ಮಹಾತ್ಮ ಗಾಂಧೀಜಿ ಭೇಟಿ ನೀಡಿದ ಇತಿಹಾಸ ಹೊಂದಿರುವ ಕಾರ್ಖಾನೆ ಹಲವಾರು ಕಾರಣದಿಂದಾಗಿ 1984ರಲ್ಲಿ ಮುಚ್ಚಲ್ಪಟಿತು ಅಂದಿನಿಂದ ಇಂದಿನವರೆಗೂ ಈ ಕಾರ್ಖಾನೆಯಲ್ಲಿ ದುಡಿದ ಕಾರ್ಮಿಕರುಗಳಿಗೆ ಯಾವುದೇ ಪರಿಹಾರ ದೊರೆತಿರುವುದಿಲ್ಲ.

ಸರ್ಕಾರದ ಮಧ್ಯಸ್ಥಿಕೆಯಲ್ಲಿ ಕೆಎಸ್‌ಐಐಡಿಸಿರವರ ನೇತೃತ್ವದಲ್ಲಿ 1994ರಲ್ಲಿ ಅಟ್ಲಾಂಟಿಕ್ ಸ್ಪಿನ್ನಿಂಗ್‌ರವರಿಗೆ 7.10 ಕೋಟಿ ರೂ.ಗಳಿಗೆ 3 ತಿಂಗಳಿನಲ್ಲಿ ಕಾರ್ಖಾನೆಯನ್ನು ಪುನರಾರಂಭಿಸಿ ಕಾರ್ಮಿಕರಿಗೆ ಉದ್ಯೋಗ ನೀಡುವ ಷರತ್ತಿನ ಮೇಲೆ ಅಡಮಾನ ಮಾಡಲಾಯಿತು. ನಂತರ ಬೆಳವಣಿಗೆಯಲ್ಲಿ ಮತ್ತೆ ಕಾರ್ಮಿಕರಿಗೆ ಅನ್ಯಾಯ ಮಾಡಲಾಯಿತು. ಈ ಬಗ್ಗೆ ನ್ಯಾಯಾಲಯದ ಮೊರೆ ಹೋಗಲಾಗಿತ್ತು.

ಇದಾದ 25 ವರ್ಷಗಳ ನಂತರ ಕಳೆದ ಜುಲೈನಲ್ಲಿ ಲಿಕ್ವಿಡೇಟರ್ ಪರ ನ್ಯಾಯಾಲಯದಿಂದ ತೀರ್ಪು ಬಂದಿದೆ. ಕಾರ್ಖಾನೆಯವರು ಮತ್ತೆ ನ್ಯಾಯಾಲಯದ ಮೊರೆ ಹೋಗಿದ್ದಾರೆ. ನ್ಯಾಯಾಲಯದ ವಿಳಂಬವನ್ನು ಪರಿಗಣಿಸಿ ಈಗ ನೀಡಿರುವ ತೀರ್ಪನ್ನೇ ಅಂತಿಮಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಮಧ್ಯ ಪ್ರವೇಶಿಸಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಿದ್ದಲಿಂಗಪುರದ ಹಿರಿಯ ನಾಗರಿಕ ಕಾರ್ಮಿಕ ಒಕ್ಕೂಟ ಹಿರಿಯ ನಾಗರಿಕ ಒಕ್ಕೂಟದ ಎಚ್.ಆರ್.ನಾಗರಾಜು, ಶಂಕರ್‌ಮೂರ್ತಿ, ಸ್ವಾಮಿ ಎನ್, ರಘು.ಎಸ್.ವೈ, ಅಕ್ರಂ, ಚಂದ್ರಣ್ಣ, ಮಹದೇವು ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.11.2023 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಶ್ರೀ ಭೈರವೇಶ್ವರ ಶಾಲೆ ಮತ್ತು ಎಎಂಬಿ ಸಂಯುಕ್ತ ಪದವಿಪೂರ್ವ ಕಾಲೇಜು :** ರಜತ ಮಹೋತ್ಸವದ ಪ್ರಯುಕ್ತ ಭೈರವ ಖೋ ಖೋ ಪಂದ್ಯಾವಳಿ, ಅಧ್ಯಕ್ಷತೆ : ಅಣ್ಣಯ್ಯಪ್ಪ ಸ್ಮಾರಕ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ಎಸ್. ಜಗದೀಶ್, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ವಿದ್ಯಾಸಂಸ್ಥೆ ಕಾರ್ಯದರ್ಶಿ ಸುಬ್ಬೇಗೌಡ, ಸ್ಥಳ: ಎಎಂಇಎಸ್ ಕ್ರೀಡಾ ಆವರಣ, ಬೆಳಗ್ಗೆ 9ಕ್ಕೆ.

■ **ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂತ್ರಪಿಂಡ ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಸುಯೋಗ ಆಸ್ಪತ್ರೆ :** ಪ್ರಮಾಣ ವಚನ ಸ್ವೀಕಾರ ಸಮಾರಂಭ, ಮುಖ್ಯ ಅತಿಥಿಗಳು: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಡಾ.ರೇವತಿ ಕಾಮತ್, ಡಾ.ಎನ್.ಎಸ್.ರಾಮೇಗೌಡ, ಉಪಸ್ಥಿತರು: ಡಾ.ಎಸ್.ಪಿ.ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಆವರಣ, ರಾಮಕೃಷ್ಣನಗರ ಬೆಳಗ್ಗೆ 10ಕ್ಕೆ.

■ **ಇಂಡಿಯನ್ ಫಾರ್ಮಾಸ್ಯುಟಿಕಲ್ ಅಸೋಸಿಯೇಷನ್:** 62ನೇ ರಾಷ್ಟ್ರೀಯ ಫಾರ್ಮಸಿ ಸಪ್ತಾಹ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ತಮಿಳುನಾಡು ನಿವೃತ್ತ ಡ್ರಗ್ಸ್ ಕಂಟ್ರೋಲರ್ ಡಾ.ಜಿ.ಸೆಲ್ವರಾಜ್, ಮುಖ್ಯ ಅತಿಥಿಗಳು: ತಮಿಳು ಡ್ರಗ್ಸ್ ಕಂಟ್ರೋಲರ್ ಅಂಡ್ ಕಂಟ್ರೋಲಿಂಗ್ ಪ್ರಾಧಿಕಾರ ಜಂಟಿ ನಿರ್ದೇಶಕ ಎಂ.ಎನ್.ಶ್ರೀಧರ್, ಅಧ್ಯಕ್ಷತೆ: ಜೆಎಸ್‌ಎಸ್ ಫಾರ್ಮಸಿ ಕಾಲೇಜು ಪ್ರಾಧ್ಯಾಪಕ ಡಾ.ಪ್ರಮೋದ್‌ಕುಮಾರ್, ಗೌರವ ಅತಿಥಿಗಳು: ಡಾ.ಮಂಜುನಾಥ್, ಫಾರೂಕಿಯಾ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ.ನಿಸಾರ್ ಅಹಮದ್, ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನು ಮಂತಾಚಾರ್ ಜೋಷಿ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 10ಕ್ಕೆ.

■ **ಸಪ್ನ ಬುಕ್ ಹೌಸ್ :** 68ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ರಿಯಾಯಿತಿ ಕನ್ನಡ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಸಪ್ನ ಬುಕ್ ಹೌಸ್, ದೇವರಾಜ ಮೊಹಲ್ಲಾ, ಬೆಳಗ್ಗೆ 10 ರಿಂದ.

■ **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ :** ಅಂತರರಾಷ್ಟ್ರೀಯ ತೊದಲುವಿಕೆ ಜಾಗೃತಿ ದಿನ, ಮುಖ್ಯ ಅತಿಥಿಗಳು : ಡಿಡಿಪಿಐ ಹೆಚ್.ಕೆ. ಪಾಂಡು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ, ಸ್ಥಳ: ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಭುವನೇಶ್ವರಿ ಸೇವಾ ಟ್ರಸ್ಟ್ :** ಕನ್ನಡ ರಾಜ್ಯೋತ್ಸವ ಆಚರಣೆ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ನಗರ ಪಾಲಿಕೆ ಸದಸ್ಯರಾದ ಬಿ.ವಿ. ಮಂಜುನಾಥ್, ಮಾ.ವಿ. ರಾಮಪ್ರಸಾದ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಎನ್.ಎಂ. ನವೀನ್ ಕುಮಾರ್, ಸ್ಥಳ: ನವೋ ಯೋಗ ಭವನ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ದೈನಂದಿನ ಕಾರ್ಯಚಟುವಟಿಕೆಗಳ ಉದ್ಘಾಟನೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಮಾಜಿ ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮುಖ್ಯ ಅತಿಥಿಗಳು : ಆಯುರ್ವೇದ ಕಾಲೇಜು ಪ್ರಿನ್ಸಿಪಾಲ್ ಡಾ. ಗಜಾನನ ಹೆಗ್ಡೆ, ಪ್ರಾಂಶುಪಾಲರಾದ ಡಾ. ಎಂ.ಜಿ. ರಮಾನಂದ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ರಾಷ್ಟ್ರ ಭಾರತಿ ಚಾರಿಟೆಬಲ್ ಟ್ರಸ್ಟ್:** ಕನ್ನಡ ಹಬ್ಬ–2023, ತಾಯಿ ಭುವನೇಶ್ವರಿ ಶೋಭಾ ಯಾತ್ರೆ, ಬೆಳಗ್ಗೆ 10.30 ರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಂದ ಗಾಯನ ಸ್ಪರ್ಧೆ, ನಾಡಭಕ್ತಿ ಗೀತೆ, ಜಾನಪದ ಗೀತೆ, ಕವಿಗೋಷ್ಠಿ, ಸಂಜೆ 5.30 ರಿಂದ ಹಿರಿಯ ಕವಿ ಜಯಪ್ಪ ಹೊನ್ನಾಳಿ ಅವರಿಂದ ಕನ್ನಡ ನಾಡು, ನುಡಿ, ಪರಂಪರೆ ಕುರಿತು ಉಪನ್ಯಾಸ, ರಾತ್ರಿ 7 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಬೆಂಗಳೂರು ಯಕ್ಷಕಲಾ ಅಕಾಡೆಮಿ ಅವರಿಂದ ಯಕ್ಷಗಾನ, ಸ್ಥಳ:ಕಲಾಮಂದಿರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಡಾ. ಎಸ್.ವಿ. ನರಸಿಂಹನ್, ಪ್ರಸ್ತುತಿ– ಜಿ.ಶಾಂತಕುಮಾರ್, 6.40 ರೈತರಿಗೆ ಸಲಹೆ, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆಗಳು, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯ ಕ್ರಮ, 10.00 ಎಂ.ಎಸ್.ಗಿರೀಶ್ ಮತ್ತು ಸಂಗಡಿಗರು–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ನಿಲಯದ ಕಲಾವಿದರಿಂದ ವಾದ್ಯವೃಂದ, 4.00 ಮಹಿಳಾರಂಗ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ಕಿರಿ ಹಣ್ಣುಗಳ ಬೇಸಾಯ ಕುರಿತು ಡಾ.ಜಿ.ಎಸ್.ಕೆ.ಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 8.00 ವಿಜ್ಞಾನ ಭಾರತಿ–ವ್ಯೋಮ ವಿಜ್ಞಾನಕ್ಕೆ ಹೊಸ ಭಾಷೆ ಬರೆದ ಪ್ರಾಯೋಗಿಕ ಅವಕಾಶಗಳು ಕುರಿತು ಮಾತನಾಡುತ್ತಾರೆ ಎನ್.ಶಂಕರ್, 9.30 ಲಯವಿನ್ಯಾಸ, ಪ್ರಸ್ತುತಿ–ಟಿ.ವಿ.ಗೋಪಾಲಕೃಷ್ಣನ್, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವ ಗಾಯನ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 3 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 197 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹ 4

ಪವರ್‌ವಾರ್‌ಗೆ ಮತ್ತಷ್ಟು ಕಿಚ್ಚು ಹಚ್ಚಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ನಾನು ಈಗ ಮುಖ್ಯಮಂತ್ರಿ... ನಾನೇ ಮುಂದುವರೆಯುತ್ತೇನೆ...

■ ಇದರ ಬೆನ್ನ ಹಿಂದೆಯೇ ಸಹಕಾರ ಸಚಿವ ಕೆ.ಎನ್.ರಾಜಣ್ಣ ಪುನರುಚ್ಚಾರ
■ ಚಿಕ್ಕವರಿಂದ ದೊಡ್ಡವರವರೆಗೂ ವರಿಷ್ಠರ ಹೇಳಿಕೆ ಅನ್ವಯ: ರಾಮಲಿಂಗಾರೆಡ್ಡಿ

ಬೆಂಗಳೂರು, ನ.2(ಕೆಎಂಶಿ)– ರಾಜ್ಯದಲ್ಲಿ ಕೆಲ ದಿನಗಳಿಂದ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಆಡಳಿತ ಪಕ್ಷದಲ್ಲೇ ನಡೆಯುತ್ತಿದ್ದ ವಾಕ್ಸಮರ ಶಮನಗೊಳಿಸುವ ನಿಟ್ಟಿನಲ್ಲಿ ನಿನ್ನೆಯಷ್ಟೇ ಕಾಂಗ್ರೆಸ್ ಹೈಕಮಾಂಡ್ ಪ್ರತಿನಿಧಿಗಳಾಗಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್‌ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಆಗಮಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದ್ದರು.

ಅಲ್ಲದೆ, ಪತ್ರಿಕಾಗೋಷ್ಠಿಯಲ್ಲಿಯೂ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಯಾರೂ ಕೂಡ ಬಹಿರಂಗ ಹೇಳಿಕೆ ನೀಡಕೂಡದು. ಒಂದು ವೇಳೆ ನೀಡಿದ್ದಲ್ಲಿ, ಅಂತಹವರ ವಿರುದ್ಧ ಪಕ್ಷ ಶಿಸ್ತುಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಸಿದ್ದರು. ಇದಾದ ಕೆಲವೇ ಗಂಟೆಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಬಹಿರಂಗವಾಗಿ ಅಧಿಕಾರ ಹಂಚಿಕೆಯ ಸಂಬಂಧ ಖಡಕ್ಕಾಗಿ ಪ್ರತಿಕ್ರಿಯಿಸಿರುವುದು ರಾಜ್ಯ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎಂಬುದು ಬಹಿರಂಗವಾದಂತಾಗಿದೆ.

ಆಪರೇಷನ್ ಕಮಲಕ್ಕೂ ಮೊದಲು ಆಪರೇಷನ್ ಹಸ್ತ...!

● ನ.10ಕ್ಕೆ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್ ಸೇರಿ 10 ಶಾಸಕರು ರಾಜೀನಾಮೆ? ● ಕಾಂಗ್ರೆಸ್ ಉನ್ನತ ಮಂಡಳಿ ಮಾಹಿತಿ ● ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಪತನಕ್ಕೆ ಕಾರಣರಾದವರೇ ಮರಳಿ 'ಕೈ' ವಶ

ಬೆಂಗಳೂರು, ನ.2(ಕೆಎಂಶಿ)– ಆಪರೇಷನ್ ಕಮಲಕ್ಕೂ ಮುನ್ನವೇ ಆಪರೇಷನ್ ಹಸ್ತ ಮಾಡಲು ಕಾಂಗ್ರೆಸ್ ಮುಂದಾಗಿದೆ.

ಮಹಾರಾಷ್ಟ್ರ ಮಾದರಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪತನಗೊಳ್ಳಲಿದೆ ಎಂದು ಬಿಜೆಪಿ ಹಿರಿಯ ನಾಯಕ ಹಾಗೂ ಶಾಸಕ ರಮೇಶ್ ಜಾರಕಿಹೊಳಿ ಹೇಳಿಕೆ ನೀಡಿದ ಬೆನ್ನಲ್ಲೇ ಆಪರೇಷನ್ ಹಸ್ತ ಚುರುಕುಗೊಂಡಿದೆ.

ಮಾಜಿ ಸಚಿವರಾದ ಎಸ್.ಟಿ.ಸೋಮಶೇಖರ್, ಶಿವರಾಂ ಹೆಬ್ಬಾರ್ ಸೇರಿದಂತೆ 8 ಬಿಜೆಪಿ ಶಾಸಕರು ನವೆಂಬರ್ 10 ರಂದು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಲಿದ್ದಾರೆ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಸ್ಥಾನವನ್ನು ಕರ್ನಾಟಕದಿಂದ ಗೆಲ್ಲಲೇಬೇಕೆಂದು ಪಣತೊಟ್ಟಿರುವ ಕಾಂಗ್ರೆಸ್ ಮತ ಗಳಿಕೆ ಪ್ರಮಾಣ ಹೆಚ್ಚಿಸಿಕೊಳ್ಳಲು ಬಿಜೆಪಿ ಶಾಸಕರು ಮತ್ತು ಮುಖಂಡರನ್ನು ಸೆಳೆದುಕೊಳ್ಳುತ್ತಿದೆ. ಚುನಾವಣೆಯಲ್ಲಿ ಹೆಚ್ಚು ಮತ ಗಳಿಕೆ ತಂತ್ರ ಒಂದೆಡೆಯಾದರೆ ಮತ್ತೊಂದೆಡೆ ಆಪರೇಷನ್ ಕಮಲದಿಂದ ಪಕ್ಷ ಮತ್ತು ಸರ್ಕಾರಕ್ಕೆ ಹಿನ್ನಡೆಯಾಗಬಾರದೆಂಬ ಉದ್ದೇಶದಿಂದ ಪ್ರತಿಪಕ್ಷಗಳ ಸಂಖ್ಯಾಬಲವನ್ನು ಕುಗ್ಗಿಸುವ ಯತ್ನವೂ ಇದಾಗಿದೆ. ಜೆಡಿಎಸ್–ಕಾಂಗ್ರೆಸ್ ನೇತೃತ್ವದ ಎಚ್.ಡಿ.ಕುಮಾರಸ್ವಾಮಿ ಸರ್ಕಾರ ಪತನಗೊಳ್ಳಲು ಕಾರಣರಾದ ಅಂದಿನ ಕಾಂಗ್ರೆಸ್ ಶಾಸಕರೇ ಇಂದು ಬಿಜೆಪಿಯಿಂದ ಆಪರೇಷನ್ ಹಸ್ತಕ್ಕೆ ಒಳಗಾಗುತ್ತಿದ್ದಾರೆ.

ಶಾಸಕರ ಜೊತೆಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಅಂತರದಿಂದ ಪರಾಭವಗೊಂಡ ಜೆಡಿಎಸ್ ಮತ್ತು ಬಿಜೆಪಿಯ ಅಭ್ಯರ್ಥಿಗಳನ್ನು ಸೆಳೆದು, ಮತ ಪ್ರಮಾಣ ಹೆಚ್ಚಿಸಿಕೊಳ್ಳುವ ಕಾರ್ಯಕ್ಕೆ ಚಾಲನೆ ನೀಡಲಾಗುತ್ತಿದೆ. ತಮ್ಮ ಆಡಳಿತವಿರುವ ಸರ್ಕಾರದಲ್ಲಿ ಉಂಟಾಗಿರುವ ● 9ನೇ ಪುಟಕ್ಕೆ




ಇಂದು, ಪ್ರಸಕ್ತ ವಿಧಾನಸಭಾ ಅವಧಿಯ ಪೂರ್ತಿ ನಾನೇ ಮುಖ್ಯಮಂತ್ರಿಯಾಗಿರುತ್ತೇನೆ ಎಂದು ಸಿದ್ದರಾಮಯ್ಯ ಘೋಷಿಸಿಕೊಂಡಿದ್ದಾರೆ. ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ನಡುವೆ, ಅಧಿಕಾರ ಹಂಚಿಕೆ ವಿಷಯ ಮುನ್ನೆಲೆಗೆ ಬಂದಿರುವ ಹಿನ್ನೆಲೆಯಲ್ಲೇ ಮುಖ್ಯಮಂತ್ರಿ ಅವರೇ ಈ ಸ್ಪಷ್ಟನೆ ನೀಡಿದ್ದಾರೆ. ನಾನು ಈಗ ಮುಖ್ಯಮಂತ್ರಿ, ನಾನೇ ಮುಂದುವರೆಯುತ್ತೇನೆ ಎಂದು ಹೇಳುವ ಮೂಲಕ ಪವರ್‌ವಾರ್‌ಗೆ ಸಿದ್ದರಾಮಯ್ಯ ಮತ್ತಷ್ಟು ಕಿಚ್ಚು ಹೊತ್ತಿಸಿದ್ದರೆ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಕೂಡ, ಸಿದ್ದರಾಮಯ್ಯ ಅವರೇ ಪೂರ್ಣಾವಧಿಗೆ ಮುಖ್ಯಮಂತ್ರಿ ಎಂದು ಪುನರುಚ್ಚರಿಸಿದ್ದಾರೆ. ಈ ಮಧ್ಯೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವರಿಷ್ಠರು ಎಚ್ಚರಿಸಿದ್ದು, ಚಿಕ್ಕವರಿಂದ ಹಿಡಿದು ದೊಡ್ಡವರವರೆಗೂ ಅನ್ವಯಿಸುತ್ತದೆ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಅವರಿಗೆ ಎದಿರೇಟು ನೀಡಿದ್ದಾರೆ. ಅಲ್ಲದೇ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಈ ಸಲ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲೇಬೇಕು ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ.

ವಿಜಯನಗರ ಜಿಲ್ಲಾ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಅಧಿಕಾರ ಹಂಚಿಕೆ ಗೊಂದಲಕ್ಕೆ ತೆರೆ ಎಳೆದಿದ್ದಾರೆ. ಮುಖ್ಯಮಂತ್ರಿ ಹುದ್ದೆಯ ಬಗ್ಗೆ ಚರ್ಚೆ ಮಾಡುತ್ತಿರುವವರಿಗೆ ಕೆಲಸವಿಲ್ಲ, ಪೂರ್ಣಾವಧಿಗೆ ನಮ್ಮದೇ ಸರ್ಕಾರ, ನಾನೇ ಸಿಎಂ ಎಂದರು.

ರೈತರ ಬಗ್ಗೆ ಕಾಳಜಿ ಇದ್ದರೆ, ಬಿಜೆಪಿ ಸಂಸದರು ರಾಜ್ಯ ಸರ್ಕಾರವನ್ನು ಟೀಕಿಸುವ ಬದಲು ಕೇಂದ್ರದೊಂದಿಗೆ ಮಾತನಾಡಿ, ರಾಜ್ಯಕ್ಕೆ ಪರಿಹಾರಗಳನ್ನು ಬಿಡುಗಡೆಗೊಳಿಸಿದರೆ ಉತ್ತಮ. ಕೇಂದ್ರಕ್ಕೆ ಬರ ಪರಿಹಾರವಾಗಿ 17,900 ಕೋಟಿ ರೂ. ಕೋರಿ ಮನವಿ ಸಲ್ಲಿಸಲಾಗಿದೆ. ಪರಿಹಾರ ಮೊತ್ತವನ್ನು ಬಿಡುಗಡೆ ● 9ನೇ ಪುಟಕ್ಕೆ

ಕಾಂಗ್ರೆಸ್‌ನವರು ನಾಯಿ–ನರಿಗಳಂತೆ ಕಚ್ಚಾಡುತ್ತಿದ್ದಾರೆ...

● ಮೋದಿ ಬಗ್ಗೆ ಅನಗತ್ಯ ಟೀಕೆ ಮಾಡೋದು ಸಿದ್ದರಾಮಯ್ಯ ಚಾಳಿ
● ಈಗ ರಾಜ್ಯ ಸರ್ಕಾರ ಎಐಸಿಸಿಗೆ ಎಟಿಎಂ ಆಗಿದೆ: ಬಿಎಸ್‌ವೈ



ಬೆಂಗಳೂರು, ನ.2–ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಅಭಿವೃದ್ಧಿ ಸ್ಥಗಿತ ಆಗಿದೆ. ಉಚಿತ ವಿದ್ಯುತ್ ಕೊಡ್ತೀವಿ ಅಂತ ಹೇಳಿ ವಿದ್ಯುತ್ ದರ ಹೆಚ್ಚಿಸಿದ್ದಾರೆ. ಬರ ಪೀಡಿತ ಪ್ರದೇಶಗಳಿಗೆ ಮುಖ್ಯಮಂತ್ರಿಗಳು, ಸಚಿವರು ಹೋಗಿಲ್ಲ. ಶಾಸಕರಿಗೆ ಕೇವಲ 50 ಲಕ್ಷ ರೂಪಾಯಿ ಅನುದಾನ ಘೋಷಣೆ ಮಾಡಿದ್ದಾರೆ. ಪರಿಶಿಷ್ಟ ಜಾತಿ–ಪರಿಶಿಷ್ಟ ವರ್ಗ ನಿಗಮಗಳಿಗೆ ಹಣ ಕೊಟ್ಟಿಲ್ಲ ಎಂದು ಮಾಜಿ ಮುಖ್ಯಮಂತ್ರಿ, ಬಿಜೆಪಿ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಆರೋಪಗಳ ಸುರಿಮಳೆಗೈದಿದ್ದಾರೆ.

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕದ ಖರ್ಚು ರೈತನೇ ಭರಿಸಬೇಕು ಎಂಬ ಆದೇಶ ಹೊರಡಿಸಲು ಸರ್ಕಾರ ಹೊರಟಿದೆ. ಉಚಿತ ಬಸ್ ಹೊರತು ಸರ್ಕಾರದ ಬೇರೆ ಗ್ಯಾರಂಟಿ ಯೋಜನೆಗಳು ಸರಿಯಾಗಿ ಜಾರಿಗೆ ಬಂದಿಲ್ಲ. ಅರ್ಧದಷ್ಟು ಮಹಿಳೆಯರಿಗೆ ಗೃಹಲಕ್ಷ್ಮಿ ನಿಧಿ ಕೊಟ್ಟಿಲ್ಲ. ಇದು ಲೂಟಿ ಸರ್ಕಾರ, ಐಟಿ ದಾಳಿಯಿಂದ ಸರ್ಕಾರದ ಲೂಟಿ ಬಯಲಾಗಿದೆ ಎಂದು ಆರೋಪಿಸಿದರು.

ಬಣಗಳ ನಡುವಿನ ಜಗಳ

ಸಿದ್ದರಾಮಯ್ಯ–ಡಿಕೆಶಿ ಬಣಗಳ ನಡುವೆ ನಾಯಕತ್ವದ ಜಗ್ಗಾಟ ತಾರಕಕ್ಕೇರಿದೆ. ಮೊದಲಿಗಿಂತ ಹೆಚ್ಚು ವರ್ಗಾವಣೆ ದಂಧೆ ಮಿತಿಮೀರಿದೆ. ಡಿಸಿಎಂ ಕಟ್ಟಿ ಹಾಕಲು ಡಿನ್ನರ್ ಮೀಟಿಂಗ್ ಶುರುವಾಗಿದೆ.

ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿಯಿಲ್ಲ. ಬೆಳಗ್ಗೆ ಎದ್ದರೆ ನಾಯಿ–ನರಿಗಳಂತೆ ಕಚ್ಚಾಡುತ್ತಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾದರೂ ಮುಂದೆ ಹೋಗುತ್ತಿಲ್ಲ, ಸರ್ಕಾರದ ಚಕ್ರಗಳಲ್ಲಿ ಗಾಳಿ ಇಲ್ಲ, ಮುಖ್ಯಮಂತ್ರಿಗಳಿಗೆ ಸರ್ಕಾರದ ಮೇಲೆ ಹಿಡಿತ ಇಲ್ಲ. ಸಿದ್ದರಾಮಯ್ಯ ವಿಚಿತ್ರ ಪರಿಸ್ಥಿತಿಯಲ್ಲಿ ಇದ್ದಾರೆ ಎಂದು ಹೇಳಿದರು.

ಎಐಸಿಸಿಗೆ ಎಟಿಎಂ ಆಗಿದೆ

ಮಳೆ ಕೊರತೆ ಅರಿವಿದ್ದರೂ ಮುಂಜಾಗ್ರತಾ ಕ್ರಮ ವಹಿಸಲಿಲ್ಲ. ಭೀಕರ ಬರ ಪರಿಸ್ಥಿತಿ ಇದೆ. ಬರ ಪರಿಹಾರ ಕೊಡದೇ ಕೇಂದ್ರಕ್ಕೆ ಮೂದಲಿಸುವ ಕೆಲಸ ಮಾಡ್ತಿದ್ದಾರೆ. ಆಡಳಿತ ಯಂತ್ರ ಸರಿಪಡಿಸುವ ಬದಲು ವಿಪಕ್ಷಗಳ ಮೇಲೆ ಹರಿಹಾಯ್ತಿರೋದು ಪ್ರಜಾಪ್ರಭುತ್ವದ ಅಣಕ. ವೈಫಲ್ಯ ಮುಚ್ಚಿಕೊಳ್ಳಲು ● 9ನೇ ಪುಟಕ್ಕೆ

ಆಂಧ್ರದ ಚಿತ್ತೂರು ಬಳಿ ಕಾರು ಅಪಘಾತ

ತಿರುಪತಿಗೆ ತೆರಳಿದ ಮೈಸೂರಿನ ಮೂವರು ಮಹಿಳೆಯರು ಸಾವು

● ಚಾಲಕನಿಗೆ ಗಂಭೀರ ಗಾಯ
● ಚಿತ್ತೂರಿಗೆ ಸಂಬಂಧಿಕರ ದೌಡು

ಮೈಸೂರು, ನ.2–ತಿರುಪತಿಗೆ ಹೋಗಿ ಹಿಂತಿರುಗುತ್ತಿದ್ದ ವೇಳೆ ಕಾರು ಅಪಘಾತ ಸಂಭವಿಸಿ ಮೈಸೂರಿನ ಮೂವರು ಮಹಿಳೆಯರು ಮೃತಪಟ್ಟಿರುವ ದುರಂತ ಆಂಧ್ರ ಪ್ರದೇಶದ ಚಿತ್ತೂರು ಬಳಿ ಗುರುವಾರ ಮಧ್ಯಾಹ್ನ ಸಂಭವಿಸಿದೆ.

ರಾಮಕೃಷ್ಣನಗರ ಐ–ಬ್ಲಾಕ್ ನಿವಾಸಿಗಳಾದ ಜಯಲಕ್ಷ್ಮಿ, ಸುಜಾತ ಮತ್ತು ವೃಂದಾ ಅಪಘಾತದಲ್ಲಿ ಸಾವಿಗೀಡಾದವರಾಗಿದ್ದು, ಕಾರು ಚಾಲಕ ಶಿವಕುಮಾರ್ ತೀವ್ರವಾಗಿ ಗಾಯಗೊಂಡು ತುರ್ತು ಚಿಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ವರದಿಗಳು ತಿಳಿಸಿವೆ.



ಶಿವಕುಮಾರ್

ಒಂದು ಕುಟುಂಬದವರು ಹಾಗೂ ಸಂಬಂಧಿಕರು ಮೈಸೂರಿನಿಂದ ಬುಧವಾರ ತಮ್ಮದೇ ಕಾರಿನಲ್ಲಿ ತಿರುಪತಿಗೆ ತೆರಳಿದ್ದರು. ದೇವರ ದರ್ಶನ ಮುಗಿಸಿಕೊಂಡು ಇಂದು ಹಿಂತಿರುಗುತ್ತಿದ್ದ ವೇಳೆ ಚಿತ್ತೂರು ಬಳಿ ಅಪಘಾತ ಸಂಭವಿಸಿ ಮೂವರೂ ಮಹಿಳೆಯರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಚಿತ್ತೂರಿನ ವರದಿಗಳು ತಿಳಿಸಿದ್ದು, ಹೆಚ್ಚಿನ ವಿವರ ಲಭ್ಯವಾಗಿಲ್ಲ. ಚಿತ್ತೂರಿನ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನಾಳೆ (ಶುಕ್ರವಾರ) ಮೃತದೇಹಗಳನ್ನು ಮೈಸೂರಿಗೆ ತರಲಾಗುವುದು ಎಂದು ಮೂಲಗಳು ತಿಳಿಸಿವೆ.



ರಾಜ್ಯದಲ್ಲೂ ಕೇರಳದಲ್ಲಿ ಅಟ್ಟಹಾಸ ಮೆರೆಯುತ್ತಿರುವ ಝಿಕಾ ವೈರಸ್ ಹಾವಳಿ

● 30 ಮಹಿಳೆಯರೂ ಸೇರಿ 37 ಮಂದಿಯಲ್ಲಿ ತೀವ್ರ ಜ್ವರ
● ಇವರೆಲ್ಲರ ರಕ್ತರ ಮಾದರಿ ನಿಮಾನ್ಸ್‌ಗೆ; ಆರೋಗ್ಯ ಇಲಾಖೆ ಕಟ್ಟೆಚ್ಚರ



ಬೆಂಗಳೂರು, ನ.2(ಕೆಎಂಶಿ)–ನೆರೆಯ ಕೇರಳ ರಾಜ್ಯವನ್ನು ನಡುಗಿಸುತ್ತಿರುವ ಝಿಕಾ ವೈರಸ್ ಇದೀಗ ಕರ್ನಾಟಕಕ್ಕೂ ಪ್ರವೇಶಿಸಿದೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪದ ಚಿಕ್ಕಬಳ್ಳಾಪುರ ಜಿಲ್ಲೆಯ ಐದು ಗ್ರಾಮಗಳ ಸೊಳ್ಳೆಗಳಲ್ಲಿ ಈ ವೈರಸ್ ಪತ್ತೆಯಾಗಿದೆ.

ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ತಲಕಾಯಬೆಟ್ಟದ ಸೊಳ್ಳೆಗಳಲ್ಲಿ ಈ ವೈರಸ್ ಪತ್ತೆಯಾದ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಸಂದೇಶ ನೀಡಿದೆ.

ಮೂವತ್ತು ಗರ್ಭಿಣಿಯರೂ ಸೇರಿದಂತೆ 37 ಮಂದಿಯಲ್ಲಿ ತೀವ್ರ ಜ್ವರ ಕಾಣಿಸಿಕೊಂಡಿದ್ದು ಇವರೆಲ್ಲರ ರಕ್ತದ ಮಾದರಿಯನ್ನು ನಿಮಾನ್ಸ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ನಂತರ ಮನುಷ್ಯರಲ್ಲಿ ಝಿಕಾ ವೈರಸ್ ಹರಡಿದೆಯೇ ಎಂಬುದು ದೃಢವಾಗಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಸೊಳ್ಳೆಗಳಲ್ಲಿ ಈ ವೈರಸ್ ಹರಡಿರುವುದನ್ನು ದೃಢಪಡಿಸಿದ್ದು, ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳು ಜೊತೆಗೂಡಿ ಮುನ್ನೆಚ್ಚರಿಕಾ ಕ್ರಮ ● 9ನೇ ಪುಟಕ್ಕೆ

ಬಾಗಿಲು ತೆರೆದ ಹಾಸನಾಂಬ ದೇಗುಲ: ಭಕ್ತರಿಗೆ ಇಂದಿನಿಂದ ದರುಶನಕ್ಕೆ ಅವಕಾಶ

ಈ ಬಾರಿ ವೈಮಾನಿಕ ದರ್ಶನ ಭಾಗ್ಯ

ಹಾಸನ, ನ.2– ಐತಿಹಾಸಿಕ ಹಾಗೂ ಪವಾಡ ಸ್ವರೂಪಿಣಿಯಾದ ಹಾಸನ ಜಿಲ್ಲೆಯ ಪ್ರಸಿದ್ಧ ದೇಗುಲ ಹಾಸನಾಂಬೆಯ ದೇಗುಲ ಗುರುವಾರ ಸಾಂಪ್ರದಾಯಿಕವಾಗಿ ತೆರೆಯಲ್ಪಟ್ಟಿದ್ದು, ನಾಳೆ(ಶುಕ್ರವಾರ)ಯಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶವಿದೆ.

ಗುರುವಾರ ಮಧ್ಯಾಹ್ನ 12 ಗಂಟೆ 23 ನಿಮಿಷಕ್ಕೆ ದೇವಾಲಯದ ಬಾಗಿಲನ್ನು ತೆರೆಯಲಾಗಿದ್ದು, ಸಾರ್ವಜನಿಕರಿಗೆ ನ.3ರಿಂದ ನ.14ರವರೆಗೆ ದಿನದ 24 ಗಂಟೆಯೂ ದರ್ಶನಕ್ಕೆ ಅವಕಾಶ ಇರುತ್ತದೆ. ಇಂದು ಹಾಸನಾಂಬೆಯ ಗರ್ಭಗುಡಿ ಸ್ವಚ್ಛತೆ, ಪೂಜೆ, ನೈವೇದ್ಯ ಪ್ರಕ್ರಿಯೆಗಳಷ್ಟೇ ನಡೆದಿದೆ. ಶುಕ್ರವಾರ ಬೆಳಿಗ್ಗೆ 6 ಗಂಟೆಯಿಂದ ಹಾಸನಾಂಬಾ ದೇವಿಯ



ದರ್ಶನ ಪಡೆಯಲು ಅವಕಾಶವಿದೆ. ಹಾಸನಾಂಬೆಯ ದರ್ಶನೋತ್ಸವಕ್ಕೆ ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಜಿಲ್ಲಾಡಳಿತದಿಂದ ವಿಶೇಷ ಪ್ಯಾಕೇಜ್‌ಗಳನ್ನು ಆಯೋಜನೆ ಮಾಡಲಾಗಿದೆ.


ಇದೇ ಮೊದಲ ಬಾರಿಗೆ ದೇವಿಯ ದರ್ಶನದ ಜೊತೆ ಜೊತೆಯಲ್ಲೇ ಹಲವು ರೀತಿಯ ಹೊಸ ಪ್ರಯೋಗ, ನವ ವಿಧಾನ ಅಳವಡಿಸಲಾಗುತ್ತಿದೆ. ವಿವಿಧೆಡೆಗಳಿಂದ ಬರುವ ಭಕ್ತರು, ಪ್ರವಾಸಿಗರಿಗೆ ಹಾಸನಾಂಬೆ ದರ್ಶನ ಮಾಡಿಸುವುದರ ಜೊತೆಗೆ ಅವರಿಗೆ ಹಾಸನ ಜಿಲ್ಲೆಯ ಐತಿಹಾಸಿಕ ಮಹತ್ವ, ಪ್ರಾಕೃತಿಕ ಸೊಬಗು, ಶಿಲ್ಪಕಲೆ ಹಾಗೂ ಸಾಂಸ್ಕೃತಿಕ ವೈಭವ ಪರಿಚಯಿಸಲಾಗುತ್ತದೆ. ಅಲ್ಲದೆ, ಮನರಂಜನೆ, ಮನೋಲ್ಲಾಸ ಉಣಬಡಿಸುವ ಯೋಜನೆಯನ್ನೂ ಹಾಕಿಕೊಳ್ಳಲಾಗಿದೆ. ● 9ನೇ ಪುಟಕ್ಕೆ

ಚಾಮುಂಡೇಶ್ವರಿ ಕ್ಷೇತ್ರದ 105 ಮಂದಿ ರೈತರಿಗೆ ಬಗರ್ ಹುಕುಂ ಸಾಗುವಳಿ ಭೂ ಮಂಜೂರಾತಿ ಹಕ್ಕುಪತ್ರ ವಿತರಣೆ

ಭೂಮಿ ಸಾಗುವಳಿ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗಿ: ಹೆಚ್‌ಸಿಎಂ, ಜಿಟಿಡಿ

ಮೈಸೂರು, ನ.2(ಎಂಕೆ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 105 ಮಂದಿ ರೈತರಿಗೆ ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಶಾಸಕ ಜಿ.ಟಿ. ದೇವೇಗೌಡ, ಬಗರ್ ಹುಕುಂ ಸಾಗುವಳಿ ಭೂ ಮಂಜೂರಾತಿ ಹಕ್ಕುಪತ್ರ ವಿತರಣೆ ಮಾಡಿದರು.

ಮೈಸೂರು ತಾಲೂಕು ಕಚೇರಿ ಎದುರು ಗುರುವಾರ ಚಾಮುಂಡೇಶ್ವರಿ ಕ್ಷೇತ್ರದ ಜಯಪುರ ಹೋಬಳಿ ವ್ಯಾಪ್ತಿಯ ಚಿಕ್ಕನಹಳ್ಳಿ, ನಾಗವಾಲ, ಬೊಮ್ಮೇನಹಳ್ಳಿ, ಯಲಚಹಳ್ಳಿ, ರಟ್ನಹಳ್ಳಿ, ದೊಡ್ಡ ಮಾರಗೌಡನಹಳ್ಳಿ, ಕಮರಹಳ್ಳಿ, ದಡದಕಲ್ಲಹಳ್ಳಿ, ಗುಂಗ್ರಾಲ್ ಛತ್ರ, ಕಲ್ಲೂರು ನಾಗನಹಳ್ಳಿ ಕಾವಲ್ ಹಾಗೂ ಕೆ.ಹೆಮ್ಮನಹಳ್ಳಿಯ 105 ಮಂದಿ ರೈತರಿಗೆ ಸಾಗುವಳಿ ಭೂ ಮಂಜೂರಾತಿ ಹಕ್ಕುಪತ್ರ ವಿತರಣೆ ಮಾಡಲಾಯಿತು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ಸಾಗುವಳಿ ಭೂ ಮಂಜೂರಾತಿ ಹಕ್ಕುಪತ್ರ ಪಡೆದ ರೈತರು



ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಸದುಪಯೋಗಪಡಿಸಿಕೊಂಡು ಸಾಗುವಳಿ ಮಾಡುವ ಮೂಲಕ ಆರ್ಥಿಕವಾಗಿ ಸಬಲರಾಗುವಂತೆ ಸಲಹೆ ನೀಡಿದರಲ್ಲದೆ, ಕೋ–ಆಪರೇಟಿವ್ ಬ್ಯಾಂಕ್ ಸ್ಥಾಪಿಸಿಕೊಂಡು ● 9ನೇ ಪುಟಕ್ಕೆ

ಅಭಿಮನ್ಯುವಿನಂತೆ ಗಟ್ಟಿಮುಟ್ಟು...!

ಸಿಎಂ ಬದಲಾವಣೆ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಐದು ವರ್ಷ ಕಾಂಗ್ರೆಸ್ ಸರ್ಕಾರ ಅಂಬಾರಿ ಹೊರುವ ಅಭಿಮನ್ಯುವಿನಂತೆ ಗಟ್ಟಿಮುಟ್ಟಾಗಿರುತ್ತೇ... ಸದ್ಯಕ್ಕೆ ಸಿಎಂ ಸ್ಥಾನದಲ್ಲಿ ಸಿದ್ದರಾಮಯ್ಯ ಅವರಿದ್ದಾರೆ. ಆದ್ದರಿಂದ ಚರ್ಚೆಯ ಅಗತ್ಯವಿಲ್ಲ ಎಂದರು.

ಸ್ವಾಮಿ ಸಿದ್ದರಾಮಯ್ಯರೇ ನಿಮ್ಮ ಖುರ್ಚಿ ಗಟ್ಟಿಯಾಗಿದೆ! ಜನರ ಕಷ್ಟಕ್ಕೆ ಸ್ಪಂದಿಸಿ...

● ಶಾಸಕ ಜಿ.ಟಿ.ದೇವೇಗೌಡರ ಮನವಿ ● ಕಾಂಗ್ರೆಸ್ ಅಧಿಕಾರಕ್ಕೆ ಬಂದಂದಿನಿಂದ ಏನು ಅಭಿವೃದ್ಧಿ ಕಾರ್ಯ ಆಗಿಲ್ಲ

ಮೈಸೂರು, ನ.2(ಎಂಕೆ)– ಸ್ವಾಮಿ ಸಿದ್ದರಾಮಯ್ಯ ಅವರೇ ನಿಮ್ಮ ಸಿಎಂ ಖುರ್ಚಿ ಗಟ್ಟಿಯಾಗಿದೆ. ಖುರ್ಚಿಗಾಗಿ ಕಿತ್ತಾಡುವುದನ್ನು ಬಿಟ್ಟು, ರಾಜ್ಯಕ್ಕೆ ಬರಗಾಲ ಬಂದಿದೆ. ಕುಡಿಯಲು ನೀರಿಲ್ಲ. ಬೆಳೆಗಳು ಒಣಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ದುಸ್ಥಿತಿ ನಿರ್ಮಾಣವಾಗಿದೆ. ದಯವಿಟ್ಟು ರಾಜ್ಯದ ಜನರ ಕಷ್ಟಕ್ಕೆ ಸ್ಪಂದಿಸಿ ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರೂ ಆದ ಮಾಜಿ ಸಚಿವ ಜಿ.ಟಿ.ದೇವೇಗೌಡ ಮನವಿ ಮಾಡಿದರು.

ಮೈಸೂರು ತಾಲೂಕು ಕಚೇರಿ ಎದುರು ಗುರುವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಶಾಸಕರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ವರ್ಷವೂ ಆಗಿಲ್ಲ. 135 ಸ್ಥಾನ ನೀಡಿ ಜನತೆ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಈಗಲೇ ಯಾಕೆ ಖುರ್ಚಿಗಾಗಿ ಕಿತ್ತಾಡುತ್ತಿದ್ದೀರಿ.. ರಾಜ್ಯದಲ್ಲಿ ಬರಗಾಲ ಆವರಿಸಿದ್ದು, ರೈತರ ಸಂಕಷ್ಟ ನೋಡಿ ಎಂಬುದೇ ನನ್ನ ಹಾಗೂ ನಮ್ಮ ಪಕ್ಷದ ಮನವಿ ಎಂದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಅಭಿವೃದ್ಧಿ ವಿಚಾರವಾಗಲೀ... ಮಳೆಯಿಲ್ಲದೆ ಎದುರಾಗಿರುವ ಬರಗಾಲ ಕುರಿತು ಆಯಾ ಭಾಗದಲ್ಲಿನ ಜಿಲ್ಲಾಧಿಕಾರಿಗಳು, ಕೃಷಿ ಅಧಿಕಾರಿಗಳೊಂದಿಗೆ ಮುಂಜಾಗ್ರತಾ ಕ್ರಮಗಳ ಕುರಿತು ಸಭೆ ಅಥವಾ ಚರ್ಚೆಗಳನ್ನಾಗಲಿ ಮಾಡಿಲ್ಲ. ಒಣಗುತ್ತಿರುವ ಬೆಳೆಗಳ ಬಗ್ಗೆ ವೀಕ್ಷಣೆ ಮಾಡಿಲ್ಲ. ಒಂದು ಲಕ್ಷ ಕೋಟಿ ರೂ.ನಷ್ಟು ಬೆಳೆ ನಷ್ಟವಾಗಿದೆ. ಕೇಂದ್ರ ಸರ್ಕಾರದಿಂದ ಸುಮಾರು 33 ಸಾವಿರ ಕೋಟಿ ರೂ. ಬರಬೇಕು ಎಂದು ಹೇಳುತ್ತಿದ್ದೀರಿ. ಬರೀ ಕೇಂದ್ರ ಸರ್ಕಾರಕ್ಕೆ ಬರ ಪರಿಹಾರ ನೀಡುವಂತೆ ಮನವಿ ಮಾಡಿದ್ದೇವೆ ಎನ್ನುತ್ತಿದ್ದೀರಿಯೇ ಹೊರತು ನೀವೇನು ಮಾಡಿದ್ದೀರಿ. ಇದುವರೆಗೂ ಬೆಳೆ ನಷ್ಟ ಪರಿಹಾರವೆಂದು ಒಂದು ರೂಪಾಯಿಯನ್ನೂ ಕೊಟ್ಟಿಲ್ಲವೇಕೆ? ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿದರು. ರಾತ್ರಿ ಹೊತ್ತು ಕರೆಂಟ್ ಕೊಟ್ಟರೆ ರೈತರು ಕಬ್ಬಿನ ಗದ್ದೆಯಲ್ಲಿ, ಭತದ ಗದ್ದೆಯಲ್ಲಿ ರಾತ್ರಿ ವೇಳೆ ಕೆಲಸ ಮಾಡಲು ಸಾಧ್ಯವೇ?

ಹಗಲೊತ್ತು 7 ಗಂಟೆಗಳ ಕಾಲ ಕರೆಂಟ್ ಕೊಡಲಾಗದ ಸರ್ಕಾರ ನಮಗೆ ಬೇಕಾ ಎಂದು ಜಿಟಿಡಿ ಕಿಡಿಕಾರಿದರು.

ಹಿಂದಾದಂತೆಯೇ ಮುಂದೆಯೂ...!

ಸಿದ್ದರಾಮಯ್ಯ ಅವರು ಈ ಹಿಂದೆ(2013) ಮುಖ್ಯಮಂತ್ರಿಯಾಗಿದ್ದಾಗಲೂ ಎದುರಾಗಿದ್ದ ಲೋಕಸಭಾ ಚುನಾವಣೆ ಬಳಿಕ ಸಿಎಂ ಬದಲಾವಣೆಯಾಗುತ್ತಾರೆ ಎಂಬ ಸುದ್ದಿ ಹರಿದಾಡಿತ್ತು. ಆದರೆ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ 5 ವರ್ಷ ಪೂರ್ಣಗೊಳಿಸಿದ್ದರು. ಈಗಲೂ ಅದೇ ರೀತಿ ಲೋಕಸಭಾ ಚುನಾವಣೆ ಎದುರಾಗಿದೆ. ಈಗಲೂ ಸಹ ಲೋಕಸಭಾ ಚುನಾವಣೆ ಬಳಿಕ ಸಿಎಂ ಬದಲಾಗುತ್ತಾರೆ ಎನ್ನಲಾಗುತ್ತಿದೆ. ಆದರೆ ಹಿಂದಾದಂತೆಯೇ ಮುಂದೆಯೂ ಆಗಲಿದೆ. ಇದಕ್ಕೆ ಕಾರಣ ಅವರಲ್ಲಿರುವ ಕಾನ್ಫಿಡೆಂಟ್. ಕಾನ್ಫಿಡೆಂಟ್ ಹಿಂದೆ ಅವರ ಶಾಸಕರ ಬೆಂಬಲವಿದೆ. ಹಾಗೆಯೇ ಡಿ.ಕೆ.ಶಿವಕುಮಾರ್ ಅವರು ಕೂಡ ನಾನು ಸಿಎಂ ಆಗುತ್ತೇನೆ ಎಂದು ಎಲ್ಲಿಯೂ ಹೇಳಿಲ್ಲದಿರುವುದು ಸಿದ್ದರಾಮಯ್ಯ ಅವರ ಕಾನ್ಫಿಡೆಂಟ್ ಹೆಚ್ಚಿಸಿದೆ ಎಂದು ಜಿಟಿಡಿ ಭವಿಷ್ಯ ನುಡಿದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಟಿವಿಯ ಉಪಯೋಗವೇನು ?
ವಿದ್ಯಾರ್ಥಿ : ಜಗಳ ಕಡಿಮೆಯಾಗಿದೆ.
ಮೇಷ್ಟ್ರು : ಹಾಗಂದ್ರೆ...?
ವಿದ್ಯಾರ್ಥಿ : ಟಿವಿ ಬರೋದಕ್ಕೆ ಮೊದಲು ನನ್ನ ಅಪ್ಪ-ಅಮ್ಮ ಜಗಳ ಆಡ್ತಾ ಇದ್ರು, ಟಿವಿ ಬಂದ ಮೇಲೆ ಅದನ್ನು ನೋಡ್ತಾ ಕೂತುಬಿಡುತ್ತಾರೆ. ಆದ್ದರಿಂದ ಜಗಳ ಕಡಿಮೆಯಾಗಿದೆ.

ಮೈಸೂರು ಮಿತ್ರ
ಶುಕ್ರವಾರ, 3 ನವೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಮಾನವನ ಘನತೆಯೆಂಬುದು ಶ್ರಮದಲ್ಲಿದೆ. –ವಿನೋಬಾ ಭಾವೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಡ್ಡ ಮನುಷ್ಯ ನೆಲಕ್ಕೆ ಭಾರ, ಅನ್ನಕ್ಕೂ ಭಾರ.

ನಿಮ್ಮ ಪತ್ರಗಳು

ಡಿ.ದೇವರಾಜ ಅರಸು ಕಾಲದ ಶಾಸನ ಶಿಲೆಗೆ ಪಾಲಿಕೆಯಿಂದ ದಿವ್ಯ ನಿರ್ಲಕ್ಷ್ಯ

ಮಾನ್ಯರೆ,



ಮೈಸೂರಿನ ಶೇಷಾದ್ರಿ ಐಯ್ಯರ್ ರಸ್ತೆ ಹಾಗೂ ಸಯ್ಯಾಜಿರಾವ್ ರಸ್ತೆ ಸೇರುವ ಅಂಚಿನಲ್ಲಿ ಸ್ಥಾಪಿಸಿರುವ ಶಿಲಾ ಶಾಸನದತ್ತ ನಗರ ಪಾಲಿಕೆಯ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದು ಕನ್ನಡ ರಾಜ್ಯೋತ್ಸವದಂದು ಇಲ್ಲಿ ಯಾವುದೇ ಕಾರ್ಯಕ್ರಮ ಮಾಡದೆಯೂ ಹಾಗೂ ನಗರದ ನಾನ ಫಲಕಗಳಲ್ಲಿ ಕನ್ನಡವನ್ನು ಅನುಷ್ಠಾನಕ್ಕೆ ತರದೆ ಇರುವುದು ನಿಜಕ್ಕೂ ಖಂಡನೀಯ.

ಈ ನಿರ್ಲಕ್ಷ್ಯ ಜಾಣ ಕುರುಡು ಪ್ರದರ್ಶನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಿಂದ ಕೂಡ ನಡೆದಿದೆ. ಕನ್ನಡ ಅನುಷ್ಠಾನಕ್ಕೆ ಯಾವುದೇ ಸಹಕಾರ ನೀಡದೆ ಕಚೇರಿಗೆ ಬಂದ್ಯಾ ಪುಟ್ಟ ಹೋದ್ಯಾ ಪುಟ್ಟ ಎಂಬಂತೆ ಹಾಜರಾಗಿ ಹೋಗುವುದು ಇವರಿಗೆ ಪರಿಪಾಠ. ಇಂತವರಿಂದ ಕನ್ನಡ ಉದ್ಧಾರದ ನಿರೀಕ್ಷೆ ಸಾಧ್ಯವೇ. ಕರ್ನಾಟಕ ಎಂದು ನಾಮಕರಣವಾಗಿ ಈ ಭಾರಿಯ ರಾಜ್ಯೋತ್ಸವಕ್ಕೆ 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಈ ಶಾಸನದ ಬಗ್ಗೆ ಗಮನ ಹರಿಸಬೇಕು.

ಶಾಸನದಲ್ಲಿ ಬರೆದ ಸಾಲುಗಳು ಈ ಕೆಳಕಂಡಂತೆ ಇದೆ.

ಋತವೊಂದೆ ಗೆಲ್ಲುವುದು ಅನೃತವಲ್ತು;
ಅಮೃತಮೆನೆ ವಿದ್ಯೆಯೆ; ಅವಿದ್ಯೆಯಲ್ತು;
ವಿಶ್ವಭಾರತಿ ಶರಣು , ಕಿರುತೀರ್ಥವಲ್ತು ! – ಶ್ರೀ
ಜೈ ! ಭಾರತ ಜನನಿಯ ತನುಜಾತೆ,
ಜಯ ಹೇ ಕರ್ನಾಟಕ ಮಾತೆ ! – ಕುವೆಂಪು

ಭಾರತದ ಸ್ವಾತಂತ್ರ್ಯ ಚಳವಳಿಯೊಡನೆಯೇ ಬೆಳೆದು ಬಂದ ರಾಷ್ಟ್ರೀಯ ಅಪೇಕ್ಷೆ, ಭಾಷಾನುಗುಣ, ಪ್ರಾಂತ್ಯ ರಚನೆ ಇದರ ಫಲವಾಗಿ 1956 ರ ನವೆಂಬರ್ 1 ರಂದು ವಿವಿಧ ಆಡಳಿತಗಳಲ್ಲಿ ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣಕ್ಕೆ ಕಾರಣವಾಯಿತು. ಈ ನಾಡಿಗೆ ಕರ್ನಾಟಕವೆಂದು ಹೆಸರಿಡಬೇಕೆಂಬುದೂ ನಾಡಿನ ಆಡಳಿತವೆಲ್ಲಾ ಕನ್ನಡದಲ್ಲಿಯೇ ನಡೆಯುವಂತಾಗಬೇಕೆಂಬುದೂ ಜನಮನ ಅಭಿಪ್ರಾಯವಾಗಿತ್ತು. ಇದನ್ನು ಈಡೇರಿಸಿದ ಕೀರ್ತಿ 1972 ರಿಂದ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಮೈಸೂರು ಜಿಲ್ಲೆ ಹುಣಸೂರು ತಾಲೂಕು ಕಲ್ಲಹಳ್ಳಿಯ ಡಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಅವರು 1923 ರ ನವೆಂಬರ್ 1 ರಿಂದ ನಾಡಿಗೆ ಕರ್ನಾಟಕವೆಂದು ಹೆಸರಾಗಲು 1973 ರ ನವೆಂಬರ್ 1 ರಿಂದ ಸರ್ಕಾರದ ಎಲ್ಲಾ ಹಂತಗಳಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ನಿರ್ಧರಿಸಿ ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯ ಶಕಪುರುಷ ಸಾಲಿಗೆ ಸೇರಿದ್ದಾರೆ.

–ಅರವಿಂದ್ ಶರ್ಮ, ಮೈಸೂರು

ವಿದ್ಯುತ್ ದುರುಪಯೋಗ..!

ಮಾನ್ಯರೆ,

ಕರ್ನಾಟಕವು ಕಗ್ಗತ್ತಲತ್ತ ಸಾಗುವ ಅಪಾಯ ಮುಂದಿದೆ. ಆದರೆ ನಮ್ಮ ಮನೆಯ ಬಳಿಯ ಬಾಡಿಗೆದಾರರೊಬ್ಬರು ರಾತ್ರಿಯೆಲ್ಲಾ ಮನೆ ಹೊರಗಿನ ವಿದ್ಯುತ್ ದೀಪವೊಂದನ್ನು ಆರಿಸದೇ ಮಲಗಿದ್ದರು. ಪಕ್ಕದ ಮನೆಯವರು ಏನ್ ಸಾರ್ ದೀಪ ರಾತ್ರಿಯೆಲ್ಲಾ ಉರಿಯುತ್ತಿತ್ತು ಎಂದಾಗ ಬಿಡಿ ಬಿಟ್ಟಿ ಅಲ್ವಾ ಎಂದು ಉದಾಸೀನ ತೋರಿದ್ದಲ್ಲದೇ ಹೇಳಿದ ಮೇಲೂ ದೀಪ ಆರಿಸದೇ ಹಾಗೇ ಎದ್ದು ಹೋದರು. ಇದಾದ ಹಲವು ಗಂಟೆ ಕಳೆದರೂ ಆತ ಮನೆ ಹೊರಗಿನ ದೀಪ ಆರಿಸದೇ ಇದ್ದರು. ಸರಕಾರದ ಉಚಿತ ವಿದ್ಯುತ್ ಕೊಡುಗೆಯನ್ನು ದುರುಪಯೋಗ ಮಾಡುವ ಇಂತಹ ಹಲವರಿಂದ ವಿದ್ಯುತ್ ಕೊರತೆ ಉಂಟಾಗುತ್ತಿದ್ದು, ಸರಕಾರದ ಉಚಿತ ಕೊಡುಗೆಯನ್ನು ದುರುಪಯೋಗ ಮಾಡಿಕೊಳ್ಳುವ ಉದಾಸೀನದ ಮಂದಿಗೇನೆನ್ನಬೇಕೋ ಗೊತ್ತಾಗುತ್ತಿಲ್ಲ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ನೀರಿನ ಪೈಪ್ ಸರಿಪಡಿಸಲು ಮನವಿ

ಮಾನ್ಯರೆ,

ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮದಿಂದ ಕಲ್ಕುಂದ ಗ್ರಾಮಕ್ಕೆ ಕುಡಿಯುವ ನೀರಿನ ಪೈಪ್ ಅಳವಡಿಸಲಾಗಿದ್ದು, ಈ ಪೈಪ್ ಒಡೆದು ನೀರು ಸೋರುತ್ತಿದೆ.ನಂಜನಗೂಡು ಮತ್ತು ನರಸೀಪುರ ಮುಖ್ಯ ರಸ್ತೆಯ ಬೆಳಗುಂದದ ಶ್ರೀ ವೀರಭದ್ರೇಶ್ವರ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ ರಸ್ತೆಯಲ್ಲೆಲ್ಲ ನೀರು ನಿಂತು ಪಾಚಿ ಕಟ್ಟಿ, ದೇವಸ್ಥಾನಕ್ಕೆ ಬರುವ ಭಕ್ತರಿಗೆ ತುಂಬಾ ಅನಾನುಕೂಲವಾಗಿದೆ. ದ್ವಿಚಕ್ರ ವಾಹನದಲ್ಲಿ ಬರುವವರು ಆಯತಪ್ಪಿ ಬಿದ್ದಿರುವ ಅನೇಕ ಘಟನೆಗಳು ವರದಿಯಾಗಿವೆ. ನೀರಿನ ಪೈಪ್ ಒಡೆದಿರುವ ಕಾರಣ ಈ ನೀರು ಕೂಡ ಅಲ್ಲೇ ನಿಂತು ದುರ್ವಾಸನೆ ಬರುತ್ತಿದೆ. ಸುಮಾರು ನಾಲ್ಕೈದು ತಿಂಗಳು ಕಳೆದಿದ್ದು, ಇದರ ಬಗ್ಗೆ ಸಂಬಂಧಪಟ್ಟವರಿಗೆ ತಿಳಿಸಿದರೂ ಏನು ಪ್ರಯೋಜನವಾಗಿಲ್ಲ, ಸಂಬಂಧಪಟ್ಟವರು ತುರ್ತಾಗಿ ಸ್ಪಂದಿಸಿ ಸಾರ್ವಜನಿಕರಿಗೆ ಮುಕ್ತವಾಗಿ ಸಂಚರಿಸಲು ಅನುಕೂಲ ಮಾಡಬೇಕೆಂದು ಮನವಿ.

–ಬೆಳಗುಂದ ಗ್ರಾಮಸ್ಥರು, ನಂಜನಗೂಡು ತಾ.

ಬರ ನಿರ್ವಹಣೆ ಆದ್ಯತೆ ನೀಡಬೇಕು

ಮಾನ್ಯರೆ,

ಪ್ರಸ್ತುತ ರಾಜ್ಯದಲ್ಲಿ ವಾಡಿಕೆಯಂತೆ ಮಳೆಯಾಗದ ಕಾರಣ, ಹಲವಾರು ತಾಲೂಕಿನಲ್ಲಿ ಬೆಳೆ ಹಾನಿ ಹೆಚ್ಚಾಗಿದೆ. ರಾಜ್ಯ ಸರ್ಕಾರ ಕೇಂದ್ರ ನೆರವಿನೊಂದಿಗೆ ಬರ ಪರಿಹಾರಕ್ಕೆ ವೇಗ ನೀಡಬೇಕಾಗಿದೆ. ರಾಜ್ಯದಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಒದಗಿಸಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ.ರಾಜ್ಯದಲ್ಲಿ 115 ಲಕ್ಷ ದನ ಕರುಗಳು, 155 ಲಕ್ಷ ಕುರಿ ಮೇಕೆಗಳಿದ್ದು, ರಾಜ್ಯದಲ್ಲಿ ಮೇವಿನ ಪ್ರಮಾಣ 150 ಲಕ್ಷ ಟನ್ ಲಭ್ಯವಿದೆ. ಇನ್ನೂ ಬೇಸಿಗೆ ಕಾಲ ಬರಲಿದ್ದು, ಮೇವಿನ ಕೊರತೆ ಯಾಗದಂತೆ ಮುನ್ನೆಚ್ಚರಿಕೆ ಕೈಗೊಳ್ಳುವ ಅವಶ್ಯಕತೆ ಇದೆ. ರಾಜ್ಯ ಸರ್ಕಾರ ಬರ ನಿರ್ವಹಣೆಗೆ ಹೆಚ್ಚು ಅದ್ಯತೆ ನೀಡಬೇಕೆಂದು ರಾಜ್ಯದ ಜನತೆಯ ಪರವಾಗಿ ಅಗ್ರಹಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಾರತೀಯ ಸಂಸ್ಕೃತಿಯ ಶ್ರೇಷ್ಠ ಉದಾಹರಣೆಯಾಗಿರುವ ಫಿಲಿಯೋಜಾ ದಂಪತಿಗಳು

ಡಾ.ಪಿಯರಿ ಸಿಲ್ವನ್ ಫಿಲಿಯೋಜಾ ಮತ್ತು ಡಾ.ವಸುಂಧರಾ ಫಿಲಿಯೋಜಾ ದಂಪತಿಗಳಿಗೆ ಶ್ರೀ ವನಮಾಲಿ ಸಂಸ್ಕೃತಿ ಸೇವಾ ಪ್ರಶಸ್ತಿಯನ್ನು ನೀಡಿ ಮೈಸೂರಿನ ಶ್ರೀವನಮಾಲಿ ಚಾರಿಟಬಲ್ ಟ್ರಸ್ಟ್ (ರಿ.) ನ.5ರ ಭಾನುವಾರ ಗಾನಭಾರತೀ ಶ್ರೀ ವೀಣೆ ಶೇಷಣ್ಣ ಭವನದಲ್ಲಿ ಸನ್ಮಾನಿಸುತ್ತಿದೆ. ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಲಿರುವ ಪ್ರಶಸ್ತಿ ಪ್ರದಾನ ಸಮಾರಂಭವು ಬೆಳಗ್ಗೆ 10.30ಕ್ಕೆ ಆರಂಭವಾಗಲಿದ್ದು, ಪ್ರಶಸ್ತಿ ಪುರಸ್ಕೃತರ ಕುರಿತು ಸಂಕ್ಷಿಪ್ತ ಪರಿಚಯವನ್ನು ಈ ಲೇಖನದಲ್ಲಿ ಕೊಡಲಾಗಿದೆ.

ಸಮುದ್ರದಷ್ಟು ವಿಶಾಲವಾದ ಜ್ಞಾನವನ್ನು ಸಂಪಾದಿಸಿ, ಹಿಮಾಲಯ ಪರ್ವತದಷ್ಟು ಉನ್ನತ ವಾದ ವಿಚಾರವನ್ನು ಪ್ರತಿಪಾದಿಸಿ, ಚಿನ್ನದ ಗಣಿಯಷ್ಟು ಆಳವಾದ ಸಂಶೋಧನೆಯನ್ನು ಮಾಡಿ, ಕೌಸ್ತುಭ ಮಣಿಯಷ್ಟು ಶುದ್ಧವಾದ ಸಿದ್ಧಾಂತಗಳನ್ನು ಲೋಕಕ್ಕೆ ಕೊಟ್ಟು ಅರುಂಧತೀ ವಸಿಷ್ಠರಷ್ಟು ಪವಿತ್ರವಾದ ಬದುಕನ್ನು ನಡೆಸುತ್ತಿರುವ ವಸುಂಧರಾ–ಪಿಯರಿ ಸಿಲ್ವೇನ್ ಫಿಲಿಯೋಜಾ ದಂಪತಿಗಳು ಭಾರತ ದೇಶದ ಸಂಸ್ಕೃತಿಯ ಶ್ರೇಷ್ಠ ಪ್ರತಿನಿಧಿಗಳು. ಇವರು ಫ್ರಾನ್ಸ್ ದೇಶದ ರಾಜಧಾನಿ ಪ್ಯಾರಿಸ್ ನಗರದಲ್ಲೂ ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರು ನಗರದಲ್ಲೂ ಎಲೆಮರೆಯ ಕಾಯಿಗಳಂತೆ ಜೀವಿಸುತ್ತಾ ವಿದ್ಯಾ ಕ್ಷೇತ್ರಕ್ಕೆ ಸಲ್ಲಿಸುತ್ತಿರುವ ಕೊಡುಗೆ ದೊಡ್ಡದು. ಅವರನ್ನು ಕಂಡಾಗ, ಅವರೊಡನೆ ಮಾತನಾಡಿದಾಗ, ಅವರ ಗ್ರಂಥಗಳನ್ನು ಓದಿದಾಗ ವೇದ ಕಾಲದ ಋಷಿಗಳನ್ನು ಸಂದ ರ್ಶಿಸಿದ ಭಾವನೆ ಹೃದಯದಲ್ಲಿ ಮೂಡುತ್ತದೆ.

ಪಿಯರಿ ಸಿಲ್ವೇನ್ ಫಿಲಿಯೋಜಾ (Pierre Sylvain Filliozat): ಇವರು ಫ್ರಾನ್ಸ್‌ನಲ್ಲಿ 1936ರಲ್ಲಿ ಜನಿಸಿ, ಈಗ ಎಂಭತ್ತೇಳನೆಯ ವರ್ಷದಲ್ಲಿ ಪರಿಪಕ್ವ ಪಾಂಡಿತ್ಯ ಪೂರ್ಣ ಸಾರ್ಥಕ ಬದುಕನ್ನು ನಡೆಸುತ್ತಿರುವ ಬಹು ಭಾಷಾ ನಿಪುಣ ಸಂಸ್ಕೃತ ವಿದ್ವಾಂಸರು. ವಿದ್ಯಾನಾಥನೆಂಬ ಅಲಂಕಾರಿಕನು ರಚಿಸಿದ್ದ **ಪ್ರತಾಪ್ ರುದ್ರ ಯಶೋ ಭೂಷಣ** ಎಂಬ ಶಾಸ್ತ್ರ ಗ್ರಂಥವನ್ನು ವಿವೇಚಿಸಿ ಇವರು ಬರೆದ ಮಹಾಪ್ರಬಂಧಕ್ಕೆ ಪ್ಯಾರಿಸ್ ವಿಶ್ವವಿದ್ಯಾನಿಲಯವು 1962ರಲ್ಲಿ ಡಾಕ್ಟೊರೇಟ್ (Ph.D) ಪದವಿಯನ್ನು ನೀಡಿತು. ಪಾಂಡಿಚೇರಿಯಲ್ಲಿರುವ ಫ್ರೆಂಚ್ ಪ್ರಾಚ್ಯ ವಿದ್ಯಾ ಸಂಸ್ಥೆಯಲ್ಲಿ ಸದಸ್ಯರಾಗಿ ಇವರು ಸಂಶೋಧನೆ ಮಾಡಿದರು.


1967ರಿಂದ 2004ರವರೆಗೆ ಫ್ರಾನ್ಸ್ ದೇಶದ ಸೊರ್ಬೋನ್ (Sorbonne) ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದರು. ಪಾಂಡಿಚೇರಿಯಲ್ಲೂ ಮೈಸೂರಿನಲ್ಲೂ ಇವರ ಮನೆಯೇ ಸಂಸ್ಕೃತ ಸರಸ್ವತಿಯ ನಿವಾಸವಾಗಿದೆ. ಪ್ರಾಚೀನ ತಾಳಪತ್ರಗಳ ಪರಿಶೋಧನೆ, ಶಿಲಾಶಾಸನಗಳ ಪಾಠ ನಿರ್ಧಾರ, ಅರ್ಥ ಪರಿಷ್ಕರಣೆ– ಇಂತಹ ವಿದ್ವತ್ಕಾರ್ಯಗಳು ಇವರ ಉಸಿರು. ಇವರೊಡನೆ ಮಾತನಾಡಿದಾಗ, ಇವರ ಉಪನ್ಯಾಸಗಳನ್ನು ಕೇಳಿದಾಗ ಗಂಗಾ ಸ್ನಾನವನ್ನು ಮಾಡಿ ಪಾವನರಾದಂತೆ ನನ್ನಂತಹ ಸಾಮಾನ್ಯರಿಗೂ ಭಾವನೆ ಬರುತ್ತದೆ.

ಪ್ರೊ.ಫಿಲಿಯೋಜಾ ಅವರಿಗೆ ಬಂದಿರುವ ಪ್ರಶಸ್ತಿಗಳು ಅನೇಕ. ದೆಹಲಿಯಲ್ಲಿರುವ ಲಾಲ್ ಬಹಾದ್ದೂರ್ ಶಾಸ್ತ್ರಿ ಸಂಸ್ಕೃತ ವಿದ್ಯಾಪೀಠ (ಈಗ ಇದು ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ವಾಗಿದೆ) 2013ರಲ್ಲಿ ಫಿಲಿಯೋಜಾ ಅವರಿಗೆ **ಮಹಾ ಮಹೋ ಪಾಧ್ಯಾಯ** ಎಂಬ ಪದವಿಯನ್ನಿತ್ತು ಗೌರವಿಸಿದೆ. 2014ರಲ್ಲಿ ಭಾರತದ ರಾಷ್ಟ್ರಪತಿಗಳು ಸನ್ಮಾನ ಪತ್ರ (Certificate of Honour)ವನ್ನು ಕೊಟ್ಟು ಪುರಸ್ಕರಿಸಿದ್ದಾರೆ. ಸಾಂಸ್ಕೃತಿಕ ಅಧ್ಯಯನಗಳ ಸಂವಿದ್ಯಾ ಸಂಸ್ಥೆ, ಪುಣೆ ಎಂಬ ವಿದ್ಯಾಲಯವು ಇವರನ್ನು ಗೌರವ ಸದಸ್ಯರಾಗಿ ಸ್ವೀಕರಿಸಿದೆ.

ಸಂಸ್ಕೃತ ವ್ಯಾಕರಣ ಶಾಸ್ತ್ರದ ಪಾಂಡಿತ್ಯದಲ್ಲಿ ಫಿಲಿಯೋಜಾ ಅವರಿಗೆ ಅವರೇ ಸಾಟಿ. ಪತಂಜಲಿ ಮಹರ್ಷಿಯು ಪಾಣಿನಿಯ ಸೂತ್ರಗಳಿಗೆ ಬರೆದಿರುವ ಮಹಾಭಾಷ್ಯ ಜಗತ್ಪ್ರಸಿದ್ಧ. ಮಹಾ ಭಾಷ್ಯಂ ವಾ ಪಾಠನೀಯಂ ಮಹಾರಾಜ್ಯಂ ವಾ ಪಾಲನೀಯಂ (ಮಹಾಭಾಷ್ಯವನ್ನು ಕಲಿಸಬೇಕು, ಅದು ಆಗದಿದ್ದರೆ ಮಹಾರಾಜ್ಯವ ನ್ನಾದರೂ ಆಳಬೇಕು) ಎಂಬ ಗಾದೆ ಲೋಕದಲ್ಲಿ ಪ್ರಸಿದ್ಧವಾಗಿದೆ. ಇದನ್ನು ವ್ಯಾಖ್ಯಾನಗಳ ಜೊತೆಯಲ್ಲಿ ಅನೇಕ ಸಂಪುಟಗಳಲ್ಲಿ ಪ್ರಕಟಿಸಿದ ಕೀರ್ತಿ ಫಿಲಿಯೋಜಾರಿಗೆ ಸಲ್ಲುತ್ತದೆ.

ಸಂಸ್ಕೃತದ ಶ್ರೇಷ್ಠ ಕವಿಯಾಗಿದ್ದ ನೀಲಕಂಠ ದೀಕ್ಷಿತನು ಕ್ರಿ.ಶ. ಹದಿನೇಳನೆಯ ಶತಮಾನದ ಪೂರ್ವಾರ್ಧದಲ್ಲಿ ಮಧುರೆಯ ದೊರೆಗಳಾಗಿದ್ದ ನಾಯಕರ ಮಂತ್ರಿಯಾಗಿದ್ದನೆಂದು ತಿಳಿದು ಬಂದಿದೆ. ಅವನು ಅನೇಕ ಶತಕಗಳನ್ನೂ ಲಘು ಕಾವ್ಯಗಳನ್ನೂ ರಚಿಸಿ ಪ್ರಖ್ಯಾತನಾಗಿದ್ದಾನೆ. ಅವುಗಳನ್ನೆಲ್ಲ ಸಂಗ್ರಹಿಸಿ, ಸಂಪಾದಿಸಿ, ಫ್ರೆಂಚ್ ಭಾಷೆಗೆ ಅನುವಾದಿಸಿ ಪ್ರೊ.ಫಿಲಿಯೋಜಾ ಪ್ರಕಟ ಪಡಿಸಿದ್ದಾರೆ. **ಕಲಿವಿಡಂಬನ ಶತಕ, ಸಭಾರಂಜನ ಶತಕ, ಅನ್ಯಾಪದೇಶ ಶತಕ** ಮುಂತಾದ ಗ್ರಂಥಗಳ ಅಧಿಕೃತ ಪಾಠವು ಈ ಮೂಲಕ ಸಂಸ್ಕೃತ ವಿದ್ವಾಂಸರಿಗೆ ಉಪಲಬ್ಧವಾಗಿದೆ.

ವೇದಾಂತ ದೇಶಿಕರ **ವರದರಾಜ ಪಂಚಾಶತ್** ಎಂಬ ಸ್ತೋತ್ರಗ್ರಂಥದ ಇಂಗ್ಲಿಷ್ ಅನುವಾದ ಮತ್ತು ವಿಮರ್ಶೆಯನ್ನು ಮಾಡಿ 1990ರಲ್ಲಿ ಪ್ರಕಟಿಸಿ ಸಂಸ್ಕೃತ ಜ್ಞರಿಗೆ ಉಪಕಾರ ಮಾಡಿದ್ದಾರೆ. ಹೀಗೆ ಪ್ರೊ ಫಿಲಿಯೋಜಾ ಅವರ ಗ್ರಂಥಗಳ ಮತ್ತು ಲೇಖನಗಳ ಮಾಲೆ ಬೆಳೆಯುತ್ತ ಹೋಗುತ್ತದೆ.



ಇಂದೂ ಅವರ ಅವಿರತ ದುಡಿಮೆ ಮುಂದುವರಿಯುತ್ತಿದೆ.

ಲಕ್ಷ್ಮೀನಾರಾಯಣರಂತೆ, ಪಾರ್ವತೀ ಪರ ಮೇಶ್ವರರಂತೆ ಅನುರೂಪ ದಂಪತಿಗಳು ವಸುಂಧರಾ–ಫಿಲಿಯೋಜಾ ಅವರು. ಪ್ರತಿಭೆಯಲ್ಲಿ, ಪಾಂಡಿತ್ಯದಲ್ಲಿ, ಪರಿಶ್ರಮದಲ್ಲಿ ಪಿಯರೆ ಫಿಲಿಯೋಜಾ ಅವರಿಗೆ ಸರಿ ಸಮನಾದವರು ವಸುಂಧರಾ. ವಿದ್ವತ್ತಿಗೆ, ಸಂಸ್ಕೃತಿಗೆ ಹೆಸರಾದ ಕವಲಿ ಕುಟುಂಬದ ಕುವರಿ ಅವರು. ಕನ್ನಡ, ಸಂಸ್ಕೃತ, ಫ್ರೆಂಚ್, ಇಂಗ್ಲೀಷ್ ಭಾಷೆಗಳಲ್ಲಿ ಅವರ ವಾಗ್ಮಿತ್ವ ಭಾರತದಲ್ಲಿ ಪದವಿಗಳನ್ನು ಗಳಿಸಿದ್ದಲ್ಲದೆ ಪ್ಯಾರಿಸ್ ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ. ಪದವಿಯನ್ನು ಪಡೆದವರು. ವಿಜಯನಗರ ಸಾಮ್ರಾಜ್ಯ ಎಂದು ನಾವು ಕರೆಯುವ, ಅಥವಾ ಹಾಗೆ ಜನಪ್ರಿಯವಾಗಿರುವ ಕರ್ನಾಟಕ ಸಾಮ್ರಾಜ್ಯ ಅವರ ಅಧ್ಯಯನದ ಮುಖ್ಯ ವಸ್ತು VIJAYA NAGAR ಎಂಬ ಪುಸ್ತಕ ವನ್ನು ಅವರು ಇಂಗ್ಲೀಷ್‌ನಲ್ಲೂ, **ಅಳಿದುಳಿದ ಹಂಪಿ** ಎಂಬ ಪುಸ್ತಕವನ್ನು ಕನ್ನಡದಲ್ಲೂ ಬರೆದು ಪ್ರಕಟಿಸಿದ್ದಾರೆ. ಈ ಪುಸ್ತಕಗಳಲ್ಲಿ ಅವರ ಐತಿಹಾಸಿಕ ಪ್ರಜ್ಞೆ ಮತ್ತು ಸಂಶೋಧನಾ ಚಾತುರ್ಯ ಅಭಿವ್ಯಕ್ತವಾಗುತ್ತದೆ. ವಿಜಯನಗರದ ಶತ್ರುಗಳು ತಾಳಿಕೋಟೆ ಯುದ್ಧದಲ್ಲಿ ಅದನ್ನು ಸಂಪೂರ್ಣವಾಗಿ ನಾಶ ಮಾಡಿದರು ಎಂದು ನಾವು ತಿಳಿದು ಕೊಂಡಿದ್ದೆವು. ಆದರೆ ಅದು ಸತ್ಯವಲ್ಲ ಎಂಬುದು ಡಾ.ವಸುಂಧರಾ ಫಿಲಿಯೋಜಾ ಅವರ ಗ್ರಂಥ ವನ್ನು ಓದಿದಾಗ ನಮಗೆ ಅರಿವಾಗುತ್ತದೆ.

"... The dispute for the throne between Sadashivaraya and Tirumala wrought further degradation in state of affairs. In a fit of fury, they set ablaze each other's palaces and abandoned the capital forever. Thus, the incomplete devastation work of enemies was completed by the Hindus themselves and the glorious capital, whose fame spread for and wide, remained at the mercy of ferocious beasts, reptiles, treasure seekers and brigands."

ಸಂಸ್ಕೃತ ಭಾಷೆಯಲ್ಲಿ ವಸುಂಧರಾ ಫಿಲಿಯೋಜಾ ಅವರಿಗೆ ಅತ್ಯಂತ ಪ್ರೀತಿ ಪ್ಯಾರಿಸ್‌ನಲ್ಲಿ ಪ್ರತಿ ವರ್ಷವೂ ಸಂಸ್ಕೃತೋತ್ಸವ ವೈಭವೋಪೇತವಾಗಿ ನಡೆಯುವಂತೆ ಮಾಡಿರುವುದು ಅವರ ಸಾಧನೆಗಳಲ್ಲಿ ಒಂದು. ಸಂಸ್ಕೃತ ನಾಟಕಗಳನ್ನು ಫ್ರೆಂಚ್ ಭಾಷೆಗೆ ಅನುವಾದಿಸಿ ಆ ಸಂದರ್ಭಗಳಲ್ಲಿ ಯುವಕರು ಅಭಿನಯಿಸುವಂತೆ ಉತ್ತೇಜನವನ್ನೂ ಅವರು ಕೊಡುತ್ತಾರೆ. ಪ್ರೊ.ಗೋಪಬಂಧು ಮಿಶ್ರ ಮುಂತಾದ ಪಂಡಿತ ದಿಗ್ಗಜರು ಆ ಸಂಸ್ಕೃತೋತ್ಸವಗಳಲ್ಲಿ ಭಾಗ ವಹಿಸುತ್ತಾರೆ. ಮೈಸೂರಿನ ಡಾ.ವಸುಂಧರಾ ದೊರೆಸ್ವಾಮಿ ಅವರ ನೃತ್ಯ ಪ್ರದರ್ಶನವೂ ಸಂಸ್ಕೃತೋತ್ಸವದ ಶೋಭೆಯನ್ನು ಅಧಿಕಗೊಳಿಸಿದ್ದನ್ನು ನಾನು ಕಂಡಿದ್ದೇನೆ.

ಪ್ರೊ. ಫಿಲಿಯೋಜಾ ಅವರಿಗೆ ಮೈಸೂರಿನಿಂದ ಪ್ರಕಟಿತವಾಗುವ ಸಂಸ್ಕೃತ ದಿನಪತ್ರಿಕೆ ಸುಧರ್ಮಾ ಅಚ್ಚುಮೆಚ್ಚು. ಅದರ ಏಳ್ಗೆಗಾಗಿ ಅವರು ಸಹಾಯಕವಾಗಿದ್ದಾರೆ. ತಾವೇ ಹಲವು ಲೇಖನಗಳನ್ನು ಬರೆದುಕೊಟ್ಟು ಪ್ರೋತ್ಸಾಹಿಸಿದ್ದಾರೆ.

ಪ್ರದಾನಂ ಪ್ರಚ್ಛನ್ನಂ ಗೃಹಮುಪಗತೇ ಸಂಭ್ರಮವಿಧಿಃ
ನಿರುತ್ಸೇಕೋ ಲಕ್ಷ್ಮ್ಯಾಂ ಅನಭಿಭವ ಗಂಧಾಃ ಪರಕಥಾಃ॥
ಪ್ರಿಯಂ ಕೃತ್ವಾ ಮೌನಂ ಸದಸಿ ಕಥನಂ ಚಾಪ್ಯುಪಕೃತೇಃ
ಸತಾಂ ಕೇನೋದ್ದಿಷ್ಟಂ ವಿಷಮ ಮಸಿಧಾರಾವ್ರತ ಮಿದಮ್॥

(ಜಗತ್ತಿಗೆ ತಿಳಿಯದಂತೆ ದಾನ ಮಾಡುವುದು, ಅತಿಥಿಗಳು ಮನೆಗೆ ಬಂದಾಗ ಸಂಭ್ರಮದಿಂದ ಸ್ವಾಗತಿಸುವುದು, ಲಕ್ಷ್ಮಿಯು ಪ್ರಸನ್ನಳಾದಾಗಲೂ ಗರ್ವ ಪಡದಿರುವುದು, ಬೇರೆಯವರ ಬಗೆಗೆ ಮಾತನಾಡುವಾಗ ಹಳಿಯದಿರುವುದು, ಉಪ ಕಾರವನ್ನು ಮಾಡಿ ಅದರ ಬಗೆಗೆ ಹೇಳಿಕೊಳ್ಳದೆ ಮೌನ ವಹಿಸುವುದು, ಬೇರೆಯವರು ತಮಗೆ ಮಾಡಿದ ಉಪಕಾರವನ್ನು ಸಭೆಯಲ್ಲಿ ಹೇಳು ವುದು– ಇದು ಸಜ್ಜನರಿಗೆ ಬ್ರಹ್ಮನು ವಿಧಿಸಿರುವ ಅಸಿಧಾರಾ ವ್ರತ) ಎಂಬ ಪದ್ಯವನ್ನು ಭರ್ತೃಹರಿ ಫಿಲಿಯೋಜಾ ದಂಪತಿಗಳನ್ನು ನೋಡಿ ರಚಿಸಿದನೇನೋ ಎನಿಸುತ್ತದೆ. ಇವರು ಭಾರತೀಯ ಸಂಸ್ಕೃತಿಯ ನಿಜಪ್ರತಿನಿಧಿಗಳು. ನೂರಾರು ಪ್ರಶಸ್ತಿಗಳನ್ನು ಪಡೆದಿದ್ದರೂ ಯಾವ ಹಮ್ಮು–ಬಿಮ್ಮುಗಳಿಲ್ಲದೆ ವಿನಯದ ಸಾಗರಗಳಂತಿರುವ ಈ ದಿವ್ಯ ದಂಪತಿಗಳಿಗೆ ನಮ್ಮ ನಮನ.

ಮೈಸೂರು ಮಹಾರಾಣಿ ವಿಜ್ಞಾನ ಕಾಲೇಜಲ್ಲಿ ಉಚಿತ ಊಟಕ್ಕೆ ಮರುಚಾಲನೆ

ಮೈಸೂರು, ನ2(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಉಚಿತ ಊಟ ಕಲ್ಪಿಸುವ ಸಂತೃಪ್ತಿ ಯೋಜನೆ ಮುಂದುವರೆಸಲಾಗಿದ್ದು, ಗುರುವಾರ ಮರುಚಾಲನೆ ದೊರೆತಿದೆ.

ಕಾಲೇಜು ಶಿಕ್ಷಣ ಇಲಾಖೆ ಮೈಸೂರು ವಲಯದ ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ.ಎ.ಎಚ್.ಎಂ ವಿಜಯಲಕ್ಷ್ಮಿ ವಿದ್ಯಾರ್ಥಿನಿಯರಿಗೆ ಮಧ್ಯಾಹ್ನ ಊಟ ಬಡಿಸುವ ಯೋಜನೆಗೆ ಚಾಲನೆ ನೀಡಿ ಈ ಸತ್ಕಾರ್ಯವನ್ನು ಪ್ರಶಂಸಿಸಿದರು. ವಿದ್ಯಾದಾನದ ಜತೆಗೆ ಅನ್ನ ದಾನ ಮಾಡುವುದು ಶ್ರೇಷ್ಠ ಕೆಲಸ. ಗ್ರಾಮೀಣ ಭಾಗದ ದೂರದ ಊರುಗಳಿಂದ ದಿನನಿತ್ಯ ಬರುವ ವಿದ್ಯಾರ್ಥಿನಿಯರಿಗೆ ಮಧ್ಯಾಹ್ನದ ಊಟ ತರುವುದು ಕಷ್ಟದ ಕೆಲಸ. ಅಂತಹವರಿಗೆ ಉಚಿತವಾಗಿ ಊಟ ಕಲ್ಪಿಸುತ್ತಿರುವುದು ಶ್ಲಾಘನೀಯ. ಇದಕ್ಕೆ ಕಾರಣೀಭೂತ ರಾದ ಎಲ್ಲಾ ಅಧ್ಯಾಪಕರು ಅಭಿನಂದನಾರ್ಹರು ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಅಬ್ದುಲ್ ರಹಿಮಾನ್ ಮಾತನಾಡಿ, ಅಗತ್ಯವಿರುವ ವಿದ್ಯಾರ್ಥಿನಿಯರು ಯಾವುದೇ ಹಿಂಜರಿಕೆ ಇಲ್ಲದೆ ಯೋಜನೆಯ ಸದುಪಯೋಗಪಡಿಸಿಕೊಂಡು ಚೆನ್ನಾಗಿ ವಿದ್ಯಾಭ್ಯಾಸ ಮಾಡಬೇಕು ಎಂದು ಕಿವಿಮಾತು ಹೇಳಿದರು. ಈ ವೇಳೆ ಯೋಜನೆಯ ಸಂಚಾಲಕರಾದ ಡಾ. ಪ್ರೀತಿ ಎನ್.ತಲ್ಲೂರ್, ಸಮಿತಿ ಸದಸ್ಯರಾದ ಸುಧಾ, ಉಪನ್ಯಾಸಕರು, ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

ಭಾಷೆಗಳು ಬೇರೆಯಾದರೂ ಭಾವ ಒಂದೇ ಇರುವ ಅದ್ಭುತ ಭೂಮಿ ಭಾರತ

ಕನ್ನಡ–ರಾಷ್ಟ್ರೀಯತೆ ಎರಡೂ ಬೇರೆಯಲ್ಲ

ಕನ್ನಡ ಹಬ್ಬದಲ್ಲಿ ಇತಿಹಾಸ ಚಿಂತಕ ರಘುನಂದನ್ ಅಭಿಮತ

ಮೈಸೂರು,ನ.2(ಪಿಎಂ)– ಭಾಷೆಗಳು ಬೇರೆಯಾದರೂ ಭಾವ ಒಂದೇ ಇರುವ ಅದ್ಭುತ ಭೂಮಿ ಭಾರತ. ಕನ್ನಡ ನಾಡು–ನುಡಿ ರಾಷ್ಟ್ರೀಯತೆಗೆ ಪೂರಕವಾಗಿದ್ದು, ಕನ್ನಡ ಮತ್ತು ರಾಷ್ಟ್ರೀಯತೆ ಎರಡೂ ಬೇರೆಯಲ್ಲ ಎಂದು ಮುಂಬೈನಲ್ಲಿ ನೆಲೆಸಿರುವ ಹಾಸನ ಮೂಲದವರಾದ ಇತಿಹಾಸ ಚಿಂತಕ ರಘುನಂದನ್ ಅಭಿಪ್ರಾಯಪಟ್ಟರು.

ಮೈಸೂರಿನ ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನ.6ರವರೆಗೆ ಹಮ್ಮಿಕೊಂಡಿರುವ 'ಕನ್ನಡ ಹಬ್ಬ–2023'ರ ಪ್ರಯುಕ್ತ ಗುರುವಾರ ಆಯೋಜಿಸಿದ್ದ ಕನ್ನಡ ಸಂವಾದದಲ್ಲಿ 'ರಾಷ್ಟ್ರೀಯತೆ ಬಲಗೊಳ್ಳುವಲ್ಲಿ ಕನ್ನಡದ ಪಾತ್ರ' ಕುರಿತು ಅವರು ವಿಚಾರ ಮಂಡಿಸಿದರು.

ಕನ್ನಡ ನಾಡು–ನುಡಿ ರಾಷ್ಟ್ರೀಯತೆಗೆ ಯಾವಾಗಲೂ ಪೂರಕವಾಗಿಯೇ ಇರುತ್ತದೆ. ತಾಯಿ ಭಾರತಾಂಬೆ ಕನ್ನಡವೂ ಸೇರಿದಂತೆ ಹತ್ತಾರು ಭಾಷೆಗಳನ್ನು ಕೂಡಿಸಿ ಕೊಂಡು ದೊಡ್ಡವಳಾಗಿದ್ದಾಳೆ. ಈ ನಮ್ಮಮ್ಮನ ವೈಭವ ಎಂದಾಗ, ಆ ವೈಭವದಲ್ಲಿ ತಾಯಿ ಚಾಮುಂಡೇಶ್ವರಿಯೂ ಇದ್ದಾಳೆ. ತಾಯಿ ಭುವನೇಶ್ವರಿಯೂ ಇದ್ದಾಳೆ ಎಂದು ವಿಶ್ಲೇಷಿಸಿದರು.

ಭಾರತ ದೇಶ ಮತ್ತು ಕನ್ನಡ ನಾಡು–ನುಡಿ ಜೋಡಿಸಿರುವ ಮಹನೀಯರಲ್ಲಿ ರಾಷ್ಟ್ರಕವಿ ಕುವೆಂಪು ಒಬ್ಬರು. ಇಂತಹ ಮಹನೀಯರು ಕನ್ನಡವನ್ನು ಕಟ್ಟಿ ಬೆಳೆಸಿದ್ದಾರೆ. 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಕುವೆಂಪು ಅವರ ಗೀತೆಯು ಕನ್ನಡ ಮತ್ತು ರಾಷ್ಟ್ರೀಯತೆ ಬೇರೆಯಲ್ಲ ಎಂಬುದಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ನಮ್ಮ ಸಂಸ್ಕೃತಿಯ ಮೂಲ ಕೆಲಸ ಜೋಡಿಸುವುದೇ ಆಗಿದೆ ಎಂದು ತಿಳಿಸಿದರು.

ಕನ್ನಡದ ದೊರೆಗಳಲ್ಲಿ ಮೇರು ಮಿಂಚಿದ ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯ ಮೂಲತಃ ತುಳುವ ವಂಶದವನು. ಅವನಿಗೆ ಇರುವ ಬಿರುದು 'ಕನ್ನಡರಾಜ್ಯ ರಮಾರಮಣ' ಎಂಬುದಾಗಿದೆ. ಈತನು ಸಂಸ್ಕೃತದ ಘನ ಪಂಡಿತನಾಗಿ ತೆಲುಗು ಭಾಷೆಯಲ್ಲಿ ತಮಿಳುನಾಡಿನ ಕಥೆಯನ್ನು ಬರೆದ. ಇದು ಕನ್ನಡದ ಸೊಬಗು ಎಂದರು.

ಕನ್ನಡ ಸಾಹಿತ್ಯದಿಂದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಮನೆ ಭಾಷೆ ತಮಿಳು. ಗೋಕಾಕ್ ವರದಿ ಮೂಲಕ ಕನ್ನಡವನ್ನು ಶಾಲೆಗಳಿಗೆ ತಂದ ದೊಡ್ಡ ಶ್ರೇಯಸ್ಸು ಸಲ್ಲುವ ವಿನಾಯಕ ಕೃಷ್ಣ ಗೋಕಾಕ್ ಅವರ ಮನೆ ಭಾಷೆ ಮರಾಠಿ. ಕನ್ನಡದ ಭಗವದ್ಗೀತೆ ಬರೆದ ಡಿಜಿವಿ ಅವರ ಮನೆ ಭಾಷೆ ತೆಲುಗು. ಅಂದರೆ ಹಲವು ಮಹನೀಯರು ತಮ್ಮ ಮನೆಯ ಭಾಷೆ ಯಾವುದಾದರೂ ಈ ನೆಲದ ಭಾಷೆಯಾಗಿ ಕನ್ನಡವನ್ನು ಕಟ್ಟಿ ಬೆಳೆಸಿದ್ದಾರೆ. ಇದಕ್ಕಿಂತ ಸಮನ್ವಯದ ನೆಲೆ, ಭಾಷೆ ಮತ್ತು ಸಮನ್ವಯದ ಭಾವ ಇನ್ನಾವುದೂ ಇರಲಾರದು ಎಂದರು.



ಮೈಸೂರಿನ ಕಲಾಮಂದಿರದಲ್ಲಿ ಹಮ್ಮಿಕೊಂಡಿರುವ 'ಕನ್ನಡ ಹಬ್ಬದಲ್ಲಿ ಗುರುವಾರ ಇತಿಹಾಸ ಚಿಂತಕ ರಘುನಂದನ್ ಮಾತನಾಡಿದರು.

ಕರ್ನಾಟಕ, ಕನ್ನಡವಿಲ್ಲದ ಭಾರತ ಮಾತೆ ಕಡಬಡವಳಾಗುತ್ತಾಳೆ. ಅಂತೆಯೇ ಭಾರತ ಮಾತೆ ಇಲ್ಲದ ಕರ್ನಾಟಕ ವಾದರೆ ಅಪಾಯಕಾರಿಯಾಗುತ್ತದೆ. ಭಾರತದ ಬಗ್ಗೆ ಭಕ್ತಿ ಇಲ್ಲದ ಕಾಶ್ಮೀರ ಅಪಾಯ ತಂದೊಡ್ಡಿತು. ಹಾಗಾಗಿ ಕರ್ನಾಟಕ–ಕನ್ನಡವು ಭಾರತ ಮಾತೆಯ ತನುಜಾತೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಹಾಗಾಗಿ ಕನ್ನಡ ಪ್ರೀತಿ ಮತ್ತು ಭಾರತ ಭಕ್ತಿಯನ್ನು ಒಂದಕ್ಕೊಂದು ಜೋಡಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.

'ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟಿದ್ದರೂ ಇಡೀ ಭಾರತೀಯ ಸಾಹಿತ್ಯ ಒಂದೇ' ಎಂದು ಸರ್ವೆಪಲ್ಲಿ ರಾಧಾಕೃಷ್ಣನ್ ಉಲ್ಲೇಖಿಸಿದ್ದಾರೆ. ಅಂದರೆ ಭಾರತದ ಭಾವ ಪ್ರಪಂಚ ಒಂದೇ. ಅದು ಹಲವು ಭಾಷೆಗಳಲ್ಲಿ ವ್ಯಕ್ತವಾಗಿದೆ. ಇಡೀ ಭಾರತ ಒಂದು ಸಂಸ್ಕೃತಿ. 'ಇಂದಿನ ಆಧುನಿಕ ಭಾರತ ನಿರ್ಮಾಣಗೊಳ್ಳುವ ಮುನ್ನವೇ ಭಾರತವು ಒಂದು ತುದಿಯಿಂದ ಇನ್ನೊಂದು ತುದಿವರೆಗೆ ಮೊದಲಿಂ ದಲೇ ಸಾಂಸ್ಕೃತಿಕವಾಗಿ ಒಂದು ದೇಶವಾಗಿತ್ತು' ಎಂದು ಡಾ.ಅಂಬೇಡ್ಕರ್ ಉಲ್ಲೇಖಿಸಿದ್ದಾರೆ. ಅಂದರೆ ಈ ದೇಶದಲ್ಲಿರುವ ಸಂಸ್ಕೃತಿಯೇ ಇಲ್ಲಿನ ರಾಷ್ಟ್ರೀಯತೆ. ಇದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ರಾಷ್ಟ್ರೀಯತೆ ಎನ್ನುವುದು ಇಲ್ಲಿನ ಸಂಸ್ಕೃತಿಗೆ ಸಂಬಂಧಿಸಿದ್ದೇ ಹೊರತು ರಾಜಕೀಯ, ಧಾರ್ಮಿಕತೆಗೆ ಸಂಬಂಧಿಸಿದ್ದಲ್ಲ ಎಂದರು.

'ವಾದ' ಎಂದಾಕ್ಷಣ ಸಾಮಾನ್ಯವಾಗಿ ಜಗಳ ಎಂಬ ಭಾವನೆ ಮೂಡುತ್ತದೆ. ಆದರೆ ಮೂಲತಃ ಭಾರತದಲ್ಲಿ 'ಒಂದು ತತ್ವವನ್ನು ಬೇರೆ ಬೇರೆ ಮಗ್ಗಲುಗಳಿಂದ ಪರಿವೀಕ್ಷಣೆ ಮಾಡಿದಾಗ, ಸತ್ಯ ಸ್ಪಷ್ಟವಾಗುತ್ತದೆ ಎಂಬುದೇ ನಮ್ಮ ನೆಲದ ಚಿಂತನೆಯಲ್ಲಿರುವ 'ವಾದ'ದ ತಾತ್ಪರ್ಯ. ವಾದವನ್ನು ಗೌರವಿಸುವ ಪರಂಪರೆ ನಮ್ಮ ದೇಶದಲ್ಲಿದೆ ಎಂದು ಹೇಳಿದರು. ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ದೊಡ್ಡಾಚಾರ್ ಉಪಸ್ಥಿತರಿದ್ದರು.

> "ಕನ್ನಡ ವರ್ಣಮಾಲೆ ಅತ್ಯಂತ ಶಾಸ್ತ್ರಬದ್ಧವಾಗಿದ್ದು, ಉಚ್ಚಾರ ಸ್ಪಷ್ಟವಾಗಿದೆ. ಧ್ವನಿಯನ್ನು ಚೆನ್ನಾಗಿ ಹೊರಡಿಸುವುದು ಕನ್ನಡದ ವೈಶಿಷ್ಟ್ಯ ಭಾಷೆಯ ಸೌಂದರ್ಯದ ಜೊತೆಗೆ ಸಾವಿರಾರು ವರ್ಷಗಳ ಸಾಹಿತ್ಯ ಪರಂಪರೆಯೂ ಕನ್ನಡಕ್ಕಿದೆ. ಅತ್ಯಂತ ಕ್ಲಿಷ್ಟವಾಗಿರುವ ಭಾಮಿನಿ ಷಟ್ಪದಿಯ ಕುಮಾರವ್ಯಾಸ ಭಾರತವೂ ಇದೆ. ಇಂದಿನ ಕನ್ನಡಕ್ಕೆ ಅತ್ಯಂತ ಹತ್ತಿರವಾದ, ಇಡೀ ಉಪನಿಷತ್ ಅನ್ನು ಬಹಳ ಸುಂದರವಾಗಿ ಇನ್ನಷ್ಟು ನೇರ ಮಾತುಗಳಲ್ಲಿ ಹೇಳಿದ 'ವಚನ ಸಾಹಿತ್ಯ'ವೂ ನಮ್ಮಲ್ಲೇ ಇದೆ. ಸುಂದರವಾದ ದಾಸರ ಪದಗಳೂ ಇವೆ.
> **–ರಘುನಂದನ್, ಇತಿಹಾಸ ಚಿಂತಕರು.**

ಚೆಸ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ



ಲಿಖಿತಾ ಮತ್ತು ಅನಘ

ಮೈಸೂರು, ನ.2(ಎಸ್‌ಬಿಡಿ)– ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಬೆಂಗಳೂರು ದಕ್ಷಿಣ ಜಿಲ್ಲೆಯ ಆನೇಕಲ್ ತಾಲೂಕಿನ ಬೊಮ್ಮಸಂದ್ರದಲ್ಲಿ ಇತ್ತೀಚೆಗೆ ನಡೆದ ರಾಜ್ಯ ಮಟ್ಟದ ಚದುರಂಗ(ಚೆಸ್) ಪಂದ್ಯಾವಳಿಯ 14–17 ವಯೋಮಾನ ವಿಭಾಗದಲ್ಲಿ ನಂಜನಗೂಡು ಕಳಲೆ ಗ್ರಾಮದ ಕೆಜಿಆರ್ ಅನಘ ಪ್ರಥಮ ಹಾಗೂ ಎ.ಲಿಖಿತಾ ನಾಲ್ಕನೇ ಸ್ಥಾನ ಪಡೆಯುವುದರೊಂದಿಗೆ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.


ಕಳಲೆ ಗ್ರಾಮದ ಕೆ.ಎಂ.ಗೋಪಿನಾಥ್ ಮತ್ತು ರೂಪಾ ದಂಪತಿ ಪುತ್ರಿ ಅನಘ ಮತ್ತು ಅಂಕಣ್ಣ ಮತ್ತು ಸುಮಾ ದಂಪತಿಯ ಪುತ್ರಿ ಎ.ಲಿಖಿತಾ ನಂಜನಗೂಡಿನ ಕಾರ್ಮೆಲ್ ಶಾಲೆ ವಿದ್ಯಾರ್ಥಿನಿಯರು. ಇವರಿಬ್ಬರೂ ಬಾಲ್ಯದಿಂದಲೂ ಚೆಸ್ ಆಟದಲ್ಲಿ ಆಸಕ್ತಿ ಹೊಂದಿದ್ದು, ಹಲವು ಪಂದ್ಯಾವಳಿಯಲ್ಲಿ ಪ್ರಶಸ್ತಿ ಗಳಿಸಿದ್ದಾರೆ. ಸದ್ಯ ರಾಜ್ಯ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡುವ ಮೂಲಕ ಚೆನ್ನೈನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಅವಕಾಶ ಪಡೆದಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನಲ್ಲಿ ಸಂಭ್ರಮದ ಅದ್ಧೂರಿ ಕನ್ನಡ ರಾಜ್ಯೋತ್ಸವ

ಕನ್ನಡ ಮಯವಾಗಿತ್ತು, ಕನ್ನಡ ಉಸಿರಾಗಿತ್ತು, ಕನ್ನಡ ಸತ್ಯವಾಗಿತ್ತು, ತಂತ್ರಜ್ಞಾನದಲ್ಲಿ ಕನ್ನಡ ಒಲವಿನ ಭಾಷೆಯಾಗಿ ಬಳಕೆಯಾಗಲಿ: ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಲಹೆ

● ಪಥ ಸಂಚಲನದ ಗೌರವ ವಂದನೆ ● ಕನ್ನಡ ಗೀತೆ ಗಾಯನ ಪ್ರಸ್ತುತಿ ● ಸಾಧಕರಿಗೆ ಸನ್ಮಾನ



ಮೈಸೂರು, ನ.2(ಬಿಎಲ್‌ಯು)– ಕರ್ನಾಟಕ ಎಂಬ ಹೆಸರು ನಾಮಕರಣಗೊಂಡು 50 ವರ್ಷ ತುಂಬಿರುವ ಸಂಭ್ರಮದಲ್ಲಿ ಮೈಸೂರಿನಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಬುಧವಾರ ಅದ್ಧೂರಿಯಿಂದ ಆಚರಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ಓವಲ್ ಮೈದಾನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ತಂತ್ರಜ್ಞಾನದಲ್ಲಿ ಕನ್ನಡವನ್ನು ಒಲವಿನ ಭಾಷೆಯಾಗಿ ಯುವಕರು ಬಳಸಬೇಕು, ವಿಜ್ಞಾನ–ತಂತ್ರಜ್ಞಾನದ ಜೊತೆಗೆ ಕನ್ನಡ ಬಳಸಿ, ಬೆಳೆಸಬೇಕು ಎಂದು ಸಲಹೆ ನೀಡಿದರು.

ಮೈಸೂರು ರಾಜ್ಯವಾಗಿದ್ದ ಕರುನಾಡು ಕರ್ನಾಟಕವಾಗಿ ನಾಮಾಂಕಿತಗೊಂಡ ದಿನಕ್ಕೆ 50 ವರ್ಷವಾಗಿದೆ. ನವೆಂಬರ್ 1ರ ಕನ್ನಡ ರಾಜ್ಯೋತ್ಸವವನ್ನು ಈ ವೇಳೆ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ರಾಜ್ಯೋತ್ಸವ ಕಾರ್ಯಕ್ರಮ ನಡೆದ ಓವಲ್ ಮೈದಾನದಲ್ಲಿ ಕನ್ನಡ ಮಯವಾಗಿತ್ತು, ಕನ್ನಡ ಉಸಿರಾಗಿತ್ತು, ಕನ್ನಡ ಸತ್ಯವಾಗಿತ್ತು.

ಧ್ವಜಾರೋಹಣಕ್ಕೂ ಮುನ್ನ ಡಾ.ಮಹದೇವಪ್ಪ ಅವರು ತೆರೆದ ಜೀಪಿನಲ್ಲಿ ಪಥ ಸಂಚಲನ ತಂಡಗಳ ಪರಿವೀಕ್ಷಣೆ ನಡೆಸಿದರು. ತರುವಾಯ ಸಾರೇ ಜಹಾನ್ ಸೆ ಅಚ್ಛಾ ಎಂಬ ಸುಮಧುರ ಇಂಗ್ಲೀಷ್ ಬ್ಯಾಂಡ್‌ನೊಂದಿಗೆ ಸಾಗಿದ ಪಥಸಂಚಲನ ತಂಡಗಳಿಂದ ಡಾ.ಮಹದೇವಪ್ಪ ಗೌರವ ವಂದನೆ ಸ್ವೀಕರಿಸಿದರು.

ಅಶ್ವಾರೋಹಿ ದಳ, ಸಿಎಆರ್, ಕೆಎಸ್‌ಆರ್‌ಪಿ, ಮಹಿಳಾ ಪೊಲೀಸ್ ತಂಡ, ಗೃಹ ರಕ್ಷಕ ದಳ, ಎನ್ ಸಿಸಿ, ಭಾರತ ಸೇವಾ ದಳ ಸೇರಿದಂತೆ 18 ತಂಡಗಳು ಸಚಿವರಿಗೆ ಗೌರವ ವಂದನೆ ಸಲ್ಲಿಸಿದವು. ಈ ವೇಳೆ ಪೊಲೀಸ್ ತಂಡ ಜೈ ಕಿಸಾನ್ ಎಂಬ ಮತ್ತೊಂದು ಗೀತೆಯನ್ನು ನುಡಿಸುತ್ತಾ ಪಥ ಸಂಚಲನದಲ್ಲಿ ಸಾಗಿ ಕಿವಿಗೆ ಇಂಪು ನೀಡಿತು.

ತದ ನಂತರ ಜಿಲ್ಲೆಯ ಜನ ಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳ ಜೊತೆಗೂಡಿ ಡಾ.ಮಹದೇವಪ್ಪ ಅವರು ಕನ್ನಡ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ರಾಷ್ಟ್ರಗೀತೆ ಹಾಗೂ ನಾಡಗೀತೆ ಮೊಳಗಿತು. ಕನ್ನಡದ ಕಂಪನ್ನು ಮತ್ತಷ್ಟು ಹೆಚ್ಚು ಇಮ್ಮಡಿಗೊಳಿಸಿತು.

ತರುವಾಯ ಹುಯಿಲಗೋಳ ನಾರಾಯಣರಾಯರು ರಚಿಸಿರುವ ಉದಯವಾಗಲಿ ಚೆಲುವ ಕನ್ನಡ ನಾಡು, ಕುವೆಂಪು ರಚಿತ ಎಲ್ಲಾದರೂ ಇರು ಎಂತಾದರೂ ಇರು, ಒಂದೇ ಒಂದೇ ಕರ್ನಾಟಕ ಒಂದೇ, ಸಿದ್ದಯ್ಯ ಪುರಾಣಿಕ ಅವರ ಹೊತ್ತಿತು ಹೊತ್ತಿತು ಕನ್ನಡದ ದೀಪ, ಚೆನ್ನವೀರ ಕಣವಿ ಅವರ ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ ಎಂಬ ಗೀತೆಗಳನ್ನು ಕಲಾವಿದರು ಪ್ರಸ್ತುತಪಡಿಸಿದರು.

ನೆಲದ ಭಾಷೆಗೆ ಮಹತ್ವ: ಈ ವೇಳೆ ಕನ್ನಡ ರಾಜ್ಯೋತ್ಸವದ ಸಂದೇಶ ನೀಡಿದ ಡಾ.ಮಹದೇವಪ್ಪ, ನಮ್ಮ ನೆಲದ ಭಾಷೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕು. ತಂತ್ರಜ್ಞಾನದಲ್ಲಿ ಕನ್ನಡವನ್ನು ಯುವಕರು ಒಲವಿನ ಭಾಷೆಯಾಗಿ ಬಳಸಬೇಕು. ವಿಜ್ಞಾನ–ತಂತ್ರಜ್ಞಾನದ ಜೊತೆಗೆ ಕನ್ನಡ ಬಳಸಿ ಬೆಳೆಸಬೇಕು ಎಂದು ಸಲಹೆ ನೀಡಿದರು.

ಕನ್ನಡ ನಾಡು–ನುಡಿಗೆ ಸುಮಾರು 2 ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. 2 ಸಾವಿರ ವರ್ಷಗಳ ಹಿಂದೆಯೇ ಈ ಭಾಷೆಯನ್ನು ಮಾತನಾಡುವ ಜನ ಇದ್ದರು ಎಂಬುವುದಕ್ಕೆ ಇತಿಹಾಸದಲ್ಲಿ ಸಾಕಷ್ಟು ಉಲ್ಲೇಖಗಳಿವೆ ಎಂದರು.


ಕ್ರಿ.ಶ.450ರ ಕನ್ನಡ ಭಾಷೆಯ ಮೊಟ್ಟ ಮೊದಲ ಹಲ್ಮಿಡಿ ಶಾಸನದಲ್ಲಿ ಕನ್ನಡದ ಪದಗಳಿವೆ. ಕ್ರಿ.ಶ.850ರ ಕನ್ನಡದ ಮೊಟ್ಟ ಮೊದಲ ಗ್ರಂಥ ಕವಿರಾಜ ಮಾರ್ಗದಲ್ಲಿ ಕನ್ನಡ ನಾಡಿನ ವಿಸ್ತಾರದ ಬಗ್ಗೆ ಉಲ್ಲೇಖವಿದೆ. 21ನೇ ಶತಮಾನದ ಈ ಹೊತ್ತಿನಲ್ಲಿ ಕನ್ನಡ ಭಾಷೆ ಆಧುನಿಕತೆಯೊಂದಿಗೆ ತನ್ನದೇ ಆದ ಅಸ್ಮಿತೆಯನ್ನು ಉಳಿಸಿಕೊಂಡಿದೆ. ಈ ಮಣ್ಣಿಗೊಂದು, ಈ ನುಡಿಗೊಂದು ಸೊಗಸಿದೆ. ಸೌಂದರ್ಯ ವಿದೆ, ಬೆಡಗಿದೆ. ಆದ್ದರಿಂದ ಪ್ರಾದೇಶಿಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಕಾರ್ಯವನ್ನು ನಾವು ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭ ಜಿಲ್ಲಾ ಮಟ್ಟದ 50 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ಹಾಗೂ 15 ಸಾಧಕರಿಗೆ ರಾಜಶ್ರೀ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಹೆಚ್.ವಿಶ್ವನಾಥ್, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಾವಿರಾರು ಕನ್ನಡದ ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕನ್ನಡ ಅಭಿಮಾನದ ಮೆರವಣಿಗೆ

ಓವಲ್ ಮೈದಾನದಲ್ಲಿ ನಡೆದ ಕಾರ್ಯಕ್ರಮಕ್ಕೂ ಮೊದಲು ಮೈಸೂರು ಅರಮನೆಯ ಭುವನೇಶ್ವರಿ ದೇವಾಲಯದಲ್ಲಿ ಡಾ.ಮಹದೇವಪ್ಪ ಭುವನೇಶ್ವರಿ ದೇವಿಗೆ ಅಗ್ರ ಪೂಜೆ ಸಲ್ಲಿಸಿದರು. ತರುವಾಯ ಭುವನೇಶ್ವರಿ ದೇವಿ ಪ್ರತಿಮೆಯ ಮೆರವಣಿಗೆ ಆರಂಭವಾಯಿತು. ಡೊಳ್ಳು ಕುಣಿತ, ಪೂಜಾ ಕುಣಿತ ಸೇರಿದಂತೆ ಹಲವು ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿತು. ಉದ್ಯೋಗ ಖಾತ್ರಿ ನಡಿಗೆ, ಸುಸ್ಥಿರದೆಡೆಗೆ ಎಂಬ ಸ್ತಬ್ಧಚಿತ್ರ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಸಂದೇಶ ಸಾರಿತು. ಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಹೊರಟ ಮೆರವಣಿಗೆ ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ ಮೂಲಕ ಓವಲ್ ಮೈದಾನ ತಲುಪಿತು. ಮೆರವಣಿಗೆಯಲ್ಲಿ ಕೂಡ ನೂರಾರು ಕನ್ನಡದ ಅಭಿಮಾನಿಗಳು ಭಾಗಿಯಾಗಿದ್ದರು.



ಕವಾಯತು ಪ್ರಧಾನ ದಳಪತಿಗಳ ಕನ್ನಡ ಪ್ರೇಮ

ಕವಾಯತು ಪ್ರಧಾನ ದಳಪತಿಗಳು ಪಥ ಸಂಚಲನದ ತಂಡಗಳಿಗೆ ಸೂಚನೆಗಳನ್ನು ನೀಡುವಾಗ ಸಾಮಾನ್ಯವಾಗಿ ಆಂಗ್ಲ ಭಾಷೆ ಬಳಕೆ ಮಾಡುತ್ತಾರೆ. ಮೈಸೂರು ದಸರಾ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡುವಾಗ ಹಾಗೂ ಬನ್ನಿಮಂಟಪದಲ್ಲಿ ನಡೆಯುವ ಪಂಜಿನ ಕವಾಯತು ಆರಂಭವಾಗುವ ವೇಳೆ ಆಂಗ್ಲ ಭಾಷೆ ಬಳಕೆ ಮಾಡುತ್ತಾರೆ. ಆದರೆ ಕನ್ನಡ ರಾಜ್ಯೋತ್ಸವದ ಸುಸಂದರ್ಭದಲ್ಲಿ ಕವಾಯತು ಪ್ರಧಾನ ದಳಪತಿ ಅಜಯ್ ಸಾಸನೂರ್ ಅವರು ಪಥ ಸಂಚಲನದ ತಂಡಗಳಿಗೆ ಕನ್ನಡದಲ್ಲೆ ಸೂಚನೆ ನೀಡಿದರು. ಈ ಮೂಲಕ ಕನ್ನಡ ರಾಜ್ಯೋತ್ಸವದಲ್ಲಿ ಕನ್ನಡ ರಾರಾಜಿಸಿತು, ಕನ್ನಡ ಮೇಳೈಸಿತು, ಕನ್ನಡದ ಪ್ರೀತಿ ಅಭಿಮಾನ ಜಲಪಾತದಂತೆ ಉಕ್ಕಿ ಹರಿಯಿತು. ಕನ್ನಡ ಭಾಷೆಯ ಈ ಅಭಿಮಾನ ನೆರೆದಿದ್ದವರಲ್ಲಿ ಹರ್ಷೋದ್ಗಾರ ಉಂಟು ಮಾಡಿತು.



ಖ್ಯಾತ ಭರತನಾಟ್ಯ ಗುರು ಬದ್ರಿ ದಿವ್ಯ ಭೂಷಣ್ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅವರ ತಾಯಿ ಪದ್ಮ ಬಾಲಾಜಿ ಹಾಗೂ ಪತ್ನಿ ಡಾ.ಅಂಜನಾ ಭೂಷಣ್ ಚಿತ್ರದಲ್ಲಿದ್ದಾರೆ.

ರಾಜ್ಯದ ವಿವಿಧ ಕ್ಷೇತ್ರದ 68 ಸಾಧಕರಿಗೆ ಈ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ








2023ನೇ ಸಾಲಿನ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್.ತಂಗಡಗಿ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸಿಎಂ ರಾಜಕೀಯ ಕಾರ್ಯದರ್ಶಿ, ಎಂಎಲ್‌ಸಿ ಕೆ.ಗೋವಿಂದರಾಜ್ ಇತರರಿದ್ದಾರೆ. ಸಾಹಿತ್ಯ ವಿಭಾಗದಿಂದ (ಎಡಗಡೆ) ಪ್ರೊ.ಸಿ.ನಾಗಣ್ಣ (ಚಾ.ನಗರ ಜಿಲ್ಲೆ), ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದಿಂದ ಇಸ್ರೋ ಮುಖ್ಯಸ್ಥ ಸೋಮನಾಥನ್ (ಬಲಗಡೆ) ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಯಿತು.

ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯಾಸಕ್ತಿ ಬೆಳೆಸಿಕೊಳ್ಳಿ



ಮೈಸೂರು, ನ.2(ಆರ್‌ಕೆ)–ಜೀವನದಲ್ಲಿ ಸಾಹಿತ್ಯಾಸಕ್ತಿ ಬೆಳೆಸಿಕೊಳ್ಳಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಸ್ತು ಸಂಶೋಧನಾಲಯದ ನಿವೃತ್ತ ನಿರ್ದೇಶಕ ಪ್ರೊ. ಎಸ್.ಶಿವರಾಜಪ್ಪ ವಿದ್ಯಾರ್ಥಿಗಳಿಗೆ ಸಲಹೆ ನೀಡಿದ್ದಾರೆ.

ಮಹಾರಾಜ ಕಾಲೇಜು ವತಿಯಿಂದ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 2021–22ನೇ ಸಾಲಿನ 'ಅನಂತ ಯಾತ್ರಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಸಂಚಿಕೆಯಲ್ಲಿ ವಿದ್ಯಾರ್ಥಿಗಳ ಸೃಜನಶೀಲತೆ ಅನಾವರಣವಾಗಿದ್ದು, ಸಾಹಿತ್ಯ, ಸಂಸ್ಕೃತಿ ಅಳವಡಿಸಿಕೊಂಡು ಸದಾ ಓದುವ–ಬರೆಯುವ ಮೂಲಕ ಕ್ರಿಯಾಶೀಲರಾಗಿದ್ದರೆ ಯಶಸ್ಸು ಸಿಗುತ್ತದೆ ಎಂದರು.

ಮಹಾರಾಜ ಕಾಲೇಜು ಸಾಹಿತ್ಯ, ಸಂಸ್ಕೃತಿ, ಪರಂಪರೆ, ಇತಿಹಾಸಕ್ಕೆ ಅನುಪಮ ಕೊಡುಗೆ ನೀಡಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ದೂರ ದೃಷ್ಟಿ, ಸಾಹಿತ್ಯ ಪ್ರೇಮವು ನಮಗೆ ಪ್ರೇರಣೆಯಾಗಬೇಕು ಎಂದು ನುಡಿದರು. ಸಮಾರಂಭದಲ್ಲಿ ಕಾಲೇಜು ಪ್ರಾಂಶುಪಾಲ ಪ್ರೊ ಸಿ.ವಿ.ಶ್ರೀಧರ್, ಆಡಳಿತಾಧಿಕಾರಿ ಪ್ರೊ. ವಿ.ಷಣ್ಮುಗಂ, 'ಅನಂತ ಯಾತ್ರಿ' ಸಂಪಾದಕ ಪ್ರೊ. ಬಸವರಾಜ ಕೆ.ಬಾರಕೇರ್, ಡಾ. ಕೃಷ್ಣಪ್ಪ, ಡಾ. ಮಧುಸೂದನ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಶಕ್ತಿ ಯೋಜನೆಯಿಂದ ದಸರಾ ವಸ್ತುಪ್ರದರ್ಶನ ಸದಾ ಭರ್ತಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ವಿಶ್ವಾಸ

ಮೈಸೂರು, ನ.2(ಎಂಕೆ)– 'ಶಕ್ತಿ' ಯೋಜನೆಯಿಂದಾಗಿ ಪ್ರವಾಸಿಗರು ಹೆಚ್ಚಾಗಿ ಮೈಸೂರಿಗೆ ಭೇಟಿ ನೀಡುತ್ತಿದ್ದಾರೆ. ಇದರಿಂದಾಗಿ ಪ್ರವಾಸೋದ್ಯಮಕ್ಕೆ ಹಾಗೂ ಸ್ಥಳೀಯ ವ್ಯಾಪಾರಸ್ಥರಿಗೆ ಅನುಕೂಲವಾಗುತ್ತಿದೆ. ಅಲ್ಲದೆ ದಸರಾ ವಸ್ತುಪ್ರದರ್ಶನ ಪ್ರವಾಸಿಗರಿಂದ ಭರ್ತಿಯಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಕನ್ನಡ ರಾಜ್ಯೋತ್ಸವ ಕರ್ನಾಟಕ 50ರ ಸಂಭ್ರಮ ಅಂಗವಾಗಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ದಸರಾ ವಸ್ತುಪ್ರದರ್ಶನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವರನಟ ಡಾ. ರಾಜಕುಮಾರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಮಾತನಾಡಿದ ಅವರು, ಮೈಸೂರು ದಸರಾ ವಸ್ತುಪ್ರದರ್ಶನ 90 ದಿನಗಳು ನಡೆಯಲಿದೆ. ರಾಜ್ಯ ಸರ್ಕಾರದ 40ಕ್ಕೂ ಹೆಚ್ಚು ವಿವಿಧ ಇಲಾಖೆಯ ಸರ್ಕಾರಿ ಮಳಿಗೆಗಳು ಸಾರ್ವಜನಿಕರಿಗೆ ಆಯಾ ಇಲಾಖೆಗಳಲ್ಲಿನ ಯೋಜನೆಗಳ ಕುರಿತು ಮಾಹಿತಿ ತಿಳಿಸಲು ಆಕರ್ಷಕವಾಗಿ ನಿರ್ಮಿಸಲಾಗಿದ್ದು, ಪ್ರವಾಸಿಗರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕೋರಿದರು.



ವಿಧಾನಪರಿಷತ್ ಸದಸ್ಯ ಡಾ.ತಿಮಯ್ಯ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಒ ರಾಜೇಶ್ ಜಿ.ಗೌಡ, ಕಾಂಗ್ರೆಸ್ ಮುಖಂಡರಾದ ನಜರಬಾದ್ ನಟರಾಜ್, ಮಲ್ಲಿಕ್, ಮಂಜು ಜಿ.ಗೌಡ, ಎಡ್ವಿನ್, ಸರ್ದಾರ್ ಶರೀಫ್, ದಸರಾ ವಸ್ತುಪ್ರದರ್ಶನ ನಿರೂಪಕ ಅಜಯ್ ಶಾಸ್ತ್ರಿ, ರಂಗನಾಥ್, ನಂದಕುಮಾರ್, ವೆಂಕಟೇಶ್, ಮಹದೇವಸ್ವಾಮಿ, ನವೀನ್, ಶ್ರೀನಿಧಿ, ವಿಜಯ್ ಮತ್ತಿತರರು ಹಾಜರಿದ್ದರು.

'ಕನ್ನಡ ರಥ'ವಾಗಿ ರೂಪುಗೊಂಡ ಮೈಸೂರು ನಗರ ಬಸ್: ಸಂಸ್ಥೆ ನೌಕರರ ಕನ್ನಡ ಪ್ರೇಮಕ್ಕೆ ಪ್ರಶಂಸೆ

ಮೈಸೂರು, ನ.2(ಎಸ್‌ಬಿಡಿ)– ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಮೈಸೂರು ನಗರ ಸಾರಿಗೆ ಬಸ್ 'ಕನ್ನಡ ರಥ'ವಾಗಿ ಸಂಚರಿಸುವ ಮೂಲಕ ಸಾರಿಗೆ ಸಂಸ್ಥೆ ನೌಕರರ ಭಾಷಾ ಪ್ರೇಮವನ್ನು ಪಸರಿಸುತ್ತಿದೆ.

ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗ, ವಿಜಯನಗರ ಘಟಕದ 119ನೇ ಮಾರ್ಗದ ಬಸ್(ಕೆ.ಎ–09, ಎಫ್–5049) ಅನ್ನು ರಾಜ್ಯೋತ್ಸವದ ಅಂಗವಾಗಿ ಅತ್ಯಾಕರ್ಷವಾಗಿ ಸಿಂಗರಿಸಲಾಗಿದ್ದು, ಸ್ತಬ್ಧಚಿತ್ರದ ಹಾಗೆ ಕಂಗೊಳಿಸುತ್ತಿದೆ.

ಕಬ್ಬಿಣದಿಂದ ಸಿದ್ಧಪಡಿಸಿದ ವಿಶೇಷ ಉಪಕರಣ (ಸ್ಟ್ಯಾಂಡ್) ವನ್ನು ಬಸ್‌ನ ಮುಂಭಾಗದಲ್ಲಿ ಅಳವಡಿಸಿ, ಅದರ ಮೇಲೆ ಕರ್ನಾಟಕ ಭೂಪಟವುಳ್ಳ ವಿಶೇಷ ಪೀಠದಲ್ಲಿ ಕನ್ನಡಾಂಭೆ ಭುವನೇಶ್ವರಿ ಫೋಟೋ ಹಾಗೂ ತಾಯಿ ಚಾಮುಂಡೇಶ್ವರಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಪೀಠದ ಸುತ್ತಲೂ ಹೂಕುಂಡಗಳನ್ನು ಜೋಡಿಸಲಾಗಿದೆ. ಜೊತೆಗಿರುವ ಗಂಡಭೇರುಂಡ ಚಿತ್ರ ಗಮನ ಸೆಳೆಯುತ್ತದೆ. ಗುಲಾಬಿಯ ಬೃಹತ್ ಹಾರಗಳು ಹಾಗೂ ಸೇವಂತಿ ಹೂಮಾಲೆ, ಬಾಳೆಕಂದುಗಳಿಂದ ರಥವನ್ನು ಸಿಂಗರಿಸಲಾಗಿದೆ. ರಥದ ಎರಡೂ ತುದಿಯಲ್ಲಿ ಕನ್ನಡ ಬಾವುಟ ರಾರಾಜಿಸುತ್ತಿದೆ.

ಬಸ್‌ನ ಒಳಹೋದರೆ ಆಶ್ಚರ್ಯದ ಜೊತೆಗೆ ಖುಷಿಯಾಗುತ್ತದೆ. ಜ್ಞಾನಪೀಠ ಪುರಸ್ಕೃತ ಹಾಗೂ ಜನಪ್ರಿಯ ಕವಿಗಳು, ಸಾಹಿತಿಗಳ ಫೋಟೋಗಳು ಹಾಗೂ ನಾಡಿನ ಪ್ರಸಿದ್ಧ ಪ್ರವಾಸಿ ತಾಣಗಳ ಪೋಸ್ಟರ್‌ಗಳನ್ನು ಅಳವಡಿಸಿರುವುದು ರಥದ ಆಕರ್ಷಣೆ ಹೆಚ್ಚಿಸಿದೆ. ಅಲ್ಲದೆ ಸಾವಿರಾರು ರೂ. ಖರ್ಚು ಮಾಡಿ ವರ್ಣರಂಜಿತ ಲೈಟಿಂಗ್ಸ್ ಮಾಡಿಸಿದ್ದಾರೆ. ನ.1ಕ್ಕೆ ಸೀಮಿತವಾಗಿ ಮೈಕ್‌ಗಳನ್ನು ಕಟ್ಟಿ, ಕನ್ನಡದ ಜನಪ್ರಿಯ ಗೀತೆಗಳನ್ನು ಪ್ರಸಾರ ಮಾಡಲಾಗಿದೆ. ಇನ್ನೆರಡು ದಿನಗಳಲ್ಲಿ ದೇವರ ಫೋಟೋ, ವಿಗ್ರಹ ಹಾಗೂ ಹೂವಿನ ಅಲಂಕಾರವನ್ನು ತೆಗೆದಿಡಲಾಗುವುದು. ಆದರೆ ಮಹನೀಯರು ಹಾಗೂ ಪ್ರವಾಸಿ ತಾಣಗಳ ಫೋಟೋಗಳು ಹಾಗೇ ಇರಲಿವೆ.

ನಗರ ಬಸ್ ನಿಲ್ದಾಣ–ಗೋಕುಲಂ–ಎಲ್&ಟಿ–ಇನ್ಫೋಸಿಸ್ ಮಾರ್ಗದಲ್ಲಿ ಸಂಚರಿಸುವ ಈ ಬಸ್ 'ಕನ್ನಡ ರಥ'ವಾಗಿ ಕಂಗೊಳಿಸುತ್ತಿರುವುದಕ್ಕೆ ಪ್ರಯಾಣಿಕರಲ್ಲೂ ಖುಷಿ ತಂದಿದೆ. ಸಾರಿಗೆ ಸಂಸ್ಥೆ ಸಿಬ್ಬಂದಿಯ ಕನ್ನಡ ಪ್ರೇಮವನ್ನು ಮುಕ್ತ ಕಂಠದಿಂದ ಬಣ್ಣಿಸುತ್ತಿದ್ದಾರೆ. ಭಾಷಾ ಪ್ರೇಮದಿಂದ ತಾಸುಗಟ್ಟಲೆ ಶ್ರಮಿಸಿ ಬಸ್ ಅನ್ನು ಚಂದಗೊಳಿಸಿರುವ ಕಾರ್ಯವನ್ನು ಶ್ಲಾಘಿಸಿದ್ದಾರೆ.



ಕನ್ನಡ ಪ್ರೇಮಿಗಳಿವರು: 'ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು...' ರಾಷ್ಟ್ರಕವಿ ಕುವೆಂಪು ಅವರು ಈ ಸಾಲುಗಳನ್ನು ಕಟ್ಟಲು ಕನ್ನಡ ಪ್ರೇಮಿಗಳೇ ಪ್ರೇರಣೆಯಾಗಿರಬಹುದು. ಏಕೆಂದರೆ ಸಾರಿಗೆ ಬಸ್ 'ಕನ್ನಡ ರಥ'ವಾಗುವಲ್ಲಿ ಇದರ ನಿರ್ವಾಹಕ, ಚಾಲಕ ಹಾಗೂ ಸಹೋದ್ಯೋಗಿಗಳು ಮತ್ತು ಅಧಿಕಾರಿಗಳ ಕನ್ನಡ ಪ್ರೀತಿ ಅಡಗಿದೆ. ನಿರ್ವಾಹಕ ಶ್ರೀನಿವಾಸ್, ಚಾಲಕ ಎಸ್.ಮಹದೇವು ಅವರ ಈ ಸತ್ಕಾರ್ಯಕ್ಕೆ ವಿಜಯನಗರ ಘಟಕದ ವ್ಯವಸ್ಥಾಪಕಿ ಸುಮಲತಾ, ಮತ್ತೊಬ್ಬ ಚಾಲಕ ರಮೇಶ್, ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ತಾಂತ್ರಿಕ ಸಿಬ್ಬಂದಿ ವೈ.ಇ.ಮಂಜುನಾಥ್, ಸಂಚಾರ ನಿರೀಕ್ಷಕ ಮಹೇಶ್ ಸೇರಿದಂತೆ ಘಟಕದ ಎಲ್ಲಾ ಸಹೋದ್ಯೋಗಿಗಳ ಸಹಕಾರವಿದೆ.

ಹಿರಿಯರ ಪ್ರೇರಣೆ: ವಿಜಯನಗರ ಘಟಕದ 'ಕನ್ನಡ ರಥ'ಕ್ಕೆ ದಶಕದ ಹಿನ್ನೆಲೆಯಿದೆ. ನವೆಂಬರ್ 1ರಂದು ಯಾವುದಾದರೂ ಒಂದು ಬಸ್ ಅನ್ನು ಅತ್ಯಾಕರ್ಷಕವಾಗಿ ಸಿಂಗರಿಸುವ ಸಂಪ್ರದಾಯ ನಡೆದು ಬಂದಿದೆ. ಆ ಬಸ್‌ನ ಚಾಲಕರು ಹಾಗೂ ನಿರ್ವಾಹಕರು ಜವಾಬ್ದಾರಿ ವಹಿಸಿಕೊಂಡರೆ ಎಲ್ಲರೂ ಸಹಕರಿಸುತ್ತಾರೆ. ಹಾಗೆಯೇ 4 ವರ್ಷಗಳಿಂದ ನಿರ್ವಾಹಕ ಶ್ರೀನಿವಾಸ್, ಚಾಲಕ ಮಹದೇವು ಅವರು ಮುಂಚೂಣಿಯಲ್ಲಿ ನಿಂತು ಕನ್ನಡ ಹೃದಯಗಳ ನೆರವಿನಿಂದ ಸಮರ್ಥವಾಗಿ ನಿಬಾಯಿಸಿಕೊಂಡು ಬರುತ್ತಿದ್ದಾರೆ. ಇದಕ್ಕೂ ಮುನ್ನ ಹಿನಕಲ್ ಜಗದೀಶ್ ನೇತೃತ್ವದಲ್ಲಿ ಸುಮಾರು 10 ವರ್ಷ ಈ ರೀತಿ ಬಸ್ ಅಲಂಕಾರ ಮಾಡುವ ಮೂಲಕ ರಾಜ್ಯೋತ್ಸವ ಸಂಭ್ರಮಿಸಲಾಗಿತ್ತು. ಅವರು ನಿವೃತ್ತರಾದ ನಂತರ ಸಂಪ್ರದಾಯ ನಿಲ್ಲಬಾರದೆಂದು ನಿರ್ಧರಿಸಿದ ನಂತರ ನಾವು ಮುಂದುವರೆಸಿದ್ದೇವೆ. ಇದಕ್ಕೆ ಎಲ್ಲರ ಸಹಕಾರವಿದೆ ಎಂದು ನಿರ್ವಾಹಕ ಶ್ರೀನಿವಾಸ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕನ್ನಡ ಎಂದರೆ ಎಲ್ಲರಂತೆ ನಮಗೂ ತುಂಬಾ ಪ್ರೀತಿ. ನವೆಂಬರ್ ಬರುತ್ತಿದೆ ಎನ್ನುವಾಗಲೇ ಏನೋ ಒಂದು ರೀತಿ ಉತ್ಸಾಹ, ಸಂಭ್ರಮ. 'ಕನ್ನಡ ರಥ'ವನ್ನು ಹೇಗೆಲ್ಲಾ ಸಿಂಗರಿಸಬೇಕೆಂಬ ಲೆಕ್ಕಾಚಾರ ಶುರುವಾಗುತ್ತದೆ. ಈ ಬಾರಿಯೂ ಎಲ್ಲರ ಸಹಕಾರದಿಂದ ಅತ್ಯಾಕರ್ಷಕವಾಗಿ ಅಲಂಕಾರಗೊಳಿಸಲಾಗಿದೆ. ನ.1ರಂದು ಕನ್ನಡ ರಥದ ಜೊತೆಗೆ ಹಲವು ಬಸ್‌ಗಳ ಮೆರವಣಿಗೆ ನಡೆಸಿದೆವು. ವಿಜಯನಗರ ಘಟಕದಲ್ಲೂ ಸಂಭ್ರಮದಿಂದ ರಾಜ್ಯೋತ್ಸವ ಆಚರಿಸಲಾಯಿತು. ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಅವರು ತುಂಬಾ ಖುಷಿಪಟ್ಟು ಬಸ್ ಜೊತೆ ಫೋಟೋ ತೆಗೆಸಿಕೊಂಡರು. ಪ್ರತಿ ವರ್ಷ ಈ ಸಂಭ್ರಮ ಇದ್ದೇ ಇರುತ್ತದೆ ಎಂದರು.

ಶಾಸಕ ದರ್ಶನ್ ಗೈರಿನಲ್ಲಿ ಕನ್ನಡ ರಾಜ್ಯೋತ್ಸವ



ಪಾಂಡವಪುರ, ನ.2– ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಗೈರು ಹಾಜರಿಯಲ್ಲಿ ತಾಲೂಕು ಆಡಳಿತದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸಿ ನಂದೀಶ್ ರಾಷ್ಟ್ರಧ್ವಜ ಹಾಗೂ ಕನ್ನಡ ಧ್ವಜಾರೋಹಣ ನೆರವೇರಿಸಿದರು. ಬಳಿಕ ಕ್ರೀಡಾಂಗಣದಲ್ಲಿದ್ದ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪಥ ಸಂಚಲನ ಮೂಲಕ ಗಣ್ಯರಿಗೆ ಗೌರವ ವಂದನೆ ಸಲ್ಲಿಸಿದರು.

ಸಮಾರಂಭದಲ್ಲಿ ವಿವಿಧ ಶಾಲಾ ಮಕ್ಕಳು ನಾನಾ ನುಡಿಗೆ ಸಂಬಂಧಿಸಿದ ಹಲವು ಹಾಡುಗಳಿಗೆ ನೃತ್ಯ ಮಾಡಿ ಎಲ್ಲರ ಗಮನ ಸೆಳೆದರು. ಉತ್ತಮ ಪ್ರದರ್ಶನ ನೀಡಿದ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೇ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ತಹಸೀಲ್ದಾರ್ ಸಂತೋಷ್, ಇಓ ಲೋಕೇಶ್‌ಮೂರ್ತಿ, ಬಿಇಓ ಚಂದ್ರಶೇಖರ್, ಬಿಆರ್‌ಸಿ ಪ್ರಕಾಶ್, ಕಸಾಪ ಅಧ್ಯಕ್ಷ ಪ್ರಕಾಶ್, ಮಾಜಿ ಅಧ್ಯಕ್ಷ ವೆಂಕಟರಾಮೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಕೆ.ಎಸ್.ದಯಾನಂದ್, ರೈತ ಸಂಘದ ಅಧ್ಯಕ್ಷ ನಾಗರಾಜು, ಪುರಸಭೆ ಸದಸ್ಯೆ ಅರ್ಚನ ಸೇರಿದಂತೆ ಹಲವು ಪುರಸಭೆ ಸದಸ್ಯರು ಹಾಜರಿದ್ದರು.

ಶಾಸಕರ ಗೈರಿಗೆ ಸಾರ್ವಜನಿಕರ ಬೇಸರ: ಕರ್ನಾಟಕ ಏಕೀಕರಣಗೊಂಡು 50 ವರ್ಷ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ರಾಜ್ಯೋತ್ಸವ ಆಚರಿಸಲಾಗುತ್ತಿದೆ. ಆದರೆ ಮೇಲುಕೋಟೆ ಕ್ಷೇತ್ರದ ಜನತೆಗೆ ಆ ಭಾಗ್ಯವಿಲ್ಲ. ಸ್ವಾತಂತ್ರ್ಯ ದಿನಾಚರಣೆಯಂತೆ ಕನ್ನಡ ರಾಜ್ಯೋತ್ಸವಕ್ಕೂ ಶಾಸಕ ದರ್ಶನ್ ಗೈರು ಹಾಜರಾಗಿದ್ದರಿಂದ ಕ್ಷೇತ್ರದ ಜನತೆ ಶಾಸಕರ ನಡೆಗೆ ಸಾಕಷ್ಟು ಬೇಸರ ವ್ಯಕ್ತಪಡಿಸಿದರು.

ಅಮೆರಿಕಾ ಪ್ರವಾಸದಲ್ಲಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ಈ ಹಿಂದೆ ಸ್ವಾತಂತ್ರ್ಯ ದಿನಾಚರಣೆಗೂ ಗೈರಾಗಿದ್ದರು. ಆಗ ಶಾಸಕರ ವಿರುದ್ಧ ಸಾರ್ವಜನಿಕರು ಸಾಕಷ್ಟು ಟೀಕೆ ಮಾಡಿದ್ದರು. ಬಳಿಕ ಅಮೆರಿಕಾದಿಂದ ಬಂದ ಶಾಸಕ ದರ್ಶನ್ ಸುದ್ದಿಗೋಷ್ಠಿಯಲ್ಲಿ ಕ್ಷೇತ್ರದ ಜನರ ಕ್ಷಮೆಯಾಚಿಸಿದ್ದರು. ಇದೀಗ ಕನ್ನಡ ರಾಜ್ಯೋತ್ಸವಕ್ಕೂ ಗೈರು ಹಾಜರಾಗಿದ್ದು, ಶಾಸಕರ ನಡೆಗೆ ಸಾಕಷ್ಟು ವಿರೋಧ ವ್ಯಕ್ತವಾಗುತ್ತಿದೆ. ಶಾಸಕರು ತಮ್ಮ ಜವಾಬ್ದಾರಿ ಅರಿತು ಕೆಲಸ ಮಾಡಬೇಕು ಎಂದು ಕಿಡಿಕಾರಿದ್ದಾರೆ.

ಕನ್ನಡ ನಾಡಲ್ಲಿ ಜನಿಸುವುದೇ ಪುಣ್ಯ

ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ನ.2– ಶತ ಶತಮಾನಗಳ ಸಾಂಸ್ಕೃತಿಕ, ಚಾರಿತ್ರಿಕ, ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಶ್ರೀಮಂತಿಕೆ ಹೊಂದಿರುವ ಕನ್ನಡ ನಾಡಿನಲ್ಲಿ ಜನಿಸಿರುವುದು ನಮ್ಮೆಲ್ಲರ ಪೂರ್ವ ಜನ್ಮದ ಪುಣ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ತಿಳಿಸಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಭಾಷಾವಾರು ಪ್ರಾಂತ್ಯ ರಚನೆ ಉದ್ದೇಶದಿಂದ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ 1956ರ ನ.1ರಂದು ವಿಶಾಲ ಮೈಸೂರು ರಾಜ್ಯವನ್ನು ರಚಿಸಲಾಯಿತು. ಹೀಗಾಗಿ ನ.1 ರಂದು ಕರ್ನಾಟಕ ರಾಜ್ಯೋತ್ಸವ ಅಥವಾ ಕನ್ನಡ ದಿನ ಎಂದು ಆಚರಿಸಲಾಗುತ್ತದೆ. ಇದನ್ನು ಕರ್ನಾಟಕ ರಚನೆ ದಿನ ಅಥವಾ ಕರ್ನಾಟಕ ಏಕೀಕರಣ ದಿನ ಎಂದು ಕರೆಯಲಾಗುತ್ತದೆ ಎಂದರು.

ಜಿಲ್ಲೆಯಲ್ಲಿ ಸೆಪ್ಟೆಂಬರ್ ಅಂತ್ಯದವರೆಗೆ 1.94 ಕೋಟಿ ಮಹಿಳಾ ಪ್ರಯಾಣಿಕರು ಶಕ್ತಿ ಯೋಜನೆ ಸದುಪಯೋಗಪಡಿಸಿಕೊಂಡಿದ್ದು, ಸರ್ಕಾರದಿಂದ 47.30 ಕೋಟಿ ಹಣವನ್ನು ಭರಿಸಲಾಗುತ್ತಿದೆ. ರಾಜ್ಯ ಸರ್ಕಾರ ಬಿಪಿಎಲ್ ಮತ್ತು ಅಂತ್ಯೋದಯ ಪಡಿತರ ಚೀಟಿ ಹೊಂದಿರುವ ಪ್ರತಿ ವ್ಯಕ್ತಿಗೆ ಪ್ರತಿ ತಿಂಗಳು ಗರಿಷ್ಠ 10 ಕೆಜಿ ಅಕ್ಕಿ ನೀಡಲು ತೀರ್ಮಾನಿಸಿ "ಅನ್ನಭಾಗ್ಯ" ಯೋಜನೆ ಜಾರಿಗೆ ತಂದಿದೆ. ಜಿಲ್ಲೆಯಲ್ಲಿ ಒಟ್ಟು 4,77,561 ಪಡಿತರ ಕುಟುಂಬಗಳು ಈ ಯೋಜನೆ ಸದುಪಯೋಗ ಪಡೆಯುತ್ತಿದ್ದಾರೆ. ಪ್ರಾರಂಭಿಕ ಹಂತದಲ್ಲಿ 5 ಕೆಜಿ ಹೆಚ್ಚುವರಿ ಅಕ್ಕಿ ವಿತರಣೆ ಬದಲಿಗೆ ಪ್ರತಿ ಕೆಜಿಗೆ 34 ರೂ. ನಂತೆ ಪ್ರತಿ ಯೂನಿಟ್‌ಗೆ 170 ರೂಗಳಂತೆ ನೀಡುತ್ತಿದ್ದು, ಜಿಲ್ಲೆಯಲ್ಲಿ 2023 ಜುಲೈಯಿಂದ ಸೆಪ್ಟೆಂಬರ್‌ವರೆಗೆ 12,45,756 ಫಲಾನುಭವಿಗಳಿಗೆ 68.19 ಕೋಟಿ ಹಣ ಬಿಡುಗಡೆಮಾಡಲಾಗಿದೆ ಎಂದರು.

ಮಹಿಳೆಯರ ಆರ್ಥಿಕ ಸಬಲೀಕರಣದತ್ತ ದಿಟ್ಟ ಹೆಜ್ಜೆ ಇಟ್ಟಿರುವ ಸರ್ಕಾರ ಗೃಹಲಕ್ಷ್ಮಿ ಯೋಜನೆ ಜಾರಿಗೆ ತಂದಿದ್ದು, ಜಿಲ್ಲೆಯಲ್ಲಿ ಸೆಪ್ಟೆಂಬರ್ ಅಂತ್ಯದವರೆಗೆ 4,33,854 ಮಂದಿ ಮಹಿಳೆಯರು ನೊಂದಾಯಿಸಿಕೊಂಡಿದ್ದು, ಒಟ್ಟು 4,07,457 ಮಹಿಳೆಯರಿಗೆ ಈಗಾಗಲೇ 2 ಸಾವಿರದಂತೆ ಒಟ್ಟು 81.49 ಕೋಟಿ ರೂ. ಪಾವತಿಸಲಾಗಿದೆ. ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 4,47,786 ವಿದ್ಯುತ್ ಗ್ರಾಹಕರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಸೆ.ನಲ್ಲಿ 1649 ಲಕ್ಷ, ಅ.ನಲ್ಲಿ 1580 ಲಕ್ಷ ರೂ. ವಿದ್ಯುತ್ ಬಿಲ್ ಪಾವತಿಸಲಾಗಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಸೆಕೆಂಡರಿ ಕೃಷಿ ಯೋಜನೆಯಡಿ ಪ್ರಥಮ ಬಾರಿಗೆ 99 ಲಕ್ಷ ವಾರ್ಷಿಕ ಗುರಿ ನಿಗದಿಪಡಿಸಿ 60 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ 8 ರೈತ ಸಂಪರ್ಕ ಕೇಂದ್ರ ನಿರ್ಮಾಣಕ್ಕೆ 16 ಕೋಟಿ ಪ್ರಸ್ತಾವನೆಗೆ ಮಂಜೂರಾತಿ ನೀಡಲಾಗಿದೆ. ಪ್ರಧಾನ ಮಂತ್ರಿ ಫಸಲ್ ಭಿಮಾ ಬೆಳೆ ವಿಮಾ ಯೋಜನೆಯಡಿ ಮಾಡಿದ ಸಾಧನೆಗಾಗಿ ಕೇಂದ್ರ ಸರ್ಕಾರ ಜಿಲ್ಲೆಗೆ ಪ್ರಥಮ ಬಹುಮಾನ ನೀಡಿದೆ. PMFME ಯೋಜನೆಯಡಿ ಜಿಲ್ಲೆಯಲ್ಲಿ ಇದುವರೆಗೂ 142 ರೈತ ಉದ್ದಿಮೆದಾರರಿಗೆ 39.17 ಕೋಟಿ ಸಾಲ ಹಾಗೂ 12.94 ಸಹಾಯಧನ ಮಂಜೂರು ಮಾಡಲಾಗಿದೆ. ಸಿರಿಧಾನ್ಯ ಮತ್ತು ಬೆಲ್ಲದ ಬಳಕೆ ಉತ್ತೇಜಿಸಲು ಜಿಲ್ಲೆಯಲ್ಲಿ ರಾಜ್ಯಮಟ್ಟದ ಸಿರಿಧಾನ್ಯ ಮೇಳ, ವಸ್ತು ಪ್ರದರ್ಶನ ಹಾಗೂ ಬೆಲ್ಲದ ಪರಿಷೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಮೈಸೂರು ಸಕ್ಕರೆ ಕಂಪನಿ ಪ್ರಸಕ್ತ ಸಾಲಿನಲ್ಲಿ ಜು.6 ರಂದು ಕಬ್ಬು ನುರಿಯಲು ಪ್ರಾರಂಭಿಸಿ ಇಲ್ಲಿವರೆಗೆ 2,25,000 ಮೆಟ್ರಿಕ್ ಟನ್ ಕಬ್ಬು ನುರಿಸಿ 1,58,000 ಕ್ವಿಂಟಾಲ್ ಸಕ್ಕರೆ ಉತ್ಪಾದಿಸಲಾಗಿದೆ ಎಂದರು.

ಪ್ರಸ್ತುತ ಅ.10ವರೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ 54.34 ಕೋಟಿ ಹಣ ಸಂದಾಯ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ 5 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಯುವ ಗುರಿ ಹೊಂದಲಾಗಿದೆ. ಅಂದಾಜು 4 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದನೆ ಮಾಡಬಹುದಾಗಿದೆ. ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆಯಡಿ ನಿವೇಶನ ರಹಿತರಿಗೆ ನಿವೇಶನ ಹಂಚಲು 137.06 ಎಕರೆ ಜಮೀನು ಲಭ್ಯವಿದ್ದು, ಸದರಿ ಜಮೀನಿನಲ್ಲಿ 3960 ನಿವೇಶನಗಳನ್ನು ನೀಡಲು ಉದ್ದೇಶಿಸಿದ್ದು, ಇಲ್ಲಿವರೆಗೆ 995 ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ನೀಡಲು ಕ್ರಮವಹಿಸಲಾಗಿದ್ದು, 706 ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಬಾಕಿ ಉಳಿದ 2965 ನಿವೇಶನಗಳನ್ನು ನಿವೇಶನ ರಹಿತರಿಗೆ ಹಂಚಲು ಕ್ರಮವಹಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕರಾದ ಪಿ.ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ಜಿಪಂ ಸಿಇಓ ಶೇಖ್ ತನ್ವೀರ್ ಆಸಿಫ್, ಎಡಿಸಿ ಡಾ.ಹೆಚ್.ಎಲ್.ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ಪ್ರತಿಯೊಬ್ಬರೂ ನಾಡು, ನುಡಿ ಬಗ್ಗೆ ಅಭಿಮಾನ ಹೊಂದಬೇಕು




ಕೆ.ಆರ್.ಪೇಟೆ, ನ.2– ಪ್ರತಿಯೊಬ್ಬರೂ ನಾಡು, ನುಡಿ ಬಗ್ಗೆ ಅಭಿಮಾನ ಹೊಂದಬೇಕು ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಪಟ್ಟಣದ ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಹಾಗೂ ನಾಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಜಾತಿಬೇಧವಿಲ್ಲದೇ ಆಚರಿಸುವ ಹಬ್ಬ ಕನ್ನಡ ರಾಜ್ಯೋತ್ಸವ ಎಂದರು. ಉಪನ್ಯಾಸಕ ರೇವಣ್ಣ ಪ್ರಧಾನ ಭಾಷಣ ಮಾಡಿದರು. ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ನಾದಸ್ವರ ಕಲಾವಿದ ಹೆಚ್.ಕೆ.ಸಿದ್ದರಾಜು, ಮಿಮಿಕ್ರಿ ಮತ್ತು ಜಾನಪದ ಕಲಾವಿದ ಐ.ಕೆ ಜಗದೀಶ್, ಸ್ಯಾಕ್ಸೋಫೋನ್ ಕಲಾವಿದ ಹೆಚ್.ಎ.ಪ್ರಜ್ವಲ್ ಸೇರಿದಂತೆ ಇನ್ನಿತರರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ತಹಸೀಲ್ದಾರ್ ನಿಸರ್ಗಪ್ರಿಯ, ತಾಪಂ ಇಓ ಬಿ.ಎಸ್.ಸತೀಶ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್, ಕಸಾಪ ಅಧ್ಯಕ್ಷ ಹೆಚ್.ಆರ್.ಪೂರ್ಣಚಂದ್ರ ತೇಜಸ್ವಿ, ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯ ರವಿಕುಮಾರ್, ಪುರಸಭಾ ಸದಸ್ಯ ತಿಮ್ಮೇಗೌಡ, ಗಿರೀಶ್, ಮಾಜಿ ಸದಸ್ಯ ಹೇಮಂತ್, ಪುರಸಭಾ ಮುಖ್ಯಾಧಿಕಾರಿ ಜಗನ್‌ರೆಡ್ಡಿ, ಕರವೇ ಪದವೀಧರ ಘಟಕದ ಅಧ್ಯಕ್ಷ ಚೇತನ್ ಕುಮಾರ್, ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಸೋಮಶೇಖರ್, ಜೆಡಿಎಸ್ ಮುಖಂಡ ಲೋಕೇಶ್, ಸಿಪಿಐ ಸುಮಾರಾಣಿ, ಜಗದೀಶ್, ಕಾವೇರಿ ನೀರಾವರಿ ನಿಗಮದ ಇಇ ಕಿಜರ್ ಅಹಮದ್, ಶಾಸಕರ ಆಪ್ತ ಸಹಾಯಕ ಪ್ರತಾಪ್ ಇನ್ನಿತರರಿದ್ದರು. ಇದಕ್ಕೂ ಮುನ್ನಾ ಪಟ್ಟಣದ ಶತಮಾನ ಶಾಲಾವರಣದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಕ್ರೀಡಾಂಗಣದವರಿಗೆ ತಾಯಿ ಭುವನೇಶ್ವರಿ ಭಾವಚಿತ್ರ ಮೆರವಣಿಗೆ ನಡೆಯಿತು. ಬಳಿಕ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಸಾರ್ವಜನಿಕರನ್ನು ರಂಜಿಸಿತು.

ನಾಗರಾಜೇಗೌಡ ನಿಧನ



ಕೆ.ಆರ್.ಪೇಟೆ: ಪಟ್ಟಣದ ಹೇಮಾವತಿ ಬಡಾವಣೆ ನಿವಾಸಿ, ನಿವೃತ್ತ ಸಹಾಯಕ ಕೃಷಿ ಅಧಿಕಾರಿ ನಾಗರಾಜೇಗೌಡ(70) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಆರು ಮಂದಿ ಸಹೋದರರು, ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತ ದೇಹವನ್ನು ಶ್ರೀಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ನೀಡಲಾಯಿತು.

ವಿದ್ಯಾರ್ಥಿಗಳನ್ನು ಪೊಲೀಸ್ ಠಾಣೆಗೆ ಕರೆತಂದ ಸಾರಿಗೆ ಅಧಿಕಾರಿಗೆ ಮಾಜಿ ಸಚಿವ ಪುಟ್ಟರಾಜು ತರಾಟೆ

ಪಾಂಡವಪುರ, ನ.2– ಬಸ್ ನಿಲುಗಡೆಗಾಗಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳನ್ನು ಪೊಲೀಸ್ ಠಾಣೆಗೆ ಕರೆತಂದ ಸಾರಿಗೆ ಅಧಿಕಾರಿಯನ್ನು ಗುರುವಾರ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತರಾಟೆಗೆ ತೆಗೆದುಕೊಂಡರು.

ತಾಲೂಕಿನ ಟಿ.ಎಸ್.ಛತ್ರ ಬಳಿ ಶಾಲೆಗೆ ತೆರಳಲು ವಿದ್ಯಾರ್ಥಿಗಳು ಬಸ್ ಕಾಯುತ್ತಿದ್ದ ಸಂದರ್ಭ ನಾಗಮಂಗಲ ಕಡೆಯಿಂದ ಬಂದ ಸಾರಿಗೆ ಬಸ್‌ಗಳು ನಿಲ್ಲಿಸದೆ ಮುಂದೆ ಹೋಗಿವೆ ಇದರಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ಬಸ್ ತಡೆದು ಪ್ರತಿಭಟನೆ ನಡೆಸಿದರು. ವಿಷಯ ತಿಳಿದು ಸಾರಿಗೆ ಡಿಪೋ ಮ್ಯಾನೇಜರ್ ಅಪ್ಪಿರೆಡ್ಡಿ ಸ್ಥಳಕ್ಕಾಗಮಿಸಿದ ವೇಳೆ ವಿದ್ಯಾರ್ಥಿಗಳು ಸಾರಿಗೆ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿದ್ದಾರೆ. ಈ ವೇಳೆ ಬಸ್‌ಗಳು ಗ್ರಾಮದ ಬಳಿ ನಿಲ್ಲಿಸದೇ ಹೋಗುವುದರಿಂದ ನಿತ್ಯ ನಮಗೆ ಶಾಲೆಗೆ ಹೋಗಲು ತೊಂದರೆಯಾಗುತ್ತಿದೆ ಎಂದು ವಿದ್ಯಾರ್ಥಿಗಳು ಡಿಪೋ ಮ್ಯಾನೇಜರ್ ಅವರನ್ನು ತರಾಟೆ ತೆಗೆದುಕೊಂಡಿದ್ದಾರೆ. ಇದರಿಂದ



ಆಕ್ರೋಶಗೊಂಡ ಸಾರಿಗೆ ಅಧಿಕಾರಿ ಅಪ್ಪಿರೆಡ್ಡಿ ಮೂವರು ಶಾಲಾ ವಿದ್ಯಾರ್ಥಿಗಳನ್ನು ಸಾರಿಗೆ ಬಸ್‌ನಲ್ಲಿ ಪೊಲೀಸ್ ಠಾಣೆಗೆ ಕರೆತಂದು ಕೇಸ್ ದಾಖಲಿಸಲು ಮುಂದಾಗಿದ್ದಾರೆ. ಈ ವೇಳೆ ತಕ್ಷಣ ಗ್ರಾಮಸ್ಥರು ಮಾಜಿ ಸಚಿವ ಪುಟ್ಟರಾಜು ಅವರಿಗೆ ವಿಷಯ ಮುಟ್ಟಿಸಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಗೆ ಆಗಮಿಸಿದ ಸಿ.ಎಸ್.ಪುಟ್ಟರಾಜು ಅವರು ಸಾರಿಗೆ ಮ್ಯಾನೇಜರ್ ಅಪ್ಪಿರೆಡ್ಡಿ ಅವರನ್ನು ತರಾಟೆಗೆ ತೆಗೆದುಕೊಂಡರು. ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಶಾಲಾ ಕಾಲೇಜಿಗೆ ತೆರಳಲು ಸೂಕ್ತ ಬಸ್ ವ್ಯವಸ್ಥೆ ಕಲ್ಪಿಸಿ. ಅದನ್ನು ಬಿಟ್ಟು ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳನ್ನು ಪೊಲೀಸ್ ಠಾಣೆಗೆ ಕರೆ ತಂದಿದ್ದೀರಿ. ಸಾರಿಗೆ ಅಧಿಕಾರಿಯಾಗಿ ಜವಾಬ್ದಾರಿಯಿಂದ ನಡೆದುಕೊಳ್ಳಿ. ತಾಲೂಕಿನಲ್ಲಿ ವಿದ್ಯಾರ್ಥಿಗಳಿಗೆ ಬಸ್ ಸಮಸ್ಯೆ ಎದುರಾದರೇ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಬಳಿಕ ವಿದ್ಯಾರ್ಥಿಗಳನ್ನು ಪೊಲೀಸ್ ಠಾಣೆಯಿಂದ ವಾಪಸ್ಸು ಶಾಲೆಗೆ ಕಳುಹಿಸಿಕೊಟ್ಟರು.

ಬರ ಪರಿಹಾರಕ್ಕೆ ಕೇಂದ್ರ ನಯಾ ಪೈಸೆ ನೀಡಿಲ್ಲ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಕ್ರೋಶ

- ಬರ ಅಧ್ಯಯನಕ್ಕೆ ಬಿಜೆಪಿಯಲ್ಲಿ ಪೈಪೋಟಿ
- ಕೇಂದ್ರಕ್ಕೆ ರಾಜ್ಯ 4.50 ಲಕ್ಷ ಕೋಟಿ ನೀಡುತ್ತಿದೆ
- ಬಿಜೆಪಿ ನಾಯಕರು ತಮಾಷೆ ನೋಡುತ್ತಿದ್ದಾರೆ



ಮೈಸೂರು, ನ.2(ಬಿಎಲ್ ಯು)– ಬರ ಪ್ರದೇಶದಲ್ಲಿ ಪರಿಹಾರ ಕಾರ್ಯ ಕೈಗೊಳ್ಳಲು ಕರ್ನಾಟಕ ಸರ್ಕಾರ 30 ಸಾವಿರ ಕೋಟಿ ರೂಪಾಯಿ ಬೇಡಿಕೆ ಇಟ್ಟಿದ್ದು, ಕೇಂದ್ರ ಸರ್ಕಾರ ಈ ತನಕ ನಯಾ ಪೈಸೆ ಹಣ ನೀಡಿಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದ ನೂರಾರು ತಾಲೂಕುಗಳಲ್ಲಿ ಬರಗಾಲವಿದೆ. ಇದಕ್ಕಾಗಿ 30,370 ಕೋಟಿ ರೂಪಾಯಿ ಅವಶ್ಯವಿದ್ದು, ಮೊದಲ ಹಂತದಲ್ಲಿ 17,537 ಕೋಟಿ ರೂಪಾಯಿ ನೀಡುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಮನವಿ ಮಾಡಿದೆ. ಆದರೆ ಈ ತನಕ ಒಂದು ಪೈಸೆ ಹಣವನ್ನು ಕೇಂದ್ರ ಸರ್ಕಾರ ನೀಡಿಲ್ಲ ಎಂದು ಕಿಡಿಕಾರಿದರು.

ಕೇಂದ್ರ ಸರ್ಕಾರದ ಬರ ಅಧ್ಯಯನ ತಂಡ ಪರಿಶೀಲನೆ ಮಾಡಿ ದೆಹಲಿಗೆ ವಾಪಸ್ಸಾಗಿ ಹಲವು ದಿನಗಳಾಗಿದ್ದರೂ ಈ ತನಕ ಹಣ ನೀಡಿಲ್ಲ. ಬರ ಪರಿಹಾರ ನೀಡುವಂತೆ ಕರ್ನಾಟಕದ 25 ಸಂಸದರಲ್ಲಿ ಒಬ್ಬನೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿಲ್ಲ. ಕನಿಷ್ಠ ಪಕ್ಷ ಒಂದು ಪತ್ರವನ್ನು ಬರೆದಿಲ್ಲ. ಹೀಗಿರುವಾಗ ಬಿಜೆಪಿ ನಾಯಕರು ಪ್ರತಿ ಜಿಲ್ಲೆಯಲ್ಲಿ ಅಧ್ಯಯನ ಮಾಡುತ್ತಾರಂತೆ. ಮಡಿಕೇರಿಯಂತಹ ಕೆಲವು ಜಿಲ್ಲೆಗಳಲ್ಲಿ ಅಧ್ಯಯನ ಮಾಡಲು ಪೈಪೋಟಿ ಮಾಡುತ್ತಿದ್ದಾರಂತೆ ಎಂದು ಲಕ್ಷ್ಮಣ ಗೇಲಿ ಮಾಡಿದರು.

ಜಿಎಸ್‌ಟಿ ಸೇರಿದಂತೆ ಹಲವು ತೆರಿಗೆಗಳಿಂದ ಕರ್ನಾಟಕ ಸರ್ಕಾರ ಕೇಂದ್ರಕ್ಕೆ 4.50 ಲಕ್ಷ ಕೋಟಿ ಆದಾಯ ನೀಡುತ್ತಿದೆ. ಇದರಲ್ಲಿ ಶೇಕಡ 42 ರಷ್ಟು ಹಣವನ್ನು ರಾಜ್ಯಕ್ಕೆ ನೀಡಬೇಕೆಂಬ ನಿಯಮವಿದೆ. ಆದರೆ ಕೇಂದ್ರ ಸರ್ಕಾರ ಕರ್ನಾಟಕಕ್ಕೆ 52 ಸಾವಿರ ಕೋಟಿ ರೂಪಾಯಿ ಮಾತ್ರ ನೀಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಸ್ಥರಲ್ಲೇ ಅಸಮಾಧಾನವಿದ್ದರೆ ಕಾರ್ಯಕರ್ತರ ಪಾಡೇನು!

ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಕಾಂಗ್ರೆಸ್‌ನಲ್ಲಿ ಕಂದಕ ಉಂಟು ಮಾಡಲು ಯತ್ನಿಸುತ್ತಿರುವ ಸಂದರ್ಭದಲ್ಲಿ ಸರ್ಕಾರದಲ್ಲಿ ಅಧಿಕಾರದಲ್ಲಿ ಇರುವವರೆ ಅಸಮಾಧಾನ ಹೊರ ಹಾಕಿದರೆ, ಸಾಮಾನ್ಯ ಕಾರ್ಯಕರ್ತರ ಪಾಡೇನು ಎಂದು ಪ್ರಶ್ನಿಸಿದ ಲಕ್ಷ್ಮಣ್, ಹೀಗೆ ಬಹಿರಂಗವಾಗಿ ಅಸಮಾಧಾನ ಹೊರ ಹಾಕಿದರೆ ವಿಪಕ್ಷಗಳಿಗೆ ಆಹಾರ ಕೊಟ್ಟಂತಾಗುತ್ತದೆ ಎಂದರು. ಕಾರ್ಯಕರ್ತರು ಬೆವರು ಸುರಿಸಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ಮಂತ್ರಿಗಳು ಮೊದಲು ಕಾರ್ಯಕರ್ತರಿಗೆ ಪ್ರಾಮುಖ್ಯತೆ ನೀಡಬೇಕು. ಅಧಿಕಾರದಲ್ಲಿ ಇಲ್ಲದಾಗ ನಾಪತ್ತೆಯಾಗಿದ್ದವರು ಈಗ ಬಂದರೆ ಸಚಿವರು ಅವರನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಹೋಗಬಾರದು ಎಂದು ಮನವಿ ಮಾಡಿದರು.

ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ ಎಂಬ ಕೆಲವು ಸಚಿವರ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಲಕ್ಷ್ಮಣ, ಪಕ್ಷದ ಯಾವುದೇ ವಿಚಾರವಾಗಿ ಯಾರೂ ಬಹಿರಂಗ ಹೇಳಿಕೆ ನೀಡದಂತೆ ಹೈಕಮಾಂಡ್ ತಾಕೀತು ಮಾಡಿದೆ. ನನಗೆ ಬೆದರಿಕೆ ಹಾಕಿರುವವರ ಬಗ್ಗೆ ಮೊಬೈಲ್ ನಂಬರ್ ಸಹಿತ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಪೊಲೀಸರು ಎಫ್‌ಐಆರ್ ಕೂಡ ದಾಖಲಿಸಿದ್ದಾರೆ. ಆದರೆ ಇನ್ನು ಕೂಡ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ ಎಂದು ಲಕ್ಷ್ಮಣ್ ಅಸಮಾಧಾನ ವ್ಯಕ್ತಪಡಿಸಿದರು. ಈ ವಿಚಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತಂದಿದ್ದೇನೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಸೂಚನೆ ನೀಡಿದರು. ಆದರೂ ಯಾಕೆ ಕ್ರಮ ಕೈಗೊಂಡಿಲ್ಲ ಎಂಬುವುದು ಗೊತ್ತಿಲ್ಲ ಎಂದು ಲಕ್ಷ್ಮಣ್ ತಿಳಿಸಿದರು.

ವಾಲ್ಮೀಕಿ ಪ್ರತಿಮೆ ಸ್ಥಾಪಿಸಿ ಇಲ್ಲ ವಿವೇಕಾನಂದರ ಪ್ರತಿಮೆ ತೆರವುಗೊಳಿಸಿ

ಮೈಸೂರು ಪಾಲಿಕೆ ಆಯುಕ್ತರಿಗೆ ಕಾರ್ಪೋರೇಟರ್ ಲೋಕೇಶ್ ಪಿಯಾ ಮನವಿ




ಮೈಸೂರು, ನ.2(ಎಂಕೆ)– ಮೈಸೂರು ತಾಲೂಕು ಕಚೇರಿ ಎದುರಿನ ಉದ್ಯಾನವನದಲ್ಲಿದ್ದ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ತೆರವುಗೊಳಿಸಿದಂತೆ ಸ್ವಾಮಿ ವಿವೇಕಾನಂದರ ಪ್ರತಿಮೆಯನ್ನು ತೆರವುಗೊಳಿಸಿ. ಇಲ್ಲವೇ ಮಹರ್ಷಿ ವಾಲ್ಮೀಕಿಯವರ ಪ್ರತಿಮೆ ಸ್ಥಾಪನೆಗೆ ಅವಕಾಶ ಕೊಡಿ ಎಂದು ನಗರಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಪಾಲಿಕೆ ಆಯುಕ್ತರಿಗೆ ಗುರುವಾರ ಮನವಿ ಸಲ್ಲಿಸಿದರು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ತಾಲೂಕು ಕಚೇರಿ (ಮಿನಿ ವಿಧಾನಸೌಧ) ಎದುರಿನ ಉದ್ಯಾನವನದಲ್ಲಿ ಸ್ಥಾಪಿಸಲಾಗಿದ್ದ ಮಹರ್ಷಿ ವಾಲ್ಮೀಕಿಯವರ ಪ್ರತಿಮೆಯನ್ನು ರಾತ್ರೋರಾತ್ರಿ ತೆರವುಗೊಳಿಸುವ ಮೂಲಕ ಸಮುದಾಯವನ್ನು ಅವಮಾನಿಸಲಾಗಿದೆ. ಸುಪ್ರೀಂಕೋರ್ಟ್ ಆದೇಶದಂತೆ ಪ್ರತಿಮೆ ಸ್ಥಾಪನೆಗೆ ಅವಕಾಶವಿಲ್ಲವೆಂದ ಮೇಲೆ ಈಗಾಗಲೇ ಇದ್ದಂತಹ ಸ್ವಾಮಿ ವಿವೇಕಾನಂದರ(ಸ್ವಾಮಿ ವಿವೇಕಾನಂದ ವೃತ್ತ) ಪ್ರತಿಮೆ ಒಡೆದು ಹಾಕಿ ಹೊಸದಾಗಿ ನಿರ್ಮಿಸುತ್ತಿರುವುದೇಕೆ ಎಂದು ಪ್ರಶ್ನಿಸಿದರು.

ಅ.28 ರಂದು ನಡೆದ ಮಹರ್ಷಿ ವಾಲ್ಮೀಕಿಯವರ ಜಯಂತಿಯಂದು ಅನಾವರಣಗೊಳಿಸಲಾಗಿದ್ದ ಪ್ರತಿಮೆಯನ್ನು ತೆರವುಗೊಳಿಸಲು ಪಾಲಿಕೆ ಆಯುಕ್ತರು, ಮೇಯರ್ ಆದೇಶ ನೀಡಿದ್ದಾರೆ ಎಂದು ಪಾಲಿಕೆ ಅಧಿಕಾರಿಗಳು ಹೇಳುತ್ತಿದ್ದಾರೆ. ಹಾಗಾದರೆ 4–5 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ವಿವೇಕಾನಂದರ ಪ್ರತಿಮೆ ನಿರ್ಮಾಣಕ್ಕೆ ಸುಪ್ರೀಂ ಕೋರ್ಟ್ ಆದೇಶ ಅನ್ವಯವಾಗುವುದಿಲ್ಲ ಎಂದ ಅವರು, ತಾವು ತಿಳಿಸಿದ ಕಾನೂನಿನ ಮೇಲೆ ನಮಗೆ ಗೌರವವಿದೆ. ನಿಮಗೂ ಗೌರವವಿದ್ದರೆ ವಿವೇಕಾನಂದರ ಪ್ರತಿಮೆ ನಿರ್ಮಾಣ ಕಾಮಗಾರಿ ನಿಲ್ಲಿಸಲು ಆದೇಶ ನೀಡಿ ಎಂದು ಆಗ್ರಹಿಸಿದರು.

ಪ್ರತಿಭಟನೆ ಎಚ್ಚರಿಕೆ: ಮೈಸೂರು ತಾಲೂಕು ಕಚೇರಿ ಎದುರು ಮಹರ್ಷಿ ವಾಲ್ಮೀಕಿ ಪ್ರತಿಮೆ ಸ್ಥಾಪನೆಗೆ ಅವಕಾಶ ಕೊಡಿ. ಇಲ್ಲವೇ ವಿವೇಕಾನಂದರ ಪ್ರತಿಮೆಯನ್ನು ತೆರವುಗೊಳಿಸಿ. ಎರಡೂ ಆಗದಿದ್ದರೆ ಪ್ರತಿಭಟನೆ ಹಾದಿ ಹಿಡಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರಲ್ಲದೆ ಪ್ರತಿಮೆ ಅನಾವರಣಕ್ಕೆ ನಮ್ಮೊಂದಿಗೆ ಜೊತೆಗಿದ್ದು, ಬಳಿಕ ಪ್ರತಿಮೆ ತೆರವುಗೊಳಿಸಲು ಆದೇಶ ನೀಡಿದ ಮೇಯರ್ ಶಿವಕುಮಾರ್ ಅವರಿಗೆ ಸಮುದಾಯದ ಮತದಾರರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ. ಮೇಯರ್ ಅವಧಿ ಮುಕ್ತಾಯವಾಗಿದೆ ಎಂಬುದು ತಮ್ಮ ಗಮನದಲ್ಲಿರಲಿ ಎಂದು ಪರೋಕ್ಷವಾಗಿ ಕಿಡಿಕಾರಿದರು.

ಶ್ರೀ ಕಾವೇರಿ ಕೊಡವ ಒಕ್ಕೂಟದ ವಾರ್ಷಿಕ ಕೂಟ



ಮೈಸೂರು, ನ2– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕೊಡಗು ಸಹಕಾರ ಸಂಘದಲ್ಲಿ ಎನ್.ಆರ್. ಮೊಹಲ್ಲಾ ಶ್ರೀ ಕಾವೇರಿ ಕೊಡವ ಒಕ್ಕೂಟದ ವಾರ್ಷಿಕ ಕೂಟ ನಡೆಯಿತು.

ಕೊಡವ ಸಾಂಸ್ಕೃತಿಕ ಕಾರ್ಯಕ್ರಮ ಗಳು ಹಾಗೂ ಕ್ರೀಡಾ ಚಟುವಟಿಕೆಗಳ ಮೂಲಕ ಚಾಲನೆ ಪಡೆದ ವಾರ್ಷಿಕಕೂಟದಲ್ಲಿ ಚೊಟ್ಟೆಮಂಡ ಗೀತಾ ಉತ್ತಪ್ಪ ಹಾಗೂ ಕೊಡವ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಒಕ್ಕೂಟದ ಅಧ್ಯಕ್ಷರಾದ ಮಲ್ಲೇಗಡ ಎ.ಪೆಮ್ಮಯ್ಯ, ಕಾರ್ಯದರ್ಶಿ ಕೋಡಿರ ಪ್ರಕಾಶ್ ನಾಣಯ್ಯ, ಖಜಾಂಚಿ ತಾತಂಡ ಬಿಡಪ್ಪ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ನೂತನ ಪದಾಧಿಕಾರಿಗಳ ಆಯ್ಕೆ: ಇದೇ ವೇಳೆ 2023–24ನೇ ನೂತನ ಅಧ್ಯಕ್ಷರನ್ನಾಗಿ ಕೋಡಿರ ಪ್ರಕಾಶ್ ನಾಣಯ್ಯ, ಕಾರ್ಯದರ್ಶಿಯಾಗಿ ಮಡೆತಿರ ಸುನೀಲ್ ಸೋಮಣ್ಣ, ಖಜಾಂಚಿಯಾಗಿ ತಾತಂಡ ಬಿಡ್ಡಪ್ಪ ಸೇರಿದಂತೆ ಇನ್ನಿತರ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಹಂಪಿ ದೇವಾಲಯ ಬಳಿಯ ಭೂಸ್ವಾಧೀನ ರದ್ದುಪಡಿಸಿದ ಹೈಕೋರ್ಟ್

ಬೆಂಗಳೂರು : ಹಂಪಿಯಲ್ಲಿರುವ ಉಗ್ರ ನರಸಿಂಹ ಮತ್ತು ಬಡವಿಲಿಂಗ ದೇವಾಲಯಗಳ ಸಂರಕ್ಷಿತ ಸ್ಮಾರಕಗಳಿರುವ ಜಾಗದಲ್ಲಿ ಮೂಲಸೌಕರ್ಯ ಸುಧಾರಣೆಗೆ ಸುಮಾರು ಏಳು ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿದ್ದ ಸರ್ಕಾರದ ಕ್ರಮವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಹೊಸಪೇಟೆ ತಾಲೂಕಿನ ಕೃಷ್ಣಾಪುರ ಮತ್ತು ಕಮಲಾಪುರ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಭೂಮಿ ಸ್ವಾಧೀನ ಪಡಿಸಿಕೊಂಡಿರುವುದನ್ನು ಪ್ರಶ್ನಿಸಿ, 2007ರಲ್ಲಿ ನಿಡಶೇಷಿ ವೀರಣ್ಣ ಮತ್ತಿತರರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಧಾರವಾಡ ನ್ಯಾಯಪೀಠ, ಭೂಸ್ವಾಧೀನ ಮಾಡಿಕೊಂಡು 2006ರ ಏ. 5 ರಂದು ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿದೆ. ಸರ್ಕಾರ ಸ್ವಾಧೀನಪಡಿಸಿಕೊಂಡಿರುವ ಭೂಮಿ ಬಡ ರೈತರ ಜೀವನಾಡಿಯಾಗಿದೆ.

ಈ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಯಾವುದೇ ನೈತಿಕ ಕಾರಣಗಳಿಲ್ಲ. ರಾಷ್ಟ್ರೀಯ ಸ್ಮಾರಕಗಳ ಸುಂದರೀಕರಣಕ್ಕಾಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿರುವುದರಿಂದ ಅರ್ಜಿದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸುವ ಮೂಲಕ ವಿಚಾರಣೆಗೆ ಅರ್ಹರಾಗಿರುತ್ತಾರೆ. ಅದಕ್ಕಾಗಿ ತುರ್ತು ಷರತ್ತು ವಿಧಿಸಿ ಅವುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದಿಲ್ಲ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿದೆ.

ಮಹಿಳಾ ಉದ್ಯೋಗಿಗಳು ತಮ್ಮ ವೃತ್ತಿ ಬೆಳವಣಿಗೆಗೆ 'ನೆಟ್‌ವರ್ಕಿಂಗ್' ಅಳವಡಿಸಿಕೊಳ್ಳಲು ಸಲಹೆ

ವುಮೆನ್ ಅಟ್ ವರ್ಕ್ ಸಮಾವೇಶ ಉದ್ದೇಶಿಸಿ ಕೆಡಿಇಎಂ ಸಿಇಓ ಸಂಜೀವ್ ಗುಪ್ತಾ ಟಿಪ್ಸ್

ಮೈಸೂರು, ನ.2(ಎಂಕೆ)– ದೇಶದ ಆರ್ಥಿಕತೆಗೆ ಮಹಿಳೆಯರ ಕೊಡುಗೆ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಉದ್ಯೋಗಿಗಳು ತಮ್ಮ ವೃತ್ತಿ ಬೆಳವಣಿಗೆಯಲ್ಲಿ 'ನೆಟ್‌ವರ್ಕಿಂಗ್' ಅಳವಡಿಸಿಕೊಳ್ಳುವಂತೆ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡಿಇಎಂ)ನ ಸಿಇಓ ಸಂಜೀವ್ ಗುಪ್ತಾ ಸಲಹೆ ನೀಡಿದರು.

ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿರುವ ಸಭಾಂಗಣದಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ (ಕೆಎಸ್‌ಡಿಸಿ) ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಎರಡು ದಿನಗಳ 'ದಿ ಬಿಗ್‌ಟೆಕ್ ಶೋ–2023'ನಲ್ಲಿ 'ವುಮೆನ್ ಅಟ್ ವರ್ಕ್' ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, 'ನೆಟ್‌ವರ್ಕಿಂಗ್' ಮೂಲಕ ಹೆಚ್ಚು ಜನರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ. ವೃತ್ತಿಪರ ಬೆಳವಣಿಗೆಗಷ್ಟೇ ಅಲ್ಲದೆ ಹೊಸ ಕ್ಷೇತ್ರಕ್ಕೆ ಕಾಲಿಡಲು ಸಹ ಸಂಪರ್ಕ ಜಾಲ ಅನುಕೂಲಕರವಾಗಿದೆ. ಮಹಿಳೆಯರಿಗೆ ಉದ್ಯೋಗಗಳಷ್ಟೇ ಅಲ್ಲದೆ ಉತ್ಪಾದನಾ ವಲಯ ವಿಫುಲ ಅವಕಾಶಗಳಿವೆ ಎಂದು ತಿಳಿಸಿದರು.

ಕಲಾಂ ಕಿವಿಮಾತು ನೆನಪು: ಒಮ್ಮೆ ಕೆಲಸದ ನಿಮಿತ್ತ ಎಪಿಜೆ ಅಬ್ದುಲ್ ಕಲಾಂ ಅವರನ್ನು ಭೇಟಿಯಾಗುವ ಅವಕಾಶ ಸಿಕ್ಕಿತ್ತು. ಜೊತೆಯಲ್ಲಿ ಚಹಾ ಕುಡಿಯೋಣ ಎಂದು ಕಲಾಂ ಅವರು ಹೇಳಿದಾಗ, ಸಂಕೋಚದಿಂದ ಬೇಡ ಎಂದಿದ್ದೆ. ಆಗ ಅವರು, ಹೊರಗೆ ಜನರನ್ನು ಭೇಟಿಯಾದಾಗ ಅವರೊಂದಿಗೆ ಸಮಯ ಕಳೆಯಲು ದೊರೆಯುವ ಅವಕಾಶವನ್ನು ಕಳೆದುಕೊಳ್ಳಬಾರದು. ಹೊಸಬರೊಂದಿಗಿನ



ಮಾತುಕತೆಯ ಮೂಲಕ ಹೊಸ ಅವಕಾಶಗಳು ಬಾಗಿಲು ತೆರೆಯಬಹುದು ಎಂದಿದ್ದರು. ಅಂದಿನಿಂದ 'ನೆಟ್‌ವರ್ಕಿಂಗ್' ಶುರು ಮಾಡಿದ್ದೇನೆ. ನೀವು ಈ ಅಭ್ಯಾಸ ರೂಢಿಸಿಕೊಳ್ಳಿ ಎಂದರು.

ನಮ್ಮ ದೇಶದಲ್ಲಿ ಶೇ.30ರಷ್ಟು ಮಹಿಳೆಯರು ಹೆರಿಗೆ ರಜೆ ನಂತರ ಕೆಲಸಕ್ಕೆ ವಾಪಸ್ ಬರುವುದಿಲ್ಲ. ಆದರೆ, ರಜೆ ನಂತರ ಕೆಲಸಕ್ಕೆ ಮರಳಲು ಸಾಕಷ್ಟು ಅವಕಾಶವಿದೆ. ಸಬೂಬು ಹೇಳದೆ ಮಹಿಳೆಯರು ಕೆಲಸಕ್ಕೆ ಬರಲು ಮನಸ್ಸು ಮಾಡಬೇಕು. ಇಂಥಹ ಮಹಿಳೆಯರಿಗೆ ತರಬೇತಿ ಜೊತೆಗೆ ಉದ್ಯೋಗಾವಕಾಶ ಅವಕಾಶ ನೀಡಲು ಐಬಿಎಂ ಸೇರಿದಂತೆ ಹಲವು ಕಂಪನಿಗಳು ಸಿದ್ಧವಾಗಿವೆ. ಹಾಗೆಯೇ ಮಹಿಳೆಯರು ಕಚೇರಿಯಲ್ಲಿ ಸಿಗಬೇಕಾದ ಬಡ್ತಿ, ವೇತನ ಹೆಚ್ಚಳ, ಉನ್ನತ ಸ್ಥಾನಮಾನವನ್ನು ಕೇಳಿ ಪಡೆಯಬೇಕು. ಆತ್ಮವಿಶ್ವಾಸ ಮಹಿಳೆಯರ ದಿವ್ಯ ಮಂತ್ರವಾಗಬೇಕು. ಈ ಮೂಲಕ ನಾಯಕತ್ವದ ಸ್ಥಾನಕ್ಕೇರಬಹುದು. ಸ್ವಂತ ಉದ್ಯಮ ಕಟ್ಟಿ ಬೆಳೆಸಬಹುದು. ಎಲ್ಲದಕ್ಕೂ ನೆಟ್‌ವರ್ಕಿಂಗ್ ಬಹಳ ಮುಖ್ಯವಾಗುತ್ತದೆ ಎಂದು ಸಮಾವೇಶದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿಯರಲ್ಲಿ ಆತ್ಮವಿಶ್ವಾಸ ತುಂಬಿದರು. ಬಳಿಕ ಸಂವಾದ ಕಾರ್ಯಕ್ರಮ ನಡೆಯಿತು.

ವಿಎಂವೇರ್‌ನ ನಿರ್ದೇಶಕರಾದ ಸೌಮ್ಯ ವಿ.ಕುಮಾರನ್, ಇಂಡೋ–ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್‌ನ ಕರ್ನಾಟಕದ ಅಧ್ಯಕ್ಷ ಬಿ.ಎನ್.ಚಂದ್ರಕಾಂತ್, ಡಿಆರ್‌ಐಎಂ ಏಷ್ಯಾ ಮುಖ್ಯಸ್ಥರಾದ ಯೂಲಿಯಾ ಅಸ್ಲಾಮೋವಾ, ಐಬಿಎಂನ ಗ್ಲೋಬಲ್ ಗವರ್ನಮೆಂಟ್ ಎಕ್ಸಿಕ್ಯೂಟಿವ್ ಲಾವಣ್ಯ ರಘುರಾಮನ್, ಅಕ್ನಾ ಮೆಡಿಕಲ್ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷರಾದ ಸಿ.ಅಪರ್ಣಾ, ಜಿನೋಟೈಪಿಕ್ ಟೆಕ್ನಾಲಜಿ ಪ್ರೈವೇಟ್‌ನ ಕಾರ್ಯನಿರ್ವಾಹಕ ನಿರ್ದೇಶಕಿ ಸುಧಾ ರಾವ್, ವಿಪ್ರಜೆನ್ ಬಯೋಸೈನ್ಸ್ ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಚೈತ್ರಾ ಹರ್ಷ ಮತ್ತಿತರರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಬಿ.ಇಡಿ ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ಮೈಸೂರು, ನ.2–ಮೈಸೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯವು 2023–24ನೇ ಸಾಲಿನಲ್ಲಿ 2 ವರ್ಷಗಳ ಬಿ.ಇಡಿ ದಾಖಲಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ರಾಜ್ಯದ ಸರ್ಕಾರಿ/ಅನುದಾನಿತ ಹಾಗೂ ಅನುದಾನ ರಹಿತ ಬಿ.ಇಡಿ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸೀಟುಗಳ ದಾಖಲಾತಿಗಾಗಿ ಆನ್‌ಲೈನ್ ಮೂಲಕ ನ.29ರವರೆಗೆ https://schooleducation.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ವೆಬ್‌ಸೈಟ್‌ನಲ್ಲಿ ಜಿಲ್ಲಾವಾರು ಬಿ.ಇಡಿ ಶಿಕ್ಷಣ ಸಂಸ್ಥೆಗಳ ಪಟ್ಟಿ, ಅರ್ಹತೆ, ಮೀಸಲಾತಿ ವಿವರ ಹಾಗೂ ಇತರೆ ಸೂಚನೆಗಳನ್ನು ನೀಡಲಾಗಿದ್ದು, ಅಭ್ಯರ್ಥಿಗಳು ಅವುಗಳನ್ನು ಓದಿಕೊಂಡು ಆನ್‌ಲೈನ್ ಮೂಲಕ ಕ್ರಮಬದ್ಧವಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಲಾಗಿದೆ.

ಮೈಸೂರು ಮಿತ್ರ



ವಿಶ್ವಕಪ್ ಮಹಾಸಮರ 2023

ವಾಂಖೇಡೆಯಲ್ಲಿ ಸಚಿನ್ ಪ್ರತಿಮೆ ಅನಾವರಣ



ಮುಂಬೈ, ನ.2– 'ಕ್ರಿಕೆಟ್ ದೇವರು' ಎಂದೇ ಕರೆಸಿಕೊಳ್ಳುವ ಸಚಿನ್ ತೆಂಡುಲ್ಕರ್ ಪ್ರತಿಮೆಯನ್ನು ಬುಧವಾರ ಇಲ್ಲಿನ ವಾಂಖೇಡೆ ಕ್ರೀಡಾಂಗಣದಲ್ಲಿ ಅನಾವರಣಗೊಳಿಸಲಾಯಿತು.

ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಪ್ರತಿಮೆ ಅನಾವರಣಗೊಳಿಸಿದರು. ತೆಂಡುಲ್ಕರ್ ಪತ್ನಿ ಅಂಜಲಿ, ಪುತ್ರಿ ಸಾರಾ, ಸಹೋದರ ಅಜಿತ್ ಜೊತೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬಿಸಿಸಿಐ ಹಾಗೂ ಐಸಿಸಿ ಮಾಜಿ ಅಧ್ಯಕ್ಷ ಶರದ್ ಪವಾರ್, ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಉಪಾಧ್ಯಕ್ಷ ರಾಜೀವ್ ಶುಕ್ಲಾ ಸೇರಿ ಇತರ ಗಣ್ಯರು ಉಪಸ್ಥಿತರಿದ್ದರು.

ಮಹಾರಾಷ್ಟ್ರದ ಅಹಮದ್ ನಗರ ನಿವಾಸಿ ಪ್ರಮೋದ್ ಕಾಂಬ್ಳೆ ಅದ್ಭುತವಾಗಿ ಪ್ರತಿಮೆ ಕೆತ್ತಿದ್ದಾರೆ. ಸಚಿನ್ ತೆಂಡುಲ್ಕರ್ ಅವರು ಲಾಫ್ಟೆಡ್ ಡ್ರೈವ್ ಶಾಟ್ ಹೊಡೆಯುತ್ತಿರುವ ಭಂಗಿಯನ್ನು ಪ್ರತಿಮೆ ನಿರ್ಮಾಣ ಮಾಡಲಾಗಿದೆ. ಕ್ರಿಕೆಟ್ ದಂತಕಥೆ ತಮ್ಮ ತವರು ಮೈದಾನವಾದ ವಾಂಖೇಡೆಯಲ್ಲಿ ತಮ್ಮ ಕಟ್ಟಕಡೆಯ ಅಂತಾರಾಷ್ಟ್ರೀಯ ಪಂದ್ಯವನ್ನಾಡಿ 10 ವರ್ಷಗಳ ಬಳಿಕ ಐತಿಹಾಸಿಕ ವಾಂಖೇಡೆ ಮೈದಾನದಲ್ಲಿ ಇದೀಗ ತೆಂಡುಲ್ಕರ್ ಪ್ರತಿಮೆ ಅನಾವರಣವಾಗಿದೆ. ಸಚಿನ್ ತೆಂಡುಲ್ಕರ್ 2013ರ ನವೆಂಬರ್‌ನಲ್ಲಿ ವೆಸ್ಟ್ ಇಂಡೀಸ್ ಎದುರು ತಮ್ಮ ಕಟ್ಟಕಡೆಯ ಅಂತಾರಾಷ್ಟ್ರೀಯ ಟೆಸ್ಟ್ ಪಂದ್ಯವನ್ನಾಡಿದ್ದರು.

ಮಹಾರಾಷ್ಟ್ರ ಮೂಲದ ಸಚಿನ್ ತೆಂಡುಲ್ಕರ್ ಏ.24, 1973ರಲ್ಲಿ ಮುಂಬೈನಲ್ಲಿ ಜನಿಸಿದ್ದರು. ತಮ್ಮ 16ನೇ ವಯಸ್ಸಿನಲ್ಲಿ ಅಂದರೆ ನ.15, 1989ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದರು. ಇನ್ನು ಅದೇ ವರ್ಷ ಡಿ.18ರಂದು ಭಾರತ ಏಕದಿನ ಕ್ರಿಕೆಟ್ ತಂಡಕ್ಕೂ ಪಾದಾರ್ಪಣೆ ಮಾಡಿದ್ದರು. ಇದಾದ ಬಳಿಕ ಎರಡೂವರೆ ದಶಕಗಳ ಕಾಲ ಮಾಸ್ಟರ್ ಬ್ಲಾಸ್ಟರ್ ತೆಂಡುಲ್ಕರ್ ಕ್ರಿಕೆಟ್ ಜಗತ್ತನ್ನು ಆಳಿದರು. ದಿಗ್ಗಜ ಕ್ರಿಕೆಟಿಗ ಸಚಿನ್ ತೆಂಡುಲ್ಕರ್ ಗರಿಷ್ಠ ಟೆಸ್ಟ್ ಹಾಗೂ ಏಕದಿನ ರನ್ ಬಾರಿಸಿದ ದಾಖಲೆ ಹೊಂದಿದ್ದಾರೆ. ಇನ್ನು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 100 ಶತಕ ಬಾರಿಸಿದ ಮೊದಲ ಹಾಗೂ ಏಕೈಕ ಬ್ಯಾಟರ್ ಎನ್ನುವ ಹೆಗ್ಗಳಿಕೆ ಕೂಡಾ ಸಚಿನ್ ತೆಂಡುಲ್ಕರ್ ಹೆಸರಿನಲ್ಲಿದೆ.

2014ರಲ್ಲಿ ಭಾರತ ರತ್ನ ಪ್ರಶಸ್ತಿ ಪಡೆದ ದೇಶದ ಮೊದಲ ಕ್ರೀಡಾಪಟು ಎನ್ನುವ ಹಿರಿಮೆಗೆ ಮುಂಬೈಕರ್ ಪಾತ್ರರಾಗಿದ್ದರು. 200 ಟೆಸ್ಟ್ ಪಂದ್ಯಗಳನ್ನಾಡಿರುವ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡುಲ್ಕರ್ 15,921 ರನ್ ಬಾರಿಸಿದ್ದಾರೆ. ಇದರಲ್ಲಿ 51 ಶತಕಗಳು ಸೇರಿವೆ. ಇನ್ನು 463 ಏಕದಿನ ಪಂದ್ಯಗಳನ್ನಾಡಿ 19 ಶತಕ ಹಾಗೂ 96 ಅರ್ಧಶತಕ ಸಹಿತ 18,426 ರನ್ ಬಾರಿಸಿದ್ದಾರೆ. ಸಚಿನ್ ತೆಂಡುಲ್ಕರ್ ಭಾರತ ಪರ 6 ಬಾರಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಂಡಿದ್ದಾರೆ. ಇನ್ನು ಮಹೇಂದ್ರ ಸಿಂಗ್ ಧೋನಿ ನೇತೃತ್ವದ ಟೀಂ ಇಂಡಿಯಾ 2011ರಲ್ಲಿ ಏಕದಿನ ವಿಶ್ವಕಪ್ ಗೆಲ್ಲುವಲ್ಲಿ ಸಚಿನ್ ತೆಂಡುಲ್ಕರ್ ಕೂಡಾ ಮಹತ್ವದ ಪಾತ್ರ ವಹಿಸಿದ್ದರು. ಇನ್ನು ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿದ ಮೊದಲ ಬ್ಯಾಟರ್ ಎನ್ನುವ ಶ್ರೇಯ ಕೂಡಾ ತೆಂಡುಲ್ಕರ್ ಹೆಸರಿನಲ್ಲಿದೆ.



ಮೈಸೂರಿನ ಚಾಮುಂಡಿಬೆಟ್ಟದ ಪಾದದಲ್ಲಿರುವ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಭಕ್ತಾಧಿಗಳ ತಂಗುದಾಣಕ್ಕೆ 2.30ಲಕ್ಷ ರೂ. ವೆಚ್ಚದಲ್ಲಿ ಎರಡು ನೂತನ ಕೊಠಡಿಗಳ ನಿರ್ಮಾಣ ಮಾಡಿಸಿಕೊಟ್ಟ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ದೇವಾಲಯದ ಆಡಳಿತ ಮಂಡಳಿಯ ಸದಸ್ಯರು ಅಭಿನಂದಿಸಿದರು. ಈ ವೇಳೆ ಗುತ್ತಿಗೆದಾರರಾದ ಸತೀಶ್ ಇನ್ನಿತರರಿದ್ದರು.

ಸತತ 7ನೇ ಗೆಲುವು: ಭಾರತ ಸೆಮಿಫೈನಲ್‌ಗೆ

ಹೀನಾಯವಾಗಿ ಸೋತ ಲಂಕಾ ಸೆಮಿಸ್ ಕನಸು ಭಗ್ನ



ಮುಂಬೈ, ನ2– ವಿರಾಟ್ ಕೊಹ್ಲಿ ಶುಭಮನ್ ಗಿಲ್ ಹಾಗೂ ಶ್ರೇಯಸ್ ಅಯ್ಯರ್ ಅವರುಗಳ ಅರ್ಧಶತಕ ಹಾಗೂ ಮೊಹಮ್ಮದ್ ಶಮಿ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಭಾರತ ಶ್ರೀಲಂಕಾ ವಿರುದ್ಧ 302 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಆ ಮೂಲಕ ಐಸಿಸಿ ಏಕದಿನ ವಿಶ್ವಕಪ್ ಪಂದ್ಯಾವಳಿಯಲ್ಲಿ ಸತತ ಏಳನೇ ಗೆಲುವು ದಾಖಲಿಸಿದ ರೋಹಿತ್ ಶರ್ಮಾ ನೇತೃತ್ವದ ಭಾರತ ತಂಡ ಸೆಮಿಫೈನಲ್ ಪ್ರವೇಶಿಸಿದೆ. ಅಲ್ಲದೇ ಈವರೆಗೆ ಆಡಿರುವ 7 ಪಂದ್ಯಗಳಲ್ಲಿ ಭಾರತ ಒಟ್ಟು 14 ಅಂಕಗಳನ್ನು ಕಲೆ ಹಾಕಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಅಲಂಕರಿಸಿದೆ. ಮತ್ತೊಂದೆಡೆ ಈ ಸೋಲಿನೊಂದಿಗೆ ಲಂಕಾ ಸೆಮಿ ಫೈನಲ್ ಕನಸು ಬಹುತೇಕ ಕಮರಿದೆ.

ಇಲ್ಲಿನ ವಾಂಖೇಡೆ ಕ್ರೀಡಾಂಗಣದಲ್ಲಿ 358 ರನ್‌ಗಳ ಕಠಿಣ ಗುರಿ ಬೆನ್ನತ್ತಿದ ಶ್ರೀಲಂಕಾ, ವೇಗಿಗಳಾದ ಮೊಹಮ್ಮದ್ ಶಮಿ ಹಾಗೂ ಮೊಹಮ್ಮದ್ ಸಿರಾಜ್ ಅವರ ಮಾರಕ ದಾಳಿಗೆ ತತ್ತರಿಸಿತು. ಆರಂಭದಲ್ಲಿ ಸಿರಾಜ್ ದಾಳಿಗೆ ನಲುಗಿದ ಲಂಕಾ, ಕೇವಲ 3 ರನ್‌ಗಳಿಗೆ 4 ವಿಕೆಟ್‌ಗಳನ್ನು ಕಳೆದುಕೊಂಡಿತು. ಬಳಿಕ ಮೊಹಮ್ಮದ್ ಶಮಿ ತಮ್ಮ ಮಾರಕ ಬೌಲಿಂಗ್ ದಾಳಿಯಿಂದ ಶ್ರೀಲಂಕಾ ಬ್ಯಾಟಿಂಗ್ ಅನ್ನು ಛಿದ್ರಗೊಳಿಸಿದರು. ಅಂತಿಮವಾಗಿ ಶ್ರೀಲಂಕಾ 19.4 ಓವರ್ ಗಳಲ್ಲಿ 55 ರನ್‌ಗಳಿಗೆ ಆಲೌಟಾಯಿತು. ಶ್ರೀಲಂಕಾ ಪರ ಆಂಜಲೋ ಮ್ಯಾಥ್ಯೂವ್ಸ್, ಮಹೀಶ ತೀಕ್ಷಣ ತಲಾ 12, ಕಸುನ್ ರಜಿತ 14 ರನ್ ಗಳಿಸಿದ್ದು ಬಿಟ್ಟರೇ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು. ಭಾರತದ ಪರ ಮೊಹಮ್ಮದ್ ಶಮಿ 5ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು. ಉಳಿದಂತೆ ಮೊಹಮ್ಮದ್ ಸಿರಾಜ್ 3, ಬುಮ್ರಾ, ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 357ರನ್ ದಾಖಲಿಸಿತು. ಇನ್ನಿಂಗ್ಸ್ ಆರಂಭದಲ್ಲೇ 4 ರನ್ ಗಳಿಸಿ ರೋಹಿತ್ ಶರ್ಮಾ ವಿಕೆಟ್ ಒಪ್ಪಿಸಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ವಿರಾಟ್ ಕೊಹ್ಲಿ ಹಾಗೂ ಶುಭ್‌ಮನ್ ಗಿಲ್ ಆರಂಭದಲ್ಲಿ ಎಚ್ಚರಿಕೆ ಆಟವಾಡಿ ಬಳಿಕ ತಮ್ಮ ಬ್ಯಾಟಿಂಗ್ ವೇಗ ಹೆಚ್ಚಿಸಿದರು. ಅಲ್ಲದೇ 189 ರನ್ ಜೊತೆಯಾಟವಾಡಿ ತಂಡಕ್ಕೆ ಭರ್ಜರಿ ಅಡಿಪಾಯ ಹಾಕಿ ಕೊಟ್ಟರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಶುಭ್‌ಮನ್ ಗಿಲ್ 92 ಎಸೆತಗಳಲ್ಲಿ 2 ಸಿಕ್ಸರ್, 11 ಬೌಂಡರಿ ಒಳಗೊಂಡ 92 ರನ್ ಗಳಿಸಿ ಔಟಾದರು. ಇವರ ಹಿಂದೆಯೇ ವಿರಾಟ್ ಕೊಹ್ಲಿ 94 ಎಸೆತಗಳಲ್ಲಿ 11 ಬೌಂಡರಿ ಒಳಗೊಂಡ 88 ರನ್ ಗಳಿಸಿ ಔಟಾಗುವ ಮೂಲಕ ಮತ್ತೊಮ್ಮೆ ಶತಕದಿಂದ ವಂಚಿತರಾಗಿ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ನಂತರ ಬಂದ ಶ್ರೇಯಸ್ ಅಯ್ಯರ್ ಶ್ರೀಲಂಕಾ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಕೇವಲ 56 ಎಸೆತಗಳಲ್ಲಿ 6 ಸಿಕ್ಸರ್, 3ಬೌಂಡರಿ ಒಳಗೊಂಡ 82 ರನ್ ಗಳಿಸಿ ಫಾರ್ಮ್‌ಗೆ ಮರಳಿದರು. ಆ ಮೂಲಕ ತಂಡದ ಮೊತ್ತ 350ರ ಗಡಿದಾಟಲು ನೆರವಾದರು. ಉಳಿದಂತೆ ರವಿಂದ್ರ ಜಡೇಜಾ 35, ಕೆ.ಎಲ್. ರಾಹುಲ್ 21, ಸೂರ್ಯಕುಮಾರ್ ಯಾದವ್ 12 ರನ್ ಗಳಿಸಿದರು. ಶ್ರೀಲಂಕಾ ಪರ ದಿಲ್ಶಾನ್ ಮಧುಶಂಕ 5, ಚಮೀರ ಹಾಗೂ ಹೇಮಂತ್ ತಲಾ ಒಂದೊಂದು ವಿಕೆಟ್ ಪಡೆದರು. ಮೊಹಮ್ಮದ್ ಶಮಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಇಂಡಿಯಾ	7	7	0	0	14
ದಕ್ಷಿಣ ಆಫ್ರಿಕಾ	7	6	1	0	12
ಆಸ್ಟ್ರೇಲಿಯಾ	6	4	2	0	8
ನ್ಯೂಜಿಲ್ಯಾಂಡ್	7	4	3	0	8
ಪಾಕಿಸ್ತಾನ	7	3	4	0	6
ಅಫ್ಘಾನಿಸ್ತಾನ್	6	3	3	0	6
ಶ್ರೀಲಂಕಾ	7	2	5	0	4
ನೆದರ್‌ಲ್ಯಾಂಡ್ಸ್	6	2	4	0	4
ಬಾಂಗ್ಲಾದೇಶ	7	1	6	0	2
ಇಂಗ್ಲೆಂಡ್	6	1	5	0	2

ಶ್ರೀನಾಥ್, ಜಹೀರ್ ದಾಖಲೆ ಬ್ರೇಕ್ ಮಾಡಿದ ಶಮಿ

ಮುಂಬೈ: ಏಕದಿನ ವಿಶ್ವಕಪ್ ಇತಿಹಾಸದಲ್ಲಿ ಅತಿ ಹೆಚ್ಚು ವಿಕೆಟ್ ಕಬಳಿಸಿದ ಹೆಗ್ಗಳಿಕೆಗೆ ಮೊಹಮ್ಮದ್ ಶಮಿ ಭಾಜನರಾಗಿದ್ದಾರೆ. ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ 5 ವಿಕೆಟ್ ಪಡೆದು ಶಮಿ ಈ ಸಾಧನೆ ಮಾಡಿದ್ದಾರೆ. ಏಕದಿನ ವಿಶ್ವಕಪ್‌ನಲ್ಲಿ 14 ಪಂದ್ಯ ಆಡಿರುವ ಶಮಿ ಈಲ್ಲಿವರೆಗೆ 45 ವಿಕೆಟ್ ಪಡೆದಿದ್ದಾರೆ. ಇನ್ನು ಜಹೀರ್ ಖಾನ್ ಹಾಗೂ ಜಾವಗಲ್ ಶ್ರೀನಾಥ್ ತಲಾ 44 ವಿಕೆಟ್ ಪಡೆದಿದ್ದಾರೆ. ನಂತರದ ಸ್ಥಾನಗಳಲ್ಲಿ ಬುಮ್ರಾ 33, ಅನಿಲ್ ಕುಂಬ್ಳೆ 33 ವಿಕೆಟ್ ಪಡೆದಿದ್ದಾರೆ.

ಅಂಬಾರಿಯಲ್ಲಿ 10 ಸಾವಿರ ಮಂದಿ ಮೈಸೂರಿನ ದೀಪಾಲಂಕಾರ ವೀಕ್ಷಣೆ

ನ.5ರವರೆಗೆ ದೀಪಾಲಂಕಾರ ನೋಡಲು ಅವಕಾಶ, ಕೊಡಗು, ಹಾಸನ, ಮಂಡ್ಯ, ಚಾಮರಾಜನಗರ, ಗದಗ ಜಿಲ್ಲೆಗಳಿಗೂ ಅಂಬಾರಿ ಬಸ್ ಸೇವೆ ವಿಸ್ತರಿಸಲು ಕೆಎಸ್‌ಟಿಡಿಸಿ ಚಿಂತನೆ



ಮೈಸೂರು, ನ2(ಆರ್‌ಕೆ)–ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮ (KSTDC)ದ ಅಂಬಾರಿ ಡಬಲ್ ಡೆಕ್ಕರ್ ಬಸ್ಸುಗಳಿಗೆ ದಸರಾ ಮಹೋತ್ಸವದಲ್ಲಿ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅಕ್ಟೋಬರ್ 15 ರಿಂದ ನವೆಂಬರ್ 2 ರವರೆಗೆ ಸುಮಾರು 10 ಸಾವಿರ ಮಂದಿ 6 ಅಂಬಾರಿ ಡಬಲ್ ಡೆಕ್ಕರ್ ಬಸ್ಸುಗಳಲ್ಲಿ ವಿದ್ಯುತ್ ದೀಪಾಲಂಕಾರದಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿನ ಸೌಂದರ್ಯವನ್ನು ಸವಿದಿದ್ದಾರೆ ಎಂದು ಕೆಎಸ್‌ಟಿಡಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸಂಜೆ 6.30, ರಾತ್ರಿ 8 ಹಾಗೂ 9.30 ಗಂಟೆ ವೇಳಾಪಟ್ಟಿಯಂತೆ ಆರೂ ಬಸ್ಸುಗಳು 3 ಟ್ರಿಪ್‌ಗಳಲ್ಲಿ ಸಂಚರಿಸುತ್ತಿವೆ. 40 ಆಸನ ಸಾಮರ್ಥ್ಯ ಹೊಂದಿರುವ ಅಂಬಾರಿ ಬಸ್ಸಿನ ಕೆಳ ಅಂತಸ್ತಿನಲ್ಲಿ ತಲಾ 250 ರೂ. ಹಾಗೂ ಮೇಲ್ಮಹಡಿಯಲ್ಲಿ ತಲಾ 500 ರೂ. ಪ್ರಯಾಣದ ಟಿಕೆಟ್ ಪಡೆದು ಸಾರ್ವಜನಿಕರು ಹಾಗೂ ಪ್ರವಾಸಿಗರು ವಿದ್ಯುದ್ದೀಪಾಲಂಕಾರ ವೀಕ್ಷಿಸಿ ಸಂಭ್ರಮಿಸಿದರು.

ಜೆಎಲ್‌ಬಿ ರಸ್ತೆಯ ಮಯೂರ ಹೊಯ್ಸಳ ಹೋಟೆಲ್‌ನಿಂದ ಹೊರಟು ಮೆಟ್ರೋಪೋಲ್ ಸರ್ಕಲ್, ಹಳೇ ಡಿಸಿ ಕಚೇರಿ, ಕ್ರಾಫರ್ಡ್ ಹಾಲ್, ಓರಿಯೆಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟ್, ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಸರ್ಕಾರಿ ಸಂಸ್ಕೃತ ಪಾಠಶಾಲೆ, ಅರಮನೆ ದಕ್ಷಿಣ ದ್ವಾರ, ಜಯಮಾರ್ತಾಂಡ ಗೇಟ್, ಹಾರ್ಡಿಂಜ್ ಸರ್ಕಲ್, ಕೆ.ಆರ್. ಸರ್ಕಲ್, ಸಯ್ಯಾಜಿರಾವ್ ರಸ್ತೆ ದೇವರಾಜ ಮಾರುಕಟ್ಟೆ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ರೈಲ್ವೇ ಸ್ಟೇಷನ್ ಸರ್ಕಲ್ ಮಾರ್ಗವಾಗಿ ಸಂಚರಿಸುವ ಅಂಬಾರಿ ಡಬಲ್ ಡೆಕ್ಕರ್ ಬಸ್ಸುಗಳು ಮರಳಿ ಮಯೂರ ಹೊಯ್ಸಳ ಹೋಟೆಲ್ ತಲುಪಲಿವೆ.

ದಸರಾ ಮಹೋತ್ಸವ ಉದ್ಘಾಟನೆಯಾದ ಅಕ್ಟೋಬರ್ 15 ರಿಂದ 23ರವರೆಗೆ ಡಬಲ್ ಡೆಕ್ಕರ್ ಬಸ್ಸುಗಳ ಶೇ.100ರಷ್ಟು ಆಸನಗಳು ಭರ್ತಿಯಾಗಿದ್ದವು. ವಿಜಯ ದಶಮಿ ಮೆರವಣಿಗೆ ನಿಮಿತ್ತ ಅಕ್ಟೋಬರ್ 24ರಂದು ಅಂಬಾರಿ ಬಸ್ಸುಗಳ ಸಂಚಾರ ಸೇವೆ ಇರಲಿಲ್ಲ. ಆದರೆ ಅಕ್ಟೋಬರ್ 25 ರಿಂದ ಬಸ್ಸುಗಳ ಲೋಯರ್ ಡೆಕ್‌ಗೆ ಬೇಡಿಕೆ ತೀವ್ರ ಕಡಿಮೆಯಾಗಿತ್ತು.

6 ಅಂಬಾರಿ ಬಸ್ಸುಗಳ ಪೈಕಿ ಅಕ್ಟೋಬರ್ 30ರಂದು ಒಂದು ಡಬಲ್ ಡೆಕ್ಕರ್ ಬಸ್ ಅನ್ನು ಗದಗ ಜಿಲ್ಲೆಗೆ ಕಳುಹಿಸಲಾಗಿದ್ದು, ನವೆಂಬರ್ 5ರ ನಂತರ ಮತ್ತೊಂದು ಬಸ್ ಅನ್ನು ಅಲ್ಲಿಗೆ ಕಳುಹಿಸಲಾಗುವುದು ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ. ನವೆಂಬರ್ 5ರವರೆಗೆ ಮೈಸೂರಿನ ವಿದ್ಯುದ್ದೀಪಾಲಂಕಾರವನ್ನು ವಿಸ್ತರಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸೂಚನೆ ನೀಡಿರುವುದರಿಂದ ಅಲ್ಲಿಯವರೆಗೂ ಡಬಲ್ ಡೆಕ್ಕರ್ ಬಸ್ಸುಗಳಲ್ಲಿ ವಿದ್ಯುದ್ದೀಪಾಲಂಕಾರ ವೀಕ್ಷಿಸಬಹುದಾಗಿದೆ.

ನವೆಂಬರ್ 5ರ ನಂತರ ಒಂದು ಅಂಬಾರಿ ಬಸ್ ಮಾತ್ರ ಅರಮನೆ ದಕ್ಷಿಣ ದ್ವಾರದಿಂದ ಸಂಚರಿಸಲಿದ್ದು, ಉಳಿದ ಮೂರು ಬಸ್‌ಗಳನ್ನು ಕೆಎಸ್‌ಆರ್‌ಟಿಸಿ ವಶಕ್ಕೆ ಒಪ್ಪಿಸಲಾಗುವುದು. ನವೆಂಬರ್ 6 ರಿಂದ ಅಂಬಾರಿ ಬಸ್ಸಿನಲ್ಲಿ ಲೋಯರ್ ಡೆಕ್ ಮತ್ತು ಅಪ್ಪರ್ ಡೆಕ್ ಎರಡರಲ್ಲೂ ಕೇವಲ 250 ರೂ. ಹಳೇ ದರದಲ್ಲಿ ಪ್ರಯಾಣಿಸಿ ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ನೋಡಬಹುದು.

ಮೈಸೂರಲ್ಲಿ ಅಂಬಾರಿ ಸವಾರಿ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಬೇಡಿಕೆ ಆಧರಿಸಿ ನೆರೆ ಜಿಲ್ಲೆಗಳಾದ ಚಾಮರಾಜನಗರ, ಕೊಡಗು, ಹಾಸನ ಹಾಗೂ ಮಂಡ್ಯ ಜಿಲ್ಲೆಗಳ ಕೇಂದ್ರ ಸ್ಥಾನಗಳಲ್ಲೂ ಅಂಬಾರಿ ಬಸ್ ಸೇವೆ ಒದಗಿಸಲು ನಿಗಮವು ಮುಂದಾಗಿದ್ದು, ಸಮೀಕ್ಷೆ ನಡೆಸಿ ರೂಟ್ ಮ್ಯಾಪ್ ತಯಾರಿಸಿದ ನಂತರ ಸಾಧಕ–ಬಾಧಕಗಳನ್ನು ಗಮನಿಸಿದ ಬಳಿಕ ಅಂಬಾರಿ ಬಸ್ ಸೇವೆ ವಿಸ್ತರಿಸುವ ಕುರಿತು ನಿರ್ಧರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದಿಂದ ಕನ್ನಡ ರಾಜ್ಯೋತ್ಸವ



ಮೈಸೂರು, ನ.2– ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಮೈಸೂರಿನ ಜಯನಗರದ ನೇಗಿಲಯೋಗಿ ಮರುಳೇಶ್ವರ ಭವನದಲ್ಲಿ ಆಚರಿಸಲಾಯಿತು. ಸದಸ್ಯರಿಗೆ ಕನ್ನಡ ನಾಡು ನುಡಿಯ ಬಗ್ಗೆ ಜಾಗೃತಿ ಮೂಡಿಸಲಾಯಿತು. ಸಮಾರಂಭದ ಪ್ರಯುಕ್ತ ಸಾಂಪ್ರದಾಯಿಕ ಆಟಗಳಾದ ಚೌಕಾಬಾರ, ಲಗೋರಿ, ಪಗಡೆ, ಅಳಿಗುಳಿ ಮನೆ ಮುಂತಾದ ಮನರಂಜನಾ ಸ್ಪರ್ಧೆಗಳನ್ನು ನಡೆಸಿ, ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶೋಭ ರಮೇಶ್ ವಹಿಸಿದ್ದರು. ಸಂಘದ ಇತರ ಪದಾಧಿಕಾರಿಗಳು ಹಾಜರಿದ್ದರು. ಸದಸ್ಯರುಗಳು ಕನ್ನಡ ನಾಡಿನ ಸಂಕೇತವಾದ ಹಳದಿ ಮತ್ತು ಕೆಂಪು ಬಣ್ಣದ ಉಡುಗೆ ಧರಿಸಿ ಬಂದು ಸಂಭ್ರಮದಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಲಬುರಗಿಯಲ್ಲಿ ಬೈಕ್‌ಗೆ ಲಾರಿ ಡಿಕ್ಕಿ: ಇಬ್ಬರು ಮಕ್ಕಳು ಸೇರಿ ನೇಪಾಳದ ಐವರ ದುರ್ಮರಣ

ಕಲಬುರಗಿ, ನ.2– ಅಫಜಲಪುರ ತಾಲೂಕಿನ ಹಳ್ಯೋಳ್ಳಿ ಕ್ರಾಸ್ ಬಳಿ ಬೈಕ್ ಮತ್ತು ಲಾರಿ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ದುರ್ಮರಣ ಹೊಂದಿದ್ದಾರೆ ಅಪಘಾತದಲ್ಲಿ ನೇಪಾಳ ಮೂಲದ ಇಬ್ಬರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಒಂದೇ ಬೈಕ್‌ನಲ್ಲಿ ಇಬ್ಬರು ಮಕ್ಕಳು ಸೇರಿದಂತೆ ಐವರು ತೆರಳುತ್ತಿದ್ದರು. ಎದುರಿಗೆ ಬರುತ್ತಿದ್ದ ಲಾರಿ ಬೈಕ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಮೃತರು ಅಫಜಲಪೂರನಲ್ಲಿ ಫಾಸ್ಟ್ ಫುಡ್ ಹೋಟೆಲ್ ನಡೆಸುತ್ತಿದ್ದರು. ಘಟನಾ ಸ್ಥಳಕ್ಕೆ ಅಫಜಲಪೂರ ಪೊಲೀಸರು ಭೇಟಿ, ಪರಿಶೀಲನೆ ನಡೆಸಿದ್ದಾರೆ.





ಕುಸ್ತಿ ವಿಭಾಗದಲ್ಲಿ ಮೈಸೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಪೈಲ್ವಾನ್ ಚಿಕ್ಕಪುಟ್ಟಿ ಅವರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಮತ್ತು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಪ್ರದಾನ ಮಾಡಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಶಿವಣ್ಣ ಇನ್ನಿತರರಿದ್ದರು.

ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ



ಮೈಸೂರು, ನ.2(ಬಿಎಲ್ ಯು)– ಮೈಸೂರಿನ ಓವಲ್ ಮೈದಾನದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್. ಸಿ.ಮಹದೇವಪ್ಪ ಅವರು ಹಲವು ಕ್ಷೇತ್ರದ ಸಾಧಕರು ಹಾಗೂ ಸಂಸ್ಥೆಗಳಿಗೆ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ನೀಡಿ ಗೌರವಿಸಿದರು.

ವೈದ್ಯಕೀಯ– ಡಾ.ಎಸ್.ರಂಗನಾಥಯ್ಯ, ಕೆ.ಪಿ.ನಾಗರಾಜ್–ದೃಶ್ಯ ಮಾಧ್ಯಮ, ಜೆ.ಪಿ.ಬಸವರಾಜು– ಸಾಹಿತಿ, ಪತ್ರಕರ್ತ, ಕಿಲಾರ ಕೃಷ್ಣೇಗೌಡ– ಜಾನಪದ ಗಾಯನ, ಹೊರೆಯಾಲ ದೊರೆಸ್ವಾಮಿ– ಚಳವಳಿ, ಸಿ.ಬಸವಲಿಂಗಯ್ಯ– ರಂಗಭೂಮಿ, ಅಯೂಬ್– ಸಮಾಜಸೇವೆ, ಡಾ.ಎಸ್. ತುಕಾರಾಮ್– ಸಾಕ್ಷರತೆ, ಶಿಕ್ಷಣ, ಕೃಪಾಕರ ಸೇನಾನಿ– ಪರಿಸರ, ರಾಯ. ಎಸ್.ಮಹೇಶ್– ರೂಪ ಪ್ರಕಾಶನ(ಪುಸ್ತಕ ಪ್ರಕಾಶನ), ಡಾ.ಚಿಕ್ಕಮಾದು– ಇತಿಹಾಸ, ಚರಿತ್ರೆ, ಕೋಟೆ ನಾಗರಾಜ್– ಸಿನಿಮಾ, ರಂಗಭೂಮಿ, ಮೂಗೂರು ನಂಜುಂಡಸ್ವಾಮಿ– ಕನ್ನಡಪರ ಹೋರಾಟಗಾರ, ಕೆ.ಬಿ.ರಮೇಶ ನಾಯಕ– ಪತ್ರಿಕಾ ಮಾಧ್ಯಮ ಚಾಮರಾಜನಗರದ ಅಮೃತ ಭೂಮಿ– ನೈಸರ್ಗಿಕ ಬೀಜೋತ್ಪಾದನೆ, ಮೈಸೂರಿನ ಒಡನಾಡಿ– ಸೇವಾ ಸಂಸ್ಥೆ.

ರಾಜ್ಯೋತ್ಸವ ಸಮಾರಂಭದಲ್ಲಿ ಸಾಧಕರಿಗೆ ಪ್ರಶಸ್ತಿ, ಸನ್ಮಾನ



ಮೈಸೂರು, ನ.2(ಬಿಎಲ್ ಯು)– ಮೈಸೂರಿನ ಓವಲ್ ಮೈದಾನದಲ್ಲಿ ಜಿಲ್ಲಾಡಳಿತ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಸಾಹಿತ್ಯ ಜಾನಪದ, ಶಿಕ್ಷಣ, ಪತ್ರಿಕೋದ್ಯಮ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರಿಗೆ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಸಾಹಿತ್ಯ– ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹ ಸಂಪಾದಕ ಡಾ.ಸಿ.ಬಸವರಾಜು, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮಾನಸ **ಶಿಕ್ಷಣ**– ಮೈಸೂರಿನ ಮಾನಸ ಗಂಗೋತ್ರಿಯ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಆರ್.ಹೆಚ್.ಪವಿತ್ರ, ನ.ಗಂಗಾಧರಯ್ಯ **ಜಾನಪದ**– ಟಿ.ಎಂ.ಕೃಷ್ಣಮೂರ್ತಿ, ಅಂಬಳೆ ಶಿವಣ್ಣ, ಎಸ್.ಸಿ.ಜಯಶಂಕರ್, ವಿ.ವೆಂಕಟಮ್ಮ, ಹೆಚ್.ಕ್ಯಾತನಹಳ್ಳಿ ಪ್ರಕಾಶ್. **ಸಮಾಜ ಸೇವೆ**– ಬಿ.ವಿದ್ಯಾ ಸಾಗರ ಕದಂಬ, ದ್ಯಾವಪ್ಪ ನಾಯಕ, ಎನ್. ಶ್ರೀಧರ ದೀಕ್ಷಿತ್, ನಾಗೇಶ್ ಎಲ್. ಕಾಡಯ್ಯ, ಕೆ.ಪಿ.ದಿವಾಕರ, ಎಸ್.ಪ್ರಭು ಶಂಕರ್, ಎಂ.ಎಲ್.ಶಿವಕುಮಾರ್, ಎಸ್.ಇ. ಗಿರೀಶ್, ಎಂ.ಬಿ.ಕೊಟ್ರೇಶ್, ಜಿ.ಗೋವಿಂದರಾಜು, ಪಿ.ಪ್ರವೀಣ್, ಡಾ.ಎಂ.ಕೆ.ಅಶೋಕ್ **ವೈದ್ಯಕೀಯ ಕ್ಷೇತ್ರ**– ಅಗ್ರಹಾರದ ದುರ್ಗಾ ಕ್ಲೀನಿಕ್‌ನ ಡಾ.ರಾಮ್ ದೇವ್, **ಧಾರ್ಮಿಕ**– ಯರಗನಹಳ್ಳಿ ಬಡಾವಣೆಯ ಕೆ.ಎಲ್.ರಾಜಶೇಖರ್, **ಕನ್ನಡ ಪರ ಹೋರಾಟಗಾರರು**– ಬಿ.ಧನಪಾಲ್, ಆರ್.ರಮೇಶ್, ಸಿದ್ದರಾಮ ವೈಶಿವ ನಾಯ್ಕರ್, ಅರವಿಂದ ಶರ್ಮ, ಬಿ.ಮಹದೇವ, **ಸುಗಮ ಸಂಗೀತ**– ವೆ.ಆರ್.ನಾಗೇಂದ್ರ ರಾವ್, ಸಿ.ಆರ್.ರಾಘವೇಂದ್ರ ಪ್ರಸಾದ್, **ಪತ್ರಿಕಾ ರಂಗ**– ನಾಗೇಶ್ ಪಾಣತ್ತಲೆ, ದೊಡ್ಡನಹುಂಡಿ ರಾಜಣ್ಣ, ಎಸ್.ಉದಯ ಶಂಕರ್, ಸುತ್ತೂರು ನಂಜುಂಡ ನಾಯಕ, **ಸಂಘಟನಾ ಕ್ಷೇತ್ರ**– ಸಂಕಲ್ಪ ಟೆಂಪಲ್ ಟ್ರೀಸ್‌ನ ಎ.ಹೇಮಗಂಗಾ, **ಕ್ರೀಡೆ, ಯೋಗ**– ಡಾ.ಸಿ.ರಮೇಶ್ ಶೆಟ್ಟಿ, **ಸ್ಕೇಟಿಂಗ್**– ವರ್ಷಾ ಪುರಾಣಿಕ್, **ಕುಸ್ತಿ**– ಪೈಲ್ವಾನ್ ಚಿಕ್ಕಪುಟ್ಟಿ, **ಕ್ರಿಕೆಟ್**– ಎ.ರಮೇಶ್ ಶೆಟ್ಟಿ, **ಸಂಗೀತ**–ನರಸೇಗೌಡ, **ರಂಗ ಭೂಮಿ**– ಮರೀಗೌಡ, ಎಸ್.ಜಯರಾಮು, **ಕನ್ನಡ ತಂತ್ರಾಂಶ**– ಕನ್ನಡ ಅಕ್ಷರ ಶೈಲಿ ವಿನ್ಯಾಸಗಾರ ಆರ್.ಮಂಜುನಾಥ್, **ಕರ್ನಾಟಕ ಶಾಸ್ತ್ರೀಯ ಸಂಗೀತ**– ಎಸ್.ಪುಟ್ಟರಾಜು, ಎಂ.ಎನ್. ಶ್ರೀನಿವಾಸ್, **ಶಿಲ್ಪಕಲೆ**– ವೈ.ರಾಜೇಶ್, **ರಂಗಭೂಮಿ(ಪೌರಾಣಿಕ)**– ಎಂ.ರಾಮಸ್ವಾಮಿ, **ಶಾಸ್ತ್ರೀಯ ನೃತ್ಯ**– ಬದ್ರಿ ದಿವ್ಯ ಭೂಷಣ್.

ಆತಂಕದಲ್ಲಿ ಕೊಡಗು ಜಿಲ್ಲೆಯ ಜನರು

ಪಾರಂಪರಿಕವಾಗಿ ಬಂದ ವನ್ಯಜೀವಿಗಳ ಉತ್ಪನ್ನಗಳನ್ನು ಇಟ್ಟುಕೊಳ್ಳಬೇಕ, ಅರಣ್ಯ ಇಲಾಖೆಗೆ ಒಪ್ಪಿಸಬೇಕೆ, ಉತ್ಪನ್ನಗಳ ಹೊಂದಿರುವವರು ಆರೋಪಿಗಳೇ...



ಮಡಿಕೇರಿ, ನ.2– ವನ್ಯಪ್ರಾಣಿಗಳ ಅಂಗಾಂಗ ಸಂಗ್ರಹ ಇದೀಗ ರಾಜ್ಯಾದ್ಯಂತ ಸದ್ದು ಮಾಡುತ್ತಿರುವ ಬೆನ್ನಲ್ಲೇ, ಕೊಡಗು ಜಿಲ್ಲೆಯಲ್ಲಿಯೂ ಆತಂಕ ಮುಂದುವರೆದಿದೆ. ಕೊಡಗು ಜಿಲ್ಲೆಯ ಅನಾದಿ ಕಾಲದ ಪದ್ಧತಿ–ಪರಂಪರೆ ಮತ್ತು ಸಂಸ್ಕೃತಿಯಲ್ಲಿ ವನ್ಯ ಪ್ರಾಣಿಗಳಾದ ಜಿಂಕೆ ಕೊಂಬು, ನವಿಲುಗರಿಗಳು ಮಿಳಿತವಾಗಿದ್ದು, ಇವುಗಳ ಸಂಗ್ರಹವೂ ಇದೆ. ಕಾಲಕ್ಕನುಗುಣವಾಗಿ ವಿಶೇಷ ದಿನಗಳಾದ ಹಬ್ಬಗಳಲ್ಲಿ ಇವುಗಳನ್ನು ಶ್ರದ್ಧಾಭಕ್ತಿಯಿಂದ ಪೂಜಿಸಿಕೊಂಡು ಬರಲಾಗುತ್ತಿದೆ.

ಹಿಂದಿನ ಕಾಲದಲ್ಲಿ ಬೇಟೆಯೇ ಜಿಲ್ಲೆಯ ಜನರ ಜೀವನ ಶೈಲಿಯೂ ಆಗಿತ್ತು ಎಂಬುದು ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿದೆ. ಪುರಾತನ ಕಾಲದಿಂದಲೇ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಈ ವನ್ಯಜೀವಿ ಅಂಗಗಳು ಬಳುವಳಿಯಾಗಿಯೂ ಬಂದಿರುವ ಹಲವು ನಿದರ್ಶನಗಳು ಜಿಲ್ಲೆಯಲ್ಲಿ ಸಿಗುತ್ತವೆ. ಆದರೆ ಇವುಗಳಿಗೆ ಸೂಕ್ತ ದಾಖಲಾತಿ ಪ್ರಸ್ತುತ ಲಭ್ಯವಿಲ್ಲವಾದಲ್ಲಿ ಅದನ್ನು ಸರಕಾರಕ್ಕೆ ಒಪ್ಪಿಸಬೇಕೆ.. ಅದನ್ನು ಇಟ್ಟುಕೊಂಡವರು ಅಪರಾಧಿಗಳಾಗುತ್ತಾರೆಯೇ ಎಂಬ ಆತಂಕ ಜಿಲ್ಲೆಯ ಜನರಲ್ಲಿ ಮನೆ ಮಾಡಿದೆ.

ಇನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು, ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್. ಪೊನ್ನಣ್ಣ ಅವರು ಕೆಲ ದಿನಗಳ ಹಿಂದೆ ಮಡಿಕೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಪಾರಂಪರಿಕವಾಗಿ ಬಂದಿರುವ ಜಿಂಕೆ ಕೊಂಬು, ನವಿಲುಗರಿ ಇದ್ದಲ್ಲಿ ಆತಂಕಪಡುವ ಅಗತ್ಯ ಇಲ್ಲ ಎಂದು ಹೇಳಿದ್ದರು. ಈ ಕುರಿತು ಅರಣ್ಯ ಸಚಿವರು ಮತ್ತು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಸೂಕ್ತ ಪರಿಹಾರ ಕಂಡು ಹಿಡಿಯಲಾಗುವುದು ಎಂದು ಜನರಿಗೆ ಅಭಯ ನೀಡಿದ್ದರು.

ಸರಕಾರದ ಕಡೆ ಚಿತ್ತ: ವನ್ಯ ಜೀವಿಗಳ ಅಂಗಾಂಗ ಸಂಗ್ರಹ ಕುರಿತು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದು, ಮುಖ್ಯಮಂತ್ರಿಗಳ ಜೊತೆ ಚರ್ಚಿಸಿದ್ದಾರೆ. ಮಾತ್ರವಲ್ಲದೇ ನ.9ರಂದು ಸಚಿವ ಸಂಪುಟದ ಸಭೆಯಲ್ಲಿ ಕರಡು ಪ್ರತಿ ಮಂಡನೆ ಮಾಡುವುದಾಗಿಯೂ, ನಿಗಧಿತ ಸಮಯದ ಗಡುವು ನೀಡಿ ಸುತ್ತೋಲೆ ಹೊರಡಿಸುವುದಾಗಿ ಹೇಳಿದ್ದಾರೆ. ಹೀಗಾಗಿ ಅರಣ್ಯ ಸಚಿವಾಲಯ ಯಾವ ರೀತಿಯ ಕರಡು ಮಂಡಿಸಲಿದೆ ಮತ್ತು ಡೆಡ್ ಲೈನ್ ಅವಧಿ ಮತ್ತಿತ್ತರ ವಿಚಾರಗಳು ಬಹಿರಂಗವಾಗ ಲಿದ್ದು, ಜಿಲ್ಲೆಯ ಜನರ ಚಿತ್ತ ಸರಕಾರದ ಸಚಿವ ಸಂಪುಟ ಸಭೆಯ ಕಡೆ ನೆಟ್ಟಿದೆ.

ಶೆಡ್ಯೂಲ್‌ಗಳಲ್ಲಿ ಬದಲಾವಣೆ: 1972ರ ವನ್ಯಜೀವಿ ಸಂರಕ್ಷಣಾ ಕಾಯಿದೆ ಸೆಕ್ಷನ್ 39ರ ಅಡಿ ವನ್ಯಜೀವಿ ಉತ್ಪನ್ನಗಳು ಸರಕಾರದ ಆಸ್ತಿ ಎಂದು ವಿವರಿಸಲಾಗಿದೆ. 1972ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯಿದೆ ಜಾರಿಯ ಸಂದರ್ಭ ಸರಕಾರ 3 ತಿಂಗಳ ಗಡುವು ನೀಡಿ ಅವುಗಳನ್ನು ಘೋಷಿಸಲು ಅವಕಾಶ ನೀಡಲಾಗಿತ್ತು. ಆ ಬಳಿಕ 2003ರಲ್ಲಿಯೂ ಸರಕಾರ ವನ್ಯಜೀವಿ ಅಂಗಗಳ ಘೋಷಣೆಗೆ ಅವಕಾಶ ನೀಡ ಲಾಗಿತ್ತು ಎಂದು ಡಿಎಫ್‌ಓ ಭಾಸ್ಕರ್ ವಿವರಿಸಿದರು.

ಈ ಮೊದಲು ವನ್ಯಜೀವಿಗಳಿಗೆ ಸಂಬಂಧಿಸಿದಂತೆ ಒಟ್ಟು 6 ಶೆಡ್ಯೂಲ್‌ಗಳಿದ್ದು, ಇದೀಗ ಇವುಗಳನ್ನು 4ಕ್ಕೆ ಇಳಿಸಲಾಗಿದೆ. ವನ್ಯಜೀವಿಗಳು, ಕೀಟಗಳು, ಸಸ್ಯಪ್ರಬೇಧಗಳು, ಹಾವುಗಳು ಮಾತ್ರವಲ್ಲದೇ ವಿದೇಶಗಳ ವನ್ಯಜೀವಿಗಳು ಕೂಡು ವಿವಿಧ ಶೆಡ್ಯೂಲ್ ವ್ಯಾಪ್ತಿಗೆ ಒಳಪಡುತ್ತವೆ. ವನ್ಯ ಜೀವಿಗಳ ಸಂರಕ್ಷಣೆ ಮಾತ್ರವೇ ಇವುಗಳ ಉದ್ದೇಶವಾಗಿದೆ. ವಿದೇಶಗಳಿಂದ ತರಲಾಗುವ ವಿವಿಧ ತಳಿಯ ಗಿಳಿಗಳು ಕೂಡ ದೇಶದ ವನ್ಯಜೀವಿ ಶೆಡ್ಯೂಲ್‌ಗೆ ಒಳಪಡುತ್ತವೆ. ಹೀಗಾಗಿಯೇ ಏರ್ ಪೋರ್ಟ್, ಬಂದರುಗಳಲ್ಲಿ ಶೆಡ್ಯೂಲ್ ವಾಪ್ತಿಗೆ ಒಳಪಡುವ ವನ್ಯ ಜೀವಿಗಳನ್ನು ವಶಕ್ಕೆ ಪಡೆಯುವ ಪ್ರಕರಣಗಳು ಕಂಡು ಬರುತ್ತವೆ ಎಂದು ಹೇಳಿದರು.

ಕೃಷಿ ಭೂಮಿಯಲ್ಲಿ ಗಾಂಜಾ

ಪ್ರಕರಣ ದಾಖಲು, ಆರೋಪಿ ನಾಪತ್ತೆ

ಮಡಿಕೇರಿ, ನ.2– ಮಾರಾಟ ಮಾಡುವ ಉದ್ದೇಶದಿಂದ ಕೃಷಿ ಭೂಮಿಯಲ್ಲಿ ಗಾಂಜಾ ಗಿಡಗಳನ್ನು ಬೆಳೆಸಿದ್ದ ಪ್ರಕರಣವನ್ನು ಪತ್ತೆ ಹಚ್ಚಿರುವ ಕುಶಾಲನಗರ ಗ್ರಾಮಾಂತರ ಪೊಲೀಸರು ಆರೋಪಿ ವಿರುದ್ದ ಪ್ರಕರಣ ದಾಖಲಿಸಿದ್ದಾರೆ.

ಕುಶಾಲನಗರ ಗ್ರಾಮಾಂತರ ಠಾಣಾ ವ್ಯಾಪ್ತಿಯ ಬಸವನತ್ತೂರು ಗ್ರಾಮದ ನಿವಾಸಿ ಹಾಗಲಕಾಯಿ ರಾಜ ಎಂಬಾತನೇ ಆರೋಪಿಯಾಗಿದ್ದು, ಆತ ತಲೆ ಮರೆಸಿಕೊಂಡಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕೃಷಿ ಭೂಮಿಯಿಂದ 1 ಕೆ.ಜಿ. 620 ಗ್ರಾಂ ಹಸಿ ಗಾಂಜಾವನ್ನು ವಶಕ್ಕೆ ಪಡೆಯಲಾಗಿದ್ದು, ಆರೋಪಿಯ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಕುಶಾಲನಗರ ಡಿವೈಎಸ್‌ಪಿ ಆರ್.ವಿ ಗಂಗಾಧರಪ್ಪ ಕುಶಾಲನಗರ ವೃತ್ತ ನಿರೀಕ್ಷಕ ಪಿ.ಮೋಹನ್ ರಾಜು ಮತ್ತು ಸಿಬ್ಬಂದಿಗಳ ತಂಡ ಕಾರ್ಯಾಚರಣೆ ನಡೆಸಿದ್ದಾರೆ.

ಲೀಲಾ ನಿಧನ

ನಾಪೋಕ್ಲು ನ.2– ಮಡಿಕೇರಿ ದಾಸವಾಳದಲ್ಲಿ ವಾಸವಾಗಿದ್ದ ನಂಬುಡಿ ದಿವಂಗತ ಕರುಂಬಯ್ಯ ಅವರ ಪುತ್ರಿ ಲೀಲಾ (75) ಮಂಗಳವಾರ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಮಡಿಕೇರಿ ಗೌಡ ಸಮಾಜದ ರುದ್ರಭೂಮಿಯಲ್ಲಿ ನೆರವೇರಿತು.

ರಾಜಪ್ಪ ಚಂಗಪ್ಪ



ನಾಪೋಕ್ಲು: ನೆಲಜಿ ಗ್ರಾಮದ ನಿವಾಸಿ ಮಂಡಿರ ರಾಜಪ್ಪ ಚಂಗಪ್ಪ (58) ಮಂಗಳವಾರ ನಿಧನರಾದರು. ಶ್ರೀಯುತರು ನಾಪೋಕ್ಲು ಕೊಡವ ಸಮಾಜದ ಮಾಜಿ ಕಾರ್ಯದರ್ಶಿ, ನಾಪೋಕ್ಲು ನಾಡ್ ಕೊಡವ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಉಪಾಧ್ಯಕ್ಷರಾಗಿದ್ದರು. ಇದರೊಂದಿಗೆ ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೃತರ ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದಲ್ಲಿ ನೆರವೇರಿತು. ಮೃತರು ಪತ್ನಿ ಹಾಗೂ ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ಪ್ರೇಮಾ ಗಣೇಶ್



ನಾಪೋಕ್ಲು: ಬೇತು ಗ್ರಾಮದ ನಿವಾಸಿ ಚೋಕಿರ ಗಣೇಶ್ ಅವರ ಧರ್ಮಪತ್ನಿ ಪ್ರೇಮಾ ಗಣೇಶ್ (58) ಬುಧವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ಬೇತುವಿನಲ್ಲಿ ನಡೆಯಿತು.

ನಾಪತ್ತೆಯಾಗಿದ್ದ ಯುವಕ ಶವವಾಗಿ ಪತ್ತೆ



ಗೋಣಿಕೊಪ್ಪ, ನ.2– ನಾಪತ್ತೆಯಾಗಿದ್ದ ಚೆಟ್ಟಳ್ಳಿ ಗ್ರಾಮದ ಯುವಕ ಪುತ್ತರೀರ ಗಗನ್ (34) ಮೃತದೇಹ ಬಿ. ಶೆಟ್ಟಿಗೇರಿ ಗ್ರಾಮದ ಕೊಂಗಣ ನದಿಯಲ್ಲಿ ಪತ್ತೆಯಾಗಿದ್ದು, ಗೋಣಿಕೊಪ್ಪ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಬಿ. ಶೆಟ್ಟಿಗೇರಿ ಗ್ರಾಮದಲ್ಲಿರುವ ಕಾಫಿ ತೋಟದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗಗನ್ ಭಾನುವಾರ ಸ್ವಗ್ರಾಮದಲ್ಲಿ ಕುಟುಂಬದ ಕಾರ್ಯ ಮುಗಿಸಿ ನಾಪತ್ತೆಯಾಗಿದ್ದರು. ಈ ಬಗ್ಗೆ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು ಕೆಲಸಕ್ಕೆ ತೆರಳದ ಹಿನ್ನೆಲೆ, ಹುಡುಕುವಾಗ ನದಿ ಸಮೀಪ ಅವರ ಶೂ ಪತ್ತೆಯಾದ ಹಿನ್ನೆಲೆ, ಮಂಗಳವಾರ ನದಿಯಲ್ಲಿ ಶೋಧ ನಡೆಸಿದಾಗ ಮೃತದೇಹ ಪತ್ತೆಯಾಗಿದೆ. ಸಾವಿನ ಬಗ್ಗೆ ನಿಖರ ಮಾಹಿತಿ ಇಲ್ಲದಾಗಿದೆ.

ಕಾಫಿ ಗಿಡಕ್ಕೆ ನೇಣು ಬಿಗಿದುಕೊಂಡು ಮಹಿಳೆ ಆತ್ಮಹತ್ಯೆ

ನಾಪೋಕ್ಲು, ನ.2– ಕಾರ್ಮಿಕ ಮಹಿಳೆಯೊಬ್ಬರು ತೋಟದಲ್ಲಿರುವ ಕಾಫಿ ಗಿಡಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಕೊಳಕೇರಿ ಗ್ರಾಮದಲ್ಲಿ ಮಂಗಳವಾರ ನಡೆದಿದೆ.

ಕೊಳಕೇರಿ ಗ್ರಾಮದ ನಿವಾಸಿ ಕೇಟೋಳಿರ ಗಣಪತಿ ಎಂಬವರ ತೋಟದಲ್ಲಿ ಕಾರ್ಮಿಕಳಾಗಿ ಕೆಲಸ ಮಾಡುತ್ತಿದ್ದ ಭವಾನಿ (32) ಆತ್ಮಹತ್ಯೆ ಮಾಡಿಕೊಂಡಿರುವ ಮಹಿಳೆ. ಪತಿ ಎರವರ ಚೋಮು ಅವರೊಂದಿಗೆ ಗಣಪತಿ ಅವರ ತೋಟದಲ್ಲಿ ಕೂಲಿ ಕೆಲಸ ಮಾಡಿಕೊಂಡು ಭವಾನಿ ತನ್ನ ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದರು. ಭವಾನಿ ಪ್ರತಿದಿನ ವಿಪರೀತ ಮದ್ಯ ಸೇವಿಸುತ್ತಿದ್ದಳು ಎನ್ನಲಾಗಿದೆ. ಮಂಗಳವಾರ ಮುಂಜಾನೆ ಲೈನ್ ಮನೆಯ ಪಕ್ಕದಲ್ಲಿರುವ ಕಾಫಿ ಗಿಡಕ್ಕೆ ಭವಾನಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಸ್ಥಿತಿಯಲ್ಲಿ ಪತ್ತೆಯಾಗಿದೆ. ಗಣಪತಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ನಾಪೋಕ್ಲು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಿದ್ಯುತ್ ವ್ಯತ್ಯಯ

ಗೋಣಿಕೊಪ್ಪ ; ವಿದ್ಯುತ್ ಮಾರ್ಗ ನಿರ್ವಹಣೆ ಹಿನ್ನೆಲೆಯಲ್ಲಿ ನ.4 ರಂದು ಗೋಣಿಕೊಪ್ಪ ವ್ಯಾಪ್ತಿಯಲ್ಲಿ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಗೋಣಿಕೊಪ್ಪ ಸೆಸ್ಕ್ ಪ್ರಕಟಣೆ ತಿಳಿಸಿದೆ. ಕೀಕೇರಿ, ಕ್ಯಾಲ್ಸ್ ಶಾಲೆ, ಭಗವತಿ ದೇವಸ್ಥಾನ, ಈರಣ್ಣ ಕಾಲನಿ, ಹಾತೂರು, ಕಳತ್ಮಾಡು, ಹೊಸಕೋಟೆ, ಗೊಟ್ಟಡ, ಕೊಳ್ತೋಡು, ಬೈಗೋಡು ಗ್ರಾಮಗಳಲ್ಲಿ ವ್ಯತ್ಯಯ ಉಂಟಾಗಲಿದೆ.

ಕನ್ನಡ ರಾಜ್ಯೋತ್ಸವ ದಿನದಂದು ಸಿಎನ್‌ಸಿ ಶಾಂತಿಯುತ ಪ್ರತಿಭಟನೆ

ಬೇಡಿಕೆಗಳ ಮನವಿ ಪತ್ರ ಕೇಂದ್ರ, ರಾಜ್ಯ ಸರ್ಕಾರಕ್ಕೆ ಸಲ್ಲಿಕೆ

ರಾಜ್ಯಗಳ ಮರು ಸಂಘಟನಾ ಕಾಯಿದೆಗೆ ಬದ್ಧವಾಗದ ರಾಜ್ಯ



ಮಡಿಕೇರಿ, ನ.2– ರಾಜ್ಯಗಳ ಮರು–ಸಂಘಟನಾ ಕಾಯಿದೆ 1956ರ ಒಪ್ಪಂದಗಳಿಗೆ ಕರ್ನಾಟಕ ರಾಜ್ಯ ಬದ್ಧವಾಗಿಲ್ಲ, ಇದರಿಂದ ಕೊಡವರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿ ಕನ್ನಡ ರಾಜ್ಯೋತ್ಸವದ ದಿನದಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಧರಣಿ ಸತ್ಯಾಗ್ರಹ ನಡೆಸುವ ಮೂಲಕ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು.

ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತೆ ಬೇಡಿಕೆಯನ್ವಯ 2ನೇ ರಾಜ್ಯ ಮರು ಸಂಘಟನೆ ಆಯೋಗ ರಚಿಸಬೇಕೆಂದು ಸತ್ಯಾಗ್ರಹದ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರು ಒತ್ತಾಯಿಸಿದರು.

ಜಿಲ್ಲಾಡಳಿತದ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ 9 ಪ್ರಮುಖ ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಿದ ಅವರು ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಮಾಜಿ ಕೇಂದ್ರ ಸಚಿವ ಡಾ. ಸುಬ್ರಮಣಿಯನ್ ಸ್ವಾಮಿ ಅವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಸಲ್ಲಿಸಿ ಕೊಡವ ಲ್ಯಾಂಡ್ ಪರವಾಗಿ ಆಯೋಗವನ್ನು ರಚಿಸಬೇಕೆಂದು ಪ್ರತಿಪಾದಿಸಿದ್ದಾರೆ. ಸರ್ಕಾರಗಳು ಈ ಪ್ರಸ್ತಾಪವನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಅತ್ಯಂತ ಸೂಕ್ಷ್ಮ ಬುಡಕಟ್ಟು ಜನಾಂಗವಾಗಿರುವ ಕೊಡವರಿಗೆ ಸಾಂವಿಧಾನಿಕ ಭದ್ರತೆ ನೀಡಬೇಕೆಂದು ಆಗ್ರಹಿಸಿದರು.

ಸಂವಿಧಾನದ 7ನೇ ತಿದ್ದುಪಡಿಯಲ್ಲಿ ಪ್ರತಿಪಾದಿಸಲಾದ ರಾಜ್ಯಗಳ ಮರು–ಸಂಘಟನಾ ಕಾಯಿದೆ 1956ರ ಒಪ್ಪಂದಗಳಿಗೆ ಕರ್ನಾಟಕ ರಾಜ್ಯವು ಬದ್ಧವಾಗಿಲ್ಲ. 'ಸಿ' ರಾಜ್ಯವಾಗಿದ್ದ ಕೂರ್ಗ್ 1956ರಲ್ಲಿ ಕರ್ನಾಟಕದೊಂದಿಗೆ ವಿಲೀನವಾದ ನಂತರ ಕೊಡವರನ್ನು ರಾಜ್ಯದ 2ನೇ ದರ್ಜೆಯ ವರ್ಣಭೇದ ನೀತಿಯ ನಾಗರಿಕರಂತೆ ಪರಿಗಣಿಸಲಾಗಿದೆ. ಇದು ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ನಾಚಪ್ಪ ಆರೋಪಿಸಿದರು.


ಕೊಡವರು ಕೊಡವ ಪ್ರದೇಶದ ಮೂಲನಿವಾಸಿ ಬುಡಕಟ್ಟು ಜನಾಂಗವಾಗಿದೆ. ಈ ಸೂಕ್ಷ್ಮ ಜನರ ರಕ್ಷಣೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿದೆ. ಆದ್ದರಿಂದ ಆಂತರಿಕ ರಾಜಕೀಯ–ಸ್ವಯಂ–ನಿರ್ಣಯದ ಹಕ್ಕು, ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ, ಸ್ವಯಂ ಆಡಳಿತ ಸೇರಿದಂತೆ ಕೊಡವರ ಪರವಾದ 9 ನ್ಯಾಯ ಸಮ್ಮತವಾದ ಬೇಡಿಕೆ ಗಳನ್ನು ಮಂಡಿಸುತ್ತಿರುವುದಾಗಿ ತಿಳಿಸಿದರು.

ಕಲಿಯಂಡ ಪ್ರಕಾಶ್, ಕಲಿಯಂಡ ಮೀನಾ ಪ್ರಕಾಶ್, ಬೊಟ್ಟಂಗಡ ಸವಿತ ಗಿರೀಶ್, ಲೆ.ಕ.ಬಿ.ಎಂ.ಪಾರ್ವತಿ, ಪಟ್ಟಮಾಡ ಲಲಿತ ಗಣಪತಿ, ಚೋಳಪಂಡ ಜ್ಯೋತಿ ನಾಣಯ್ಯ, ಕೂಪದಿರ ಪುಷ್ಪ ಮುತ್ತಣ್ಣ, ಚಂಬಂಡ ಜನತ್, ಅರೆಯಡ ಗಿರೀಶ್, ಕಾಂಡೆರ ಸುರೇಶ್, ಬೇಪಡಿ ಯಂಡ ದಿನು, ಬೊಟ್ಟಂಗಡ ಗಿರೀಶ್, ಕಿರಿಯಮಾಡ ಶರೀನ್, ಅಪ್ಪಿಯಂಗಡ ಮಾಲೆ, ಬೊಟ್ಟಂಗಡ ದೇವಯ್ಯ, ಮುದ್ದಂಡ ಗಪ್ಪು, ಚಂಬಂಡ ಚಾಮಿ, ಬೇಪಡಿಯಂಡ ಬಿದ್ದಪ್ಪ, ಪುಲ್ಲೇರ ಕಾಳಪ್ಪ, ನಂದಿನೆರವಂಡ ವಿಜು, ಕೂಪದಿರ ಸಾಬು, ಪಾರುವಂಗಡ ನವೀನ್, ಮಂದಪಂಡ ಮನೋಜ್, ಮಣುವಟ್ಟಿರ ಚಿಣ್ಣಪ್ಪ, ಪುಟ್ಟಿಚಂಡ ಡಾನ್ ದೇವಯ್ಯ, ಚೋಳಪಂಡ ನಾಣಯ್ಯ, ಮೇದುರ ಕಂಠಿ, ನಂದಿನೆರವಂಡ ಅಯ್ಯಣ್ಣ, ನಂದಿನೆರವಂಡ ಅಪ್ಪಯ್ಯ, ಅಜ್ಜಿನಿಕಂಡ ಸನ್ನಿ ಮಾಚಯ್ಯ ಮತ್ತಿತರರು ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಕೊಡವ ಲ್ಯಾಂಡ್‌ಗಾಗಿ ಒತ್ತಾಯಿಸಿದರು.

ಬಂಡೀಪುರ ಕ್ಯಾಂಪ್‌ನಲ್ಲಿ ತೀವ್ರ ಹೃದಯಾಘಾತದಿಂದ 'ಅಕ್ಕಿರಾಜ' ಸಾವು



● ಕ್ರಾಲ್‌ನಿಂದ ಬಿಡುಗಡೆಯಾದ 10 ದಿನದಲ್ಲಿ ಇಹಲೋಕ ತ್ಯಜಿಸಿದ ಗಜರಾಜ ● ಕರ್ನಾಟಕ, ತಮಿಳುನಾಡು ಗಡಿಯಲ್ಲಿ ಮನೆಗೆ ನುಗ್ಗಿ ಅಕ್ಕಿ ಭಕ್ಷಿಸುತ್ತಿದ್ದ ಆನೆ ● ಸೆರೆ ಹಿಡಿದು ಪಳಗಿಸಲಾಗುತ್ತಿತ್ತು



ಕ್ರಾಲ್‌ನಲ್ಲಿಟ್ಟು ತರಬೇತಿ ನೀಡುತ್ತಿರುವುದು.

ಮೈಸೂರು, ನ.2(ಎಂಟಿವೈ)– ಕರ್ನಾಟಕ ಮತ್ತು ತಮಿಳುನಾಡು ಕಾಡಂಚಿನ ಗ್ರಾಮಗಳಲ್ಲಿ ಮನೆ ಹಾಗೂ ನ್ಯಾಯಬೆಲೆ ಅಂಗಡಿಗಳಲ್ಲಿ ಅಕ್ಕಿ ಮುಕ್ಕುತ್ತಲೇ ಜನರ ಪ್ರೀತಿಗೆ ಪಾತ್ರವಾಗಿದ್ದ 'ಅಕ್ಕಿ ರಾಜ' ಆನೆ ಬಂಡೀಪುರದ ರಾಂಪುರ ಕ್ಯಾಂಪ್‌ನಲ್ಲಿ ತೀವ್ರ ಹೃದಯಾಘಾತದಿಂದ ಕೊನೆಯುಸಿರೆಳೆದಿದೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ ಉಪ ವಿಭಾಗದ ಐನೂರು ಮಾರಿಗುಡಿ ವಲಯದ ರಾಂಪುರ ಕ್ಯಾಂಪ್‌ನಲ್ಲಿ ಜೂನ್‌ನಿಂದ ಕ್ರಾಲ್‌ನಲ್ಲಿಟ್ಟು ಸಾಕಾನೆಗಳೊಂದಿಗೆ ಪಳಗಿಸಲಾಗುತ್ತಿದ್ದ 'ಅಕ್ಕಿ ರಾಜ' ಖ್ಯಾತಿಯ ಆನೆ ಅ.31ರಂದು ಮಧ್ಯಾಹ್ನ ಏಕಾಏಕಿ ಹಠಾತನೆ ಕುಸಿದು ಬಿದ್ದು ಸಾವನ್ನಪ್ಪಿದೆ. ಸುಮಾರು 45 ವರ್ಷ ಈ ಗಂಡಾನೆ ತರಬೇತಿ ವೇಳೆ ಉತ್ತಮವಾಗಿ ಸ್ಪಂಧಿಸಿದ್ದು, ಸೆರೆ ಸಿಕ್ಕಿದ 4 ತಿಂಗಳಲ್ಲಿ ಕ್ರಾಲ್‌ನಿಂದ ಹೊರ ಕರೆತರಲಾಗಿತ್ತು. ಕ್ರಾಲ್‌ನಿಂದ ಹೊರ ಬಂದ 10 ದಿನದಲ್ಲಿ ತೀವ್ರ ಹೃದಯಾಘಾತದಿಂದ ಬಲಿಯಾಗಿದ್ದು, ಅಪಾರ ಪ್ರಾಣಿ ಪ್ರಿಯರೊಂದಿಗೆ ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ ಅಘಾತವುಂಟಾಗಿದೆ.

ಜೋಡಿ ಆನೆಗಳ ಉಪಟಳ: ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯ ತಡಾಗಂ ಎಂಬಲ್ಲಿ 2018ರಲ್ಲಿ ಎರಡು ಗಂಡಾನೆಗಳು ಕಾಡಂಚಿನ ಗ್ರಾಮಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿದ್ದವು. ಅಲ್ಲಿನ ಜನ ಎರಡೂ ಆನೆಗಳಿಗೆ ಒಂದಕ್ಕೆ ಚಿನ್ನದಂಬಿ ಎಂತಲೂ, ಮತ್ತೊಂದಕ್ಕೆ ವಿನಾಯಕನ್ ಎಂದು ಹೆಸರಿಟ್ಟು ಕರೆಯುತ್ತಿದ್ದರು. ಈ ವೇಳೆ ಎರಡೂ ಆನೆಗಳು ಉಪಟಳ ಹೆಚ್ಚಿಸಿದಾಗ ಎರಡೂ ಆನೆಯನ್ನು ತಮಿಳುನಾಡು ಅರಣ್ಯ ಇಲಾಖೆ ಸೆರೆ ಹಿಡಿಯಲು ನಿರ್ಧರಿಸಿತ್ತು. ಮೊದಲು ಚಿನ್ನದಂಬಿ ಆನೆಯನ್ನು ಸೆರೆ ಹಿಡಿದು ಪೊಲ್ಲಾಚಿ ಸಮೀಪದ ಅಣ್ಣಾಮಲೈ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರೇಡಿಯೊ ಕಾಲರ್ ಅಳವಡಿಸಿ ಬಿಡುಗಡೆ ಮಾಡಿದ್ದರೆ, ವಿನಾಯಕ ಆನೆಯನ್ನು ಬಂಡೀಪುರ ಸಮೀಪದ ಮುಧುಮಲೈ ಅರಣ್ಯ ಪ್ರದೇಶದಲ್ಲಿ ರೇಡಿಯೋ ಕಾಲರ್ ಅಳವಡಿಸಿ ಬಿಡುಗಡೆ ಮಾಡಲಾಗಿತ್ತು.

ವಿನಾಯಕ ಆನೆ ತಮಿಳುನಾಡಿನ ವಿವಿಧ ಗ್ರಾಮಗಳಲ್ಲಿ ಉಪಟಳ ಮುಂದುವರೆಸಿತ್ತು. ಈ ವೇಳೆ ವ್ಯಕ್ತಿಯೊಬ್ಬನ ಮೇಲೆ ದಾಳಿ ಮಾಡಿತ್ತು. ಆ ನಂತರ ಅರಣ್ಯ ಇಲಾಖೆಯ ಕಣ್ಣಿಗೆ ಬೀಳದ ಅಜ್ಞಾತಗೊಂಡಿತ್ತು. ಕಾಡೊಳಗೆ ಮರಕ್ಕೆ ಕತ್ತು ಉಜ್ಜಿಕೊಳ್ಳುವ ವೇಳೆ ರೇಡಿಯೋ ಕಾಲರ್ ಬೀಳಿಸಿಕೊಂಡಿದ್ದರಿಂದ ಅರಣ್ಯ ಇಲಾಖೆಯ ಹದ್ದಿನ ಕಣ್ಣಿನಿಂದ ತಪ್ಪಿಸಿಕೊಂಡಿತ್ತು. ಆ ಬಳಿಕ ಕರ್ನಾಟಕ ಪ್ರವೇಶಿಸಿದ್ದ ವಿನಾಯಕ ಆನೆ ಬಂಡೀಪುರದ ಕುಂದಕೆರೆ ವಲಯದ ಹಲವು ಗ್ರಾಮಗಳಲ್ಲಿ ಉಪಟಳ ಮುಂದುವರೆಸಿತ್ತು. ಬೆಳೆ ನಾಶ ಮಾಡುವುದು ಮಾತ್ರವಲ್ಲದೆ, ಮನೆ ಹಾಗೂ ನ್ಯಾಯಬೆಲೆ ಅಂಗಡಿಗೆ ನುಗ್ಗಿ ಅಕ್ಕಿಯನ್ನೇ ತಿನ್ನುತ್ತಿದ್ದರಿಂದ ಅದಕ್ಕೆ ಅಕ್ಕಿರಾಜ ಎಂದು ಬಂಡೀಪುರದ ಜನ ಹೆಸರಿಟ್ಟಿದ್ದರು.

2023ರ ಜೂ.7ರಂದು ಕುಂದಕೆರೆ ಬಳಿ ಸೆರೆ ಹಿಡಿದಿದ್ದ ಅಕ್ಕಿರಾಜ ಆನೆಯನ್ನು ರಾಂಪುರ ಕ್ಯಾಂಪ್‌ನಲ್ಲಿಟ್ಟು ಪಳಗಿಸಲಾಗುತ್ತಿತ್ತು. ಅ.21ರಂದು ಬೆಳಗ್ಗೆ ಅಕ್ಕಿರಾಜನಿಗೆ ಪೂಜೆ ಮಾಡಿ ಕ್ರಾಲ್‌ನಿಂದ ಹೊರಗೆ ಕರೆದುಕೊಂಡು ಬರಲಾಗಿತ್ತು. ಕ್ರಾಲ್‌ನಿಂದ ಹೊರ ಬರುವ ವೇಳೆ ಎರಡೂ ಕಾಲು ಊರಿ ನಮಸ್ಕರಿಸದಂತೆ ವರ್ತಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು.

ಕ್ಯಾಂಪ್‌ನಲ್ಲಿರುವ ಇತರೆ ಸಾಕಾನೆಗಳೊಂದಿಗೆ ಕಳೆದ 10 ದಿನಗಳಿಂದ ಪೌಷ್ಠಿಕ ಆಹಾರ ಸೇವಿಸಿ ಲವಲವಿಕೆಯಿಂದ ಇದ್ದ ಅಕ್ಕಿರಾಜ ಅ.31ರಂದು ಮಧ್ಯಾಹ್ನ 2 ಗಂಟೆಗೆ ಹಠಾತ್ತನೆ ಕುಸಿದು ಬಿದ್ದಿದೆ. ಕ್ಯಾಂಪ್‌ನಲ್ಲೇ ಇದ್ದ ಪಶುವೈದ್ಯರು ಪ್ರಾಥಮಿಕ ಚಿಕಿತ್ಸೆ ನೀಡುವುದಕ್ಕೂ ಮೊದಲು ಅಕ್ಕಿರಾಜ ಮೃತಪಟ್ಟಿದೆ. ನ.1ರಂದು ಕ್ಯಾಂಪ್ ಸಿಬ್ಬಂದಿಗಳು ಅಕ್ಕಿ ರಾಜನ ಮೃತದೇಹಕ್ಕೆ ಪೂಜೆ ಸಲ್ಲಿಸಿದ ಬಳಿಕ ಪಶುವೈದ್ಯರಾದ ಡಾ.ವಾಸಿಂ ಮಿರ್ಜಾ, ಡಾ.ಮುಜೀಬ್ ರೆಹಮಾನ್ ಮರಣೋತ್ತರ ಪರೀಕ್ಷೆ ನಡೆಸಿದರು. ಈ ವೇಳೆ ಅಕ್ಕಿರಾಜನ ಹೃದಯ ಸಾಮಾನ್ಯ ಆನೆಗಳಿಗಿಂತ ಮೂರು ಪಟ್ಟು ದಪ್ಪವಾಗಿರುವುದು ಪತ್ತೆಯಾಗಿದೆ. ಅಲ್ಲದೆ, ಲಿವರ್ ಸಮಸ್ಯೆ ಇರುವುದು ಪತ್ತೆಯಾಗಿತ್ತು. ಆನೆ ಸಾವಿಗೆ ತೀವ್ರ ಹೃದಯಾಘತಕ್ಕೆ ಕಾರಣ ಎಂದು ದೃಢಪಟ್ಟಿದೆ.



ಕೊಂಬುಡಿಕ್ಕಿ ಹಾಡಿಗೆ ಉಸ್ತುವಾರಿ ಸಚಿವರ ಭೇಟಿ

ಅಂಗನವಾಡಿ ಸೋರುತ್ತಿದೆ, ರಸ್ತೆ ಹಾಳಾಗಿದೆ, ಬಸ್ಸಿಲ್ಲ, ಮನೆಗಳನ್ನು ನಿರ್ಮಿಸಿಕೊಡಿ, ಮೂಲ ಸೌಲಭ್ಯ ಕಲ್ಪಿಸಿಕೊಡಿ ಎಂದ ನಿವಾಸಿಗಳು



ಚಾಮರಾಜನಗರ, ನ.2– ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಇಂದು ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಕೊಂಬುಡಿಕ್ಕಿ ಹಾಡಿಗೆ ಭೇಟಿ ನೀಡಿ ಅಲ್ಲಿನ ಜನರ ಅಹವಾಲುಗಳನ್ನು ಆಲಿಸಿದರು.

ಹಾಡಿಯ ಜನರೊಂದಿಗೆ ಸಂವಾದ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವರು ಪಡಿತರ ಸರಿಯಾಗಿ ಸಿಗುತ್ತಿದೆಯೇ, ಅಕ್ಕಿ ಬದಲಿಗೆ ನೀಡುತ್ತಿರುವ ಹಣ ಖಾತೆಗೆ ಜಮೆಯಾಗುತ್ತಿದೆಯೇ, ಗೃಹಲಕ್ಷ್ಮಿ ಯೋಜನೆ ತಲುಪುತ್ತಿದೆಯೇ ಎಂದು ಪ್ರಶ್ನಿಸಿದರು. ಕೆಲ ಕುಟುಂಬಗಳಿಗೆ ಎಪಿಎಲ್ ಕಾರ್ಡ್ ಆಗಿದ್ದು, ಇದರಿಂದ ಸೌಲಭ್ಯ ಲಭಿಸುತ್ತಿಲ್ಲ. ಎಪಿಎಲ್ ಕಾರ್ಡ್‌ನ್ನು ಬಿಪಿಎಲ್ ಕಾರ್ಡ್‌ಗೆ ಬದಲಾಯಿಸಿಕೊಡುವಂತೆ ಸ್ಥಳೀಯರು ಮನವಿ ಮಾಡಿದರು. ಈ ಸಂಬಂಧ ಉಂಟಾಗಿರುವ ಸಮಸ್ಯೆಯನ್ನು ಸರಿಪಡಿಸುವಂತೆ ಉಸ್ತುವಾರಿ ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಾಡಿಯಲ್ಲಿರುವ ಅಂಗನವಾಡಿ ಸೋರುತ್ತಿದೆ. ಶಾಲಾ ಕಟ್ಟಡವು ಶಿಥಿಲವಾಗಿದೆ. ಹಾಡಿ ಸಂಪರ್ಕಿಸುವ ರಸ್ತೆ ಹಾಳಾಗಿದೆ. ಈ ಎಲ್ಲವನ್ನು ಸರಿಪಡಿಸಬೇಕೆಂದು ಜನರು ಕೋರಿದರು. ಇದಕ್ಕೆ ಸ್ಪಂದಿಸಿದ ಸಚಿವರು ಶಿಥಿಲಗೊಂಡಿರುವ ಶಾಲಾ ಅಂಗನವಾಡಿ ಕಟ್ಟಡಗಳನ್ನು ಸರಿಪಡಿಸಲು ತ್ವರಿತವಾಗಿ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ವಿಪತ್ತು ಪರಿಹಾರ ನಿಧಿ ಯೋಜನೆಯಡಿ ದುರಸ್ತಿಗೆ ಕ್ರಮ ವಹಿಸಲಾಗುವುದು ಎಂದರು.

ಹಾಡಿಗೆ ದಿನಕ್ಕೆ ಎರಡು ಬಾರಿ ಮಾತ್ರ ಬಸ್ ಬರುತ್ತಿದೆ. ಇದರ ಅವಧಿಯನ್ನು ಹೆಚ್ಚಿಸಬೇಕು. ಮನೆಗಳನ್ನು ನಿರ್ಮಿಸಿಕೊಡಬೇಕು. ಇತರೆ ಮೂಲ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಸ್ಥಳೀಯರು ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರು ಮಾತನಾಡಿ ಎಷ್ಟು ಜನರಿಗೆ ಮನೆ ಅಗತ್ಯವಿದೆ ಎಂಬ ಬಗ್ಗೆ ವಿವರವಾಗಿ ಸರ್ವೆ ಮಾಡಿ ವರದಿ ನೀಡಿ. ಅಗತ್ಯಕ್ಕನುಗುಣವಾಗಿ ಹಂತ ಹಂತವಾಗಿ ವಸತಿ ಯೋಜನೆ ಕಲ್ಪಿಸಿಕೊಡಲಾಗುತ್ತದೆ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಜನರಿಗೆ ಪಿಂಚಣಿ ಇನ್ನಿತರ ಸೌಲಭ್ಯಗಳು ತ್ವರಿತವಾಗಿ ಸಿಗಲು ಇಲ್ಲಿಯೇ ಪಿಂಚಣಿ ಅದಾಲತ್ ಆಯೋಜಿಸಬೇಕು ಎಂದು ಸಚಿವರು ತಿಳಿಸಿದರು. ಇದೇ ವೇಳೆ ಶಾಸಕ ಎಂ.ಆರ್. ಮಂಜುನಾಥ್ ಮಾತನಾಡಿ, ಎಲ್ಲ ಹಾಡಿಗಳಲ್ಲೂ ಸರ್ವೆ ಮಾಡಿಸಿ ಮನೆ ಸೌಲಭ್ಯ ಕಲ್ಪಿಸಬೇಕು ಎಂದರು.

ಉಸ್ತುವಾರಿ ಸಚಿವರು ಮಾತನಾಡಿ, ನರೇಗಾ ಯೋಜನೆ ಪ್ರಯೋಜನ ತಲುಪುತ್ತಿದೆಯೇ ಎಲ್ಲರಿಗೂ ಉದ್ಯೋಗ ಲಭಿಸುತ್ತಿದೆಯೇ ಎಂದು ಪ್ರಶ್ನಿಸಿದರು. ಬೇಡಿಕೆಗೆ ಅನುಗುಣವಾಗಿ ಸ್ಥಳೀಯವಾಗಿ ಉದ್ಯೋಗ ಕಲ್ಪಿಸಿ ಜನರಿಗೆ ನೆರವಾಗುವ ಕಾರ್ಯಗಳಿಗೆ ಅನುಕೂಲ ಮಾಡಿಕೊಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ವೇಳೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡಲಾಗುವ ಪೌಷ್ಠಿಕ ಆಹಾರ ಕಿಟ್‌ಗಳನ್ನು ಹಾಡಿಯ ಜನರಿಗೆ ವಿತರಿಸಲಾಯಿತು. ಶಾಸಕ ಎಂ.ಆರ್. ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಎಸ್‌ಪಿ ಪದ್ಮಿನಿ ಸಾಹು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ತಹಶೀಲ್ದಾರ್ ಗುರುಪ್ರಸಾದ್, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ಜನವನ ಸಾರಿಗೆಗೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರಿಂದ ಚಾಲನೆ



ಚಾಮರಾಜನಗರ, ನ.2– ಹಾಡಿ, ಅರಣ್ಯ ಪ್ರದೇಶಗಳ ಜನರ ಓಡಾಟಕ್ಕೆ ಅನುಕೂಲ ಕಲ್ಪಿಸುವ ಜನವನ ಸಾರಿಗೆಗೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತು ಸಚಿವ ಕೆ. ವೆಂಕಟೇಶ್ ಇಂದು ಚಾಲನೆ ನೀಡಿದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್, ಶಾಸಕ ಎಂ.ಆರ್. ಮಂಜುನಾಥ್ ಅವರೊಂದಿಗೆ ಹಸಿರು ನಿಶಾನೆ ತೋರುವ ಮೂಲಕ ನಾಲ್ಕು ಜನವನ ಸಾರಿಗೆ ವಾಹನಗಳ ಸಂಚಾರಕ್ಕೆ ಚಾಲನೆ ನೀಡಿದರು. ಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಅರಣ್ಯ ಇಲಾಖೆಯಿಂದ ಗೂರ್ಖಾ ವಾಹನಗಳನ್ನು ಪಡೆದು ಜನವನ ಸಾರಿಗೆಗೆ ಚಾಲನೆ ನೀಡಿದೆ ಬೆಟ್ಟದ ವ್ಯಾಪ್ತಿಯ ದುರ್ಗಮ ಹಾಡಿಗಳ ಜನರ ಓಡಾಟಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಜನವನ ಸಾರಿಗೆ ವ್ಯವಸ್ಥೆ ಮಾಡಲಾಗಿದೆ.

ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವರಾದ ಸರಸ್ವತಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಇತರರು ಈ ಸಂದರ್ಭದಲ್ಲಿ ಇದ್ದರು.

ಸಿಲಿಂಡರ್ ವಿತರಕರಿಂದ ಹೆಚ್ಚುವರಿ ಹಣ ವಸೂಲಿ | ಕ್ರಮಕ್ಕೆ ಡಿಸಿಗೆ ಮನವಿ ಸಲ್ಲಿಕೆ



ಚಾಮರಾಜನಗರ,ನ.2– ಗ್ಯಾಸ್ ಸಿಲಿಂಡರ್ ವಿತರಕರು ಗ್ರಾಹಕರಿಂದ ಹೆಚ್ಚುವರಿ ಹಣ ಪಡೆಯುತ್ತಿದ್ದಾರೆ. ಇದರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಟಿಪ್ಪು ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ತಿಳಿಸಿದಂತೆ ಗ್ಯಾಸ್ ಏಜೆನ್ಸಿ , ವಿತರಕರು ಚಾಮರಾಜನಗರದ 5 ಕಿಲೋಮೀಟರ್ ವ್ಯಾಪ್ತಿಯೊಳಗೆ ಪ್ರತಿ ಮನೆಯ ಬಾಗಿಲಿಗೆ ಬಿಲ್‌ನ ಮೊತ್ತಕ್ಕಿಂತ ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ ಗ್ಯಾಸ್ ಸಿಲಿಂಡರ್ ವಿತರಿಸಬೇಕು ಹಾಗೂ ಕಿಲೋಮೀಟರ್ ವ್ಯಾಪ್ತಿಗಿಂತ ಹೆಚ್ಚಾದರೆ ಮಾತ್ರ ಪ್ರತಿ ಸಿಂಡರ್‌ಗೆ 3.50ಪೈಸೆ ಪಡೆಯಬೇಕು ಎಂದು ಸೂಚನೆ ಇದ್ದರೂ ಕೂಡ ವಿತರಕರು ನಿಯಮಗಳನ್ನು ಗಾಳಿಗೆ ತೂರಿ ಬಿಲ್ ನಿಗದಿತ ಮೊತ್ತಕ್ಕಿಂತ ಹೆಚ್ಚುವರಿಯಾಗಿ 40 ರೂ.ಗಿಂತಲೂ ಅಧಿಕವಾಗಿ ಹಣವನ್ನು ಗ್ರಾಹಕರಿಂದ ಪಡೆಯುತ್ತಿರುತ್ತಾರೆ ಎಂದು ಆಪಾದಿಸಿದರು.

ತಾವು ಈ ಹೆಚ್ಚುವರಿ ಹಣ ಪಡೆದಿರುವ ವಿತರಕರ ವಿರುದ್ದ ಕಾನೂನು ಕ್ರಮ ಕೈಗೊಂಡು ಗ್ರಾಹಕರಿಗೆ ಅನುಕೂಲ ಮಾಡಿಕೊಡಬೇಕುಟಿಪ್ಪು ವೆಲ್ ಫೇರ್ ಅಸೋಸಿಯೇಷನ್ ಜಿಲ್ಲಾಧ್ಯಕ್ಷ ಮಹಮ್ಮದ್ ಜಾವಿದ್ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಟಿಪ್ಪು ವೆಲ್ ಫೇರ್ ಅಸೋಸಿಯೇಷನ್ , ಪ್ರಧಾನ ಕಾರ್ಯದರ್ಶಿ ಇರ್ಷಾದ್ ಅಹಮದ್, ಕಾರ್ಯದರ್ಶಿ ಸುಹೇಬ್, ಸಮಿತಿ ಸದಸ್ಯರಾದ ಇದ್ರೀಸ್ ಖಾನ್, ಅಫ್ಸರ್ ಪಾಷ, ಆರೀಫ್, ಜಾಬಿವುಲ್ಲಾ ಇತರರು ಹಾಜರಿದ್ದರು.

ನಿಷೇಧಿತ ಪಟಾಕಿ ದಾಸ್ತಾನು ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ

ಗೋದಾಮು ಮುಟ್ಟುಗೋಲಿಗೆ ಪೌರಾಡಳಿತ ನಿರ್ದೇಶನಾಲಯ ಸೂಚನೆ



ಮೈಸೂರು,ನ.2(ಪಿಎಂ)– ಎಲ್ಲಾ ಪಟಾಕಿ ಮಾರಾಟಗಾರರ ಗೋದಾಮುಗಳನ್ನು ಪರಿಶೀಲಿಸಿ, ಹಸಿರು ಪಟಾಕಿಯಲ್ಲದೆ, ನಿಷೇಧಿತ ಪಟಾಕಿಗಳನ್ನು ದಾಸ್ತಾನು ಮಾಡಿದ್ದಲ್ಲಿ ಇಡೀ ಗೋದಾಮನ್ನು ಮುಟ್ಟುಗೋಲು ಹಾಕಿಕೊಂಡು ಸಂಬಂಧಿತ ವ್ಯಕ್ತಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ. ರಾಜ್ಯದಲ್ಲಿ ದೀಪಾವಳಿ ಹಬ್ಬದ ಸಮಯದಲ್ಲಿ ಪಟಾಕಿಗಳನ್ನು ಸ್ಫೋಟಿಸುವುದರಿಂದ ಉಂಟಾಗುವ ಶಬ್ಧ ಮಾಲಿನ್ಯ ಮತ್ತು ವಾಯು ಮಾಲಿನ್ಯದಿಂದ ಸಾರ್ವಜನಿಕ ಆರೋಗ್ಯದ ಮೇಲೆ ತೀವ್ರ ಪರಿಣಾಮ ಉಂಟಾಗುವುದನ್ನು ತಡೆಗಟ್ಟಲು ಎಲ್ಲಾ ಮಹಾನಗರ ಪಾಲಿಕೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಕ್ರಮ ವಹಿಸಬೇಕು. ಈ ಹಿನ್ನೆಲೆಯಲ್ಲಿ ಸುಪ್ರಿಂಕೋರ್ಟ್ ಆದೇಶಗಳನ್ನು ಜಾರಿಗೊಳಿಸಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸಬೇಕು.

ಸುಪ್ರಿಂಕೋರ್ಟ್ ಆದೇಶಗಳನ್ನು ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ತಮ್ಮ ಅಧೀನ ಅಧಿಕಾರಿಗಳ ಗಮನಕ್ಕೆ ತರುವ ಮೂಲಕ ಸೂಕ್ತ ಕ್ರಮ ಜರುಗಿಸಬೇಕು. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಜಿಲ್ಲಾ ಅಗ್ನಿಶಾಮಕ ಪಡೆ ಅಧಿಕಾರಿ, ಸ್ಥಳೀಯ ಸಂಸ್ಥೆಯ ಮುಖ್ಯಸ್ಥರು, ಆರೋಗ್ಯಾಧಿಕಾರಿಗಳು, ತಹಸೀಲ್ದಾರರು, ಜಿಲ್ಲಾ ಪರಿಸರ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಆಸಕ್ತ ನಾಗರಿಕರು ಹಾಗೂ ಸ್ಥಳೀಯ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಕಾರ್ಯಪಡೆಗಳನ್ನು ರಚಿಸಿ, ಪಟಾಕಿ ಗೋದಾಮುಗಳನ್ನು ಪರಿಶೀಸಬೇಕು.

ಹಸಿರು ಪಟಾಕಿಯ ಚಿಹ್ನೆ ಇಲ್ಲದ ಯಾವುದೇ ಪಟಾಕಿ ಹಸಿರು ಪಟಾಕಿಯಾಗಿರುವುದಿಲ್ಲ. ಅಲ್ಲದೆ, ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಹಸಿರು ಪಟಾಕಿಗಳ ಪ್ಯಾಕೆಟ್ಟುಗಳನ್ನು ರ್ಯಾಂಡಮ್ ಆಗಿ ಸಂಗ್ರಹಿಸಿ ನಿಗದಿತ ವಿಧಿ–ವಿಧಾನಗಳ ಮೂಲಕ ಅವುಗಳ ಶಬ್ಧ ಮಟ್ಟವನ್ನು ಮಾಪನ ಮಾಡಬೇಕು. ಜೊತೆಗೆ ನಿಗದಿತ ಗುಣ ಮಾಪನಗಳಿಗೆ ಸರಿ ಹೊಂದದಿದ್ದಲ್ಲಿ ಅವುಗಳನ್ನು ಸಹ ಕೂಡಲೇ ಮುಟ್ಟುಗೋಲು ಹಾಕಿಕೊಳ್ಳಬೇಕು.

ದೀಪಾವಳಿ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು. ಅಲ್ಲದೆ, ಬಳಸುವಾಗ ಯಾವುದೇ ಪ್ರಾಣಿ ಪಕ್ಷಿ ಮಕ್ಕಳು, ವೃದ್ಧರಿಗೆ ತೊಂದರೆಯಾಗಬಾರದು. ಯಾವುದೇ ಸ್ಥಳೀಯ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಸುತ್ತಮುತ್ತಲಿನ ಹಾಗೂ ಇನ್ನಾವುದೇ ನಿಷೇಧಿತ ಪ್ರದೇಶದಲ್ಲಿ ಯಾವುದೇ ರೀತಿಯ ಪಟಾಕಿ ಸ್ಫೋಟಿಸುವಂತಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ನಗರ ಪಾಲಿಕೆಗಳು, ಸ್ಥಳಿಯ ಸಂಸ್ಥೆಗಳು ಕಡ್ಡಾಯವಾಗಿ ಕ್ರಮವಹಿಸಬೇಕು. ಪರಿಸರ ಸ್ನೇಹಿ ದೀಪಾವಳಿ ಹಬ್ಬ ಆಚರಿಸುವ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸುತ್ತೋಲೆಯಲ್ಲಿ ಸೂಚನೆ ನೀಡಲಾಗಿದೆ.

ಮೂರನೇ ಪುಟದಿಂದ

ನಾನೇ ಮುಂದುವರೆಯುತ್ತೇನೆ...

ಮಾಡದೇ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಮಲತಾಯಿ ಧೋರಣೆ ತೋರುತ್ತಿದೆ. ಮುಂಬರುವ ಲೋಕಸಭಾ ಚುನಾವಣೆಗೆ ಸಂಬಂಧಿ ಸಿದಂತೆ ಪಕ್ಷದ ನಾಯಕರು ರಾಜ್ಯಕ್ಕೆ ಆಗ ಮಿಸಿದ್ದಾರೆ. ಶಾಸಕರನ್ನು ಕೆಲವು ನಿಗಮ–ಮಂಡಳಿಗಳಿಗೆ ಅಧ್ಯಕ್ಷರಾಗಿ ನೇಮಕ ಮಾಡುವ ಪ್ರಕ್ರಿಯೆಯೂ ಇದ್ದು, ಈ ಬಗ್ಗೆಯೂ ಕೇಂದ್ರ ನಾಯಕರೊಂದಿಗೆ ಚರ್ಚೆ ನಡೆಸಲಾಗುವುದು ಎಂದರು. ಈ ಮುಂಚೆ ನೀಡುತ್ತಿದ್ದಂತೆ ಕೃಷಿ ಪಂಪ್ ಸೆಟ್‌ಗಳಿಗೆ ಪೂರಕ ಸೌಲಭ್ಯಗಳನ್ನು ರೈತರಿಗೆ ಮುಂದುವರೆಸಲಾಗುವುದು. ಯಡಿಯೂರಪ್ಪ ಆರೋಪಗಳು ಸುಳ್ಳು, ಕಾಂಗ್ರೆಸ್ ಸರ್ಕಾರ ಪತನವಾಗಲಿದೆ ಎಂದು ಬಿಜೆಪಿ ಯವರು ಹಗಲುಗನಸು ಕಾಣುತ್ತಿದ್ದಾರೆ. ಯಡಿಯೂರಪ್ಪನವರು ರಾಜಕೀಯದಿಂದ ನಿವೃತ್ತರಾಗಿದ್ದಾರೆ. ಬಿಜೆಪಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿತು. ವಿಧಾನಸಭೆಯಲ್ಲಿ ಅವರು ಕಣ್ಣೀರಿಟ್ಟಿದ್ದರು. ಅವರ ಪಕ್ಷದವರೇ ಅವರನ್ನು ಮನೆಗೆ ಕಳುಹಿಸಿದ್ದಾರೆ. ಅವರ ಹೇಳಿಕೆಗಳಿಗೆ ಏನೂ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು. ಕಾಂಗ್ರೆಸ್ ಶಾಸಕರು ಅವರ ಹಣದಲ್ಲಿ ವಿದೇಶ ಪ್ರವಾಸ ಹೋಗುತ್ತಿದ್ದಾರೆ, ಸರ್ಕಾರದಿಂದ ನಾವು ಯಾರನ್ನೂ ಕಳಿಸೋಲ್ಲ. ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಜನ ನಮ್ಮನ್ನು ಆಯ್ಕೆ ಮಾಡಿದ್ದಾರೆ. ನಾವು ಐದು ವರ್ಷ ಆಡಳಿತ ಮಾಡುತ್ತೇವೆ. ಮತ್ತೆ ಚುನಾವಣೆಗೆ ಹೋಗುತ್ತೇವೆ. ಮತ್ತೆ ಜನ ನಮಗೆ ಆಶೀರ್ವಾದ ಮಾಡಲಿದ್ದಾರೆ. ರಮೇಶ್ ಜಾರಕಿಹೊಳಿ ಸೋತು ಮನೆಯಲ್ಲಿರುವವರು, ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಅದಕ್ಕೆಲ್ಲಾ ಉತ್ತರಿಸಲಾಗುವುದಿಲ್ಲ.

ಮೊದಲು ಆಪರೇಷನ್ ಹಸ್ತ...!

ಗೊಂದಲ ನಿವಾರಿಸಲು ನಿನ್ನೆ ದಿಢೀರನೆ ಬೆಂಗಳೂರಿಗೆ ಧಾವಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಸುದೀರ್ಘ ಚರ್ಚೆ ನಡೆಸಿದ್ದರು. ಈ ಸಂದರ್ಭದಲ್ಲೇ ಪಕ್ಷ ಮತ್ತು ಸರ್ಕಾರವನ್ನು ಮತ್ತಷ್ಟು ಬಲಗೊಳಿಸಿಕೊಳ್ಳಲು ಪಕ್ಷದ ಸಿದ್ಧಾಂತಗಳಿಗೆ ಒಪ್ಪಿ ಬಿಜೆಪಿ–ಜೆಡಿಎಸ್ ತೊರೆದು ಬರುವ ಶಾಸಕರು ಮತ್ತು ಮುಖಂಡರನ್ನು ಸೇರಿಸಿಕೊಳ್ಳಲು ಸಭೆಯಲ್ಲೇ ಎಐಸಿಸಿ ಮುಖಂಡರು ಹಸಿರು ನಿಶಾನೆ ತೋರಿದ್ದಾರೆ.

ವರಿಷ್ಠರ ಅನುಮತಿ ದೊರೆಯುತ್ತಿದ್ದಂತೆ ಆಪರೇಷನ್ ಹಸ್ತಕ್ಕೆ ಅತ್ಯಂತ ಗೌಪ್ಯವಾಗಿ ಶಾಸಕರನ್ನು ಸೆಳೆಯುವ ಕಾರ್ಯ ಆರಂಭವಾಗಿದೆ.

ನಾಯಿ–ನರಿಗಳಂತೆ ಕಚ್ಚಾಡುತ್ತಿದ್ದಾರೆ...

ಕೇಂದ್ರದ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಕೇಂದ್ರ ಬರ ಪರಿಹಾರ ನಿಶ್ಚಿತವಾಗಿ ಕೊಡುತ್ತದೆ. ಆದರೆ ಇವರು ಕೇಂದ್ರದ ಪರಿಹಾರಕ್ಕೆ ಕಾಯುತ್ತಿದ್ದಾರೆ. ಸಂಪನ್ಮೂಲಗಳ ಕೊರತೆಯಿಂದ ಎಲ್ಲದಕ್ಕೂ ಕೇಂದ್ರದ ಕಡೆ ನೋಡುತ್ತಿದ್ದಾರೆ. ಸುರ್ಜೇವಾಲಾ, ವೇಣುಗೋಪಾಲ ಕಲೆಕ್ಷನ್ ಟಾರ್ಗೆಟ್ ಕೊಡಲು ಭೇಟಿ ಕೊಟ್ಟಿದ್ದಾರೆ. ಇದು ಎಐಸಿಸಿಗೆ ಎಟಿಎಂ ಸರ್ಕಾರ ಆಗಿದೆ. ಮೋದಿಯವರನ್ನು ನಿತ್ಯ ಟೀಕಿಸೋದು ಸಿದ್ದರಾಮಯ್ಯ ಚಾಳಿಯಾಗಿದೆ ಎಂದು ಟೀಕಿಸಿದರು. ಕಳೆದ ಒಂಬತ್ತು ವರ್ಷಗಳಲ್ಲಿ ಎನ್‌ಡಿಆರ್‌ಎಫ್‌ನಡಿ 12,407 ಕೋಟಿ, ಎಸ್‌ಡಿಆರ್‌ಎಫ್‌ನಡಿ 3,377 ಕೋಟಿ ರೂಪಾಯಿ ಹಣ ಕೇಂದ್ರ ಕೊಟ್ಟಿದೆ. ರಾಜ್ಯದಲ್ಲಿ 54 ಹೆದ್ದಾರಿ ಕಾಮಗಾರಿಗಳು ಚಾಲ್ತಿಯಲ್ಲಿವೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇ ಮುಂದಿನ ಮಾರ್ಚ್‌ಗೆ ಸಿದ್ಧವಾಗಲಿದೆ. ಹೀಗೆ ಹಲವು ಕಾಮಗಾರಿಗಳು ಕೇಂದ್ರದಿಂದ ರಾಜ್ಯದಲ್ಲಿ ನಡೆಯುತ್ತಿವೆ ಎಂದರು. ತಮ್ಮ ವೈಫಲ್ಯಗಳನ್ನು ಮುಚ್ಚಿಹಾಕಲು ಕಾಂಗ್ರೆಸ್ ಸರ್ಕಾರ ಕೇಂದ್ರದ ಮೇಲೆ ಗೂಬೆ ಕೂರಿಸುತ್ತಿದೆ ಎಂದರು.

ಝೀಕಾ ವೈರಸ್ ಹಾವಳಿ

ಕೈಗೊಂಡಿವೆ ಎಂದಿದ್ದಾರೆ. ಸೋಂಕಿತ ಸೊಳ್ಳೆಯು ಕಚ್ಚಿದ ಬಳಿಕ 2ರಿಂದ 14 ದಿನಗಳಲ್ಲಿ ರೋಗದ ಲಕ್ಷಣಗಳು ಕಾಣಿಸುತ್ತವೆ. ಈ ಲಕ್ಷಣಗಳು ಎರಡು ವಾರಗಳ ಕಾಲ ಹಾಗೆ ಇರುತ್ತವೆ. ಜ್ವರ, ದದ್ದು, ಸ್ನಾಯು ಹಾಗೂ ಗಂಟು ನೋವು, ಕಣ್ಣು ನೋವು ಅಥವಾ ಕಣ್ಣು ಕೆಂಪಾಗುವುದು, ತಲೆನೋವು, ಬಳಲಿಕೆ, ಹೊಟ್ಟೆ ನೋವು ಇತ್ಯಾದಿ ಕಂಡು ಬರುತ್ತದೆ. ವೈರಸ್ ಪೀಡಿತ ಸೊಳ್ಳೆ ಕಡಿತದಿಂದ ಸೋಂಕು ಹರಡುವುದರಿಂದ ವೈರಸ್ ಸೋಂಕು ಪ್ರದೇಶಕ್ಕೆ ಪ್ರಯಾಣ ಆದಷ್ಟು ತಡೆಗಟ್ಟುವುದು ಉತ್ತಮ. ಗರ್ಭಿಣಿಯರಲ್ಲಿ ಈ ವೈರಸ್ ಕಂಡುಬಂದರೆ ಭ್ರೂಣದಲ್ಲಿರುವ ಮಗುವಿನಲ್ಲಿ ಮೆದುಳಿನ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ತಜ್ಞರು ತಿಳಿಸಿದ್ದಾರೆ.

ಭಕ್ತರಿಗೆ ಇಂದಿನಿಂದ ದರುಶನಕ್ಕೆ ಅವಕಾಶ

ನಾಳೆಯಿಂದ 12 ದಿನ 24 ಗಂಟೆಯೂ ದರ್ಶನ: ದೇವಾಲಯದ ಪ್ರಧಾನ ಅರ್ಚಕ ನಾಗರಾಜ ಅವರ ನೇತೃತ್ವದಲ್ಲಿ ಆದಿಚುಂಚನಗಿರಿ ಮಠಾಧೀಶ ನಿರ್ಮಲಾನಂದ ಸ್ವಾಮಿಗಳ ಸಮ್ಮುಖದಲ್ಲಿ ಇಂದು ದೇವಸ್ಥಾನದ ಬಾಗಿಲನ್ನು ತೆರೆಯಲಾಗಿದೆ.

ವೈಮಾನಿಕ ವೀಕ್ಷಣೆ: ಈ ಸಲದ ಉತ್ಸವದ ಮತ್ತೊಂದು ವಿಶೇಷತೆ ಎಂದರೆ 'ಆಗಸದಿಂದ ಹಾಸನ' ವಿನೂತನ ವೈಮಾನಿಕ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದ್ದು, ನ.3ರಿಂದ 6ರವರೆಗೆ ಒಬ್ಬರು 4,300 ರೂ. ಪಾವತಿಸಿದರೆ 6–7 ನಿಮಿಷ ಆಗಸದಲ್ಲಿ ಹಾರಾಡಿ ಹಾಸನ ನಗರ, ಸೀಗೆಗುಡ್ಡ, ಮಳೆ ಮಲ್ಲೇಶ್ವರ ದೇವಾಲಯ, ಗೆಂಡೆಕಟ್ಟೆ ವನ್ಯಧಾಮವನ್ನು ಆಗಸದಿಂದ ಕಣ್ತುಂಬಿಕೊಳ್ಳಬಹುದಾಗಿದೆ. ಹೆಲಿಕಾಪ್ಟರ್ ಸರ್ಕಾರಿ ಕಾಲೇಜು ಆವರಣದಿಂದ ಹೊರಟು ಅಲ್ಲೇ ಬಂದು ಇಳಿಯಲಿದೆ. ಅಲ್ಲದೆ, ಇಡೀ ನಗರದ ತುಂಬೆಲ್ಲಾ ಖಾಸಗಿ ಕಟ್ಟಡ ಸೇರಿದಂತೆ ಸರ್ಕಾರಿ ಕಟ್ಟಡ, ಪ್ರಮುಖ ರಸ್ತೆ ಹಾಗೂ ಜಿಲ್ಲಾದ್ಯಂತ ಎ ಮತ್ತು ಬಿ ಗ್ರೇಡ್ ದೇವಾಲಯಗಳಲ್ಲಿ ಅಲಂಕಾರ ಜೊತೆಗೆ ನಿತ್ಯ ಪೂಜೆ ಮಾಡಲು ಸೂಚಿಸಲಾಗಿದೆ.

ಭೂ ಮಂಜೂರಾತಿ ಹಕ್ಕುಪತ್ರ ವಿತರಣೆ

ಅನೇಕ ಸಲವತ್ತುಗಳನ್ನು ಪಡೆದುಕೊಳ್ಳುವಂತೆ ಕಿವಿ ಮಾತು ಹೇಳಿದರು. ಮೈಸೂರು ನಗರದಿಂದ 10 ಕಿ.ಮೀಟರ್‌ಗಿಂತ ದೂರದಲ್ಲಿರುವ ರೈತರಿಗೆ ಸಾಗುವಳಿ ಭೂ ಮಂಜೂರಾತಿ ಹಕ್ಕುಪತ್ರ ನೀಡಲಾಗಿದೆ. ದೇವರಾಜ ಅರಸು ಅವರ ಕಾಲದಲ್ಲಿ ಉಳುವವನೇ ಭೂ ಒಡೆಯ ಯೋಜನೆ ಜಾರಿಗೆ ತರಲಾಗಿತ್ತು. ಆದ್ದರಿಂದ ಕಾಂಗ್ರೆಸ್ ಸರ್ಕಾರ ಉಳುವವನೇ ಭೂ ಒಡೆಯ ಯೋಜನೆಯ ವಾರಸುದಾರ ಎಂದರು.

ಅಧಿಕಾರಿಗಳ ಉತ್ತಮ ಕೆಲಸ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶಾಸಕನಾಗಿ 10 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ಇದುವರೆಗೆ ಸಾಧ್ಯವಾದಷ್ಟು ಜನರಿಗೆ ಸಾಗುವಳಿ ಭೂ ಮಂಜೂರಾತಿ ಪತ್ರ ನೀಡಲಾಗಿದೆ. ಕಳೆದ ಎರಡೂವರೆ ವರ್ಷದಿಂದ ಪ್ರಯತ್ನ ಪಟ್ಟಿದ್ದರ ಫಲ, ರೈತರ ಶ್ರಮ ಹಾಗೂ ಅಧಿಕಾರಿಗಳ ಕರ್ತವ್ಯ ನಿಷ್ಠೆಯಿಂದ ಕ್ಷೇತ್ರ ವ್ಯಾಪ್ತಿಯ 105 ಮಂದಿ ರೈತರಿಗೆ ಸಾಗುವಳಿ ಭೂ ಮಂಜೂರಾತಿ ಹಕ್ಕುಪತ್ರ ನೀಡಲು ಸಾಧ್ಯವಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟಕ್ಕೆ ಚಾಲನೆ

ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗಿ



ಮೈಸೂರು, ನ.2(ಎಂಟಿವೈ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಎರಡು ದಿನಗಳ 44ನೇ ರಾಜ್ಯ ಮಟ್ಟದ ಅಂತರ್ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಎರಡು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು, ಕ್ರೀಡಾಸ್ಫೂರ್ತಿ ಪ್ರದರ್ಶಿಸಿದರು.

ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿರುವ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ 97 ಪಾಲಿಟೆಕ್ನಿಕ್ ಕಾಲೇಜುಗಳ 2221 ವಿದ್ಯಾರ್ಥಿಗಳು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡು, ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಂಡಿದ್ದಾರೆ. ತಾಂತ್ರಿಕ ಶಿಕ್ಷಣ ಇಲಾಖೆ ವ್ಯಾಪ್ತಿಗೆ ಒಳಪಡುವ ವಿವಿಧ ಪಾಲಿಟೆಕ್ನಿಕ್ ಕಾಲೇಜುಗಳನ್ನು ಪ್ರತಿನಿಧಿಸಲು ಆಗಮಿಸಿರುವ ಕ್ರೀಡಾಪಟುಗಳಿಗೆ ಇಲಾಖೆ ವತಿಯಿಂದ ಊಟ, ವಸತಿ ಸೌಲಭ್ಯ ಕಲ್ಪಿಸಲಾಗಿದ್ದು, ಕ್ರೀಡೆ ನಡೆಯುವ ಸ್ಥಳಕ್ಕೆ ಕ್ರೀಡಾಪಟುಗಳನ್ನು ಕರೆದುಕೊಂಡು ಹೋಗಲು ಸಾರಿಗೆ ಸಂಸ್ಥೆಯ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ.

ಚಾಲನೆ: ಇಂದು ಬೆಳಗ್ಗೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಬಳಿಕ ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸಿದ್ದ ತಂಡದಿಂದ ಗೌರವ ವಂಧನೆ ಸ್ವೀಕರಿಸಿದರು. ಇದೇ ವೇಳೆ ಕ್ರೀಡಾಪಟುಗಳು ಆಕರ್ಷಕ ಪಥಸಂಚಲನ ನಡೆಸಿದರು.

ಗೌರವ ವಂದನೆ ಸ್ವೀಕರಿಸಿದ ಬಳಿಕ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿ, ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಇತ್ತೀಚೆಗಷ್ಟೇ ಮೈಸೂರಿನಲ್ಲಿ ದಸರಾ ಕ್ರೀಡಾಕೂಟ ಅದ್ಧೂರಿಯಾಗಿ ನೆರವೇರಿದೆ. ಇದೀಗ ಪಾಲಿಟೆಕ್ನಿಕ್ ಕಾಲೇಜುಗಳ ವಿದ್ಯಾರ್ಥಿಗಳ ರಾಜ್ಯ ಮಟ್ಟದ ಕ್ರೀಡಾಕೂಟ ನಡೆಯುತ್ತಿರುವುದು ಸಂತೋಷದ ವಿಚಾರ. ಕ್ರೀಡೆ ಎಂಬುದು ಮನುಷ್ಯನಿಗೆ ಅತ್ಯಂತ ಉತ್ಸಾಹದಾಯಕ ಕ್ಷೇತ್ರವಾಗಿದೆ. ಕ್ರೀಡೆಯಲ್ಲಿ ಭಾಗವಹಿಸುವವರು ಸದಾ ಮಾನವೀಯ ಮೌಲ್ಯ ಹಾಗೂ ಉತ್ತಮ ಸ್ನೇಹ ಸಂಬಂಧಗಳನ್ನು ಹೊಂದಿರುತ್ತಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಅಧ್ಯಯನದೊಂದಿಗೆ ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯದ ಸಮತೋಲನ ಕಾಪಾಡಿಕೊಳ್ಳಲು ಕ್ರೀಡಾಭ್ಯಾಸ ಮಾಡಬೇಕು. ಕ್ರೀಡಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ದಾಖಲೆ ಬರೆಯುವ ದೃಢಸಂಕಲ್ಪ ಮಾಡಬೇಕು. ಶಿಕ್ಷಣ ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿ ದೇಶದ ಅಖಂಡತೆ ಮತ್ತು ಸಾರ್ವಭೌಮತೆಯನ್ನು ಎತ್ತಿ ಹಿಡಿಯುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಎಲ್ಲಾ ಹಂತಗಳಲ್ಲೂ ಮೌಲ್ಯ ಕುಸಿಯುತ್ತಿರುವ ಸಂದರ್ಭದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಮಾತ್ರ ಗುರುವಿನ ಮೌಲ್ಯ ಉಳಿಸಿಕೊಂಡಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಎಷ್ಟು ಮುಖ್ಯವೋ, ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಕ್ರೀಡೆ ಬಹುಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕ ಕೆ.ಎಂ.ಸುರೇಶ್ ಕುಮಾರ್, ಜಂಟಿ ನಿರ್ದೇಶಕ ಜಿ.ಶ್ರೀಕಾಂತ್, ಉಪ ನಿರ್ದೇಶಕಿ ಎಸ್.ಮಂಜುಳಾ, ಸಹಾಯಕ ನಿರ್ದೇಶಕ ದೊಡ್ಡಮನಿ, ಅಭಿವೃದ್ಧಿ ಅಧಿಕಾರಿ ಡಾ.ಮಾರುತಿ, ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ಎಂ.ಪ್ರಕಾಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕ್ರೀಡೆ ಅವಿಭಾಜ್ಯ ಅಂಗವಾಗಲಿ

ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅಗತ್ಯವಿದೆ. ಇದರಿಂದ ಕ್ರೀಡೆ ಅವಿಭಾಜ್ಯ ಅಂಗವಾಗಬೇಕು. ವಿಶ್ವಮಾನವ ಸಂದೇಶ ಸಾರುವ ಕ್ರೀಡೆಗೆ ಯಾವುದೇ ಸೀಮಾರೇಖೆಗಳಿರುವುದಿಲ್ಲ. ಎಲ್ಲವನ್ನು ಮೀರಿ ಕ್ರೀಡೆಯನ್ನೇ ಒಂದು ಮನೋಧರ್ಮವಾಗಿ ಬೆಳಸಿಕೊಳ್ಳಲು ಸಹಕಾರಿಯಾಗಲಿದೆ.

–ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ದಿ ಗ್ರ್ಯಾಜ್ಯುಯೇಟ್ಸ್ ಕೋ– ಅಪರೇಟಿವ್ ಬ್ಯಾಂಕ್ ವಿರುದ್ಧ ಅಪಪ್ರಚಾರ

ಬ್ಯಾಂಕ್ ಅಧ್ಯಕ್ಷ ಶ್ರೀನಿವಾಸ್ ಆರೋಪ



ಮೈಸೂರು, ನ.2(ಜಿಎ)–ಮೈಸೂರು ದಿ ಗ್ರ್ಯಾಜ್ಯುಯೇಟ್ಸ್ ಕೋ– ಅಪರೇಟಿವ್ ಬ್ಯಾಂಕ್ ಶತಮಾನದ ಇತಿಹಾಸವನ್ನು ಹೊಂದಿದ್ದು ಇಂತಹ ಬ್ಯಾಂಕ್ ಕುರಿತು ಖಾಸಗಿ ಮಾಧ್ಯಮ, ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಬ್ಯಾಂಕ್ ಅಧ್ಯಕ್ಷ ಎನ್.ಶ್ರೀನಿವಾಸ್ ಕಳವಳ ವ್ಯಕ್ತಪಡಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ದಿನಗಳಿಂದ ಖಾಸಗಿ ಚಾನಲ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಅನಾವಶ್ಯಕವಾಗಿ ದಿ ಗ್ರ್ಯಾಜ್ಯುಯೇಟ್ಸ್ ಕೋ– ಅಪರೇಟಿವ್ ಬ್ಯಾಂಕಿನ ಆರ್ಥಿಕ ನಿರ್ವಹಣೆ ಹಾಗೂ ಬ್ಯಾಂಕಿನ ಠೇವಣಿ, ಗ್ರಾಹಕರ ಕುರಿತು ಅಪಪ್ರಚಾರ ಮಾಡಲಾಗಿದೆ. ಆದರೆ, ಬ್ಯಾಂಕ್ ಆರ್ಥಿಕವಾಗಿ ಸದೃಢವಾಗಿದೆ ಎಂದು ಸ್ಪಷ್ಟಪಡಿಸಿದರು.

ಸುಂದರೇಶ್ ಗೌಡ ಅವರಿಗೆ 2021ರ ಮಾ.2 ರಂದು 50 ಲಕ್ಷ ಸಾಲ ಮಂಜೂರು ಮಾಡಲಾಗಿದೆ. 49,07742 ಅಸಲು ಜತೆಗೆ ಬಡ್ಡಿ ಬಾಬ್ತು 12,13,084 ರೂ ಬಾಕಿ ಬರಬೇಕಿದೆ. ಬ್ಯಾಂಕಿನ ಗಮನಕ್ಕೆ ತಾರದೇ ಬೇರೆ ಬ್ಯಾಂಕಿನಲ್ಲೂ ಸಾಲ ಪಡೆದಿದ್ದರಿಂದ ಇವರ ವಿರುದ್ಧ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ. ಈ ವಿಷಯವನ್ನು ಈ ಸಾಲಿನ ವಾರ್ಷಿಕ ಸಭೆಯಲ್ಲಿ ದಾಖಲೆ ಸಮೇತ ನೀಡಲಾಗಿದೆ. ಹೀಗಾಗಿ ಬ್ಯಾಂಕ್ ಆರ್ಥಿಕವಾಗಿ ಸದೃಢವಾಗಿದ್ದು, ಠೇವಣಿದಾರರು ಹಾಗೂ ಸದಸ್ಯರು ಯಾವುದೇ ಆತಂಕಕ್ಕೆ ಒಳಗಾಗಬಾರದು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾನೂನು ಸಲಹೆಗಾರ ಜಯಂತ್ ಕುಮಾರ್, ನಿರ್ದೇಶಕ ಕೆ.ಜಿ.ಸತೀಶ್, ವ್ಯವಸ್ಥಾಪಕ ಮಹೇಶ್, ಉಪಾಧ್ಯಕ್ಷ ಅನಂತರಾಮು, ಟಿ.ಎಸ್. ರವಿಶಂಕರ್ ಉಪಸ್ಥಿತರಿದ್ದರು.

ಇಂದು 'ಇದು ನಾಟಕವಲ್ಲ: ಬದುಕು' ನಾಟಕ ಪ್ರದರ್ಶನ



ಮೈಸೂರು, ನ2(ಜಿಎ)–ಸ್ವಯಂ ಉದ್ಯೋಗದ ಹಾದಿಯಲ್ಲಿ ಜೀವನ ರೂಪಿಸಿಕೊಂಡವರ ಜೀವನಾಧಾರಿತ 'ಇದು ನಾಟಕವಲ್ಲ :ಬದುಕು' ನಾಟಕ ಪ್ರದರ್ಶನವನ್ನು ನ.3ರಂದು ಸಂಜೆ 6.30ಕ್ಕೆ ನಗರದ ಕಲಾಮಂದಿರ ಆವರಣದಲ್ಲಿರುವ ಕಿರುರಂಗಮಂದಿರಲ್ಲಿ ಏರ್ಪಡಿಸಲಾಗಿದೆ ಎಂದು ಲೀಡ್ ಟ್ರೈನಿಂಗ್ ಅಂಡ್ ಕಾರ್ಪೊರೇಟ್ ಸಲ್ಯೂಷನ್ ಸಂಸ್ಥಾಪಕಿ ಶ್ರೀವಿದ್ಯಾ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸ್ಥೆ ವತಿಯಿಂದ ಏಪ್ರಿಲ್ ತಿಂಗಳಿನಲ್ಲಿ ನಡೆದ ಕಾರ್ಯಾಗಾರದಲ್ಲಿ 57 ಮಂದಿ ಪಾಲ್ಗೊಂಡು ಸ್ವಯಂ ಉದ್ಯೋಗದ ತರಬೇತಿ ಪಡೆದುಕೊಂಡರು. ಅದರಲ್ಲಿ 16 ಮಂದಿ ಸಣ್ಣ ಬಂಡವಾಳದಿಂದ ಮೇಣದ ಬತ್ತಿ ಉತ್ಪಾದನೆ, ಕರಕುಶಲ ವಸ್ತುಗಳ ತಯಾರಿಕೆ ಸೇರಿದಂತೆ 16ಕ್ಕೂ ಅಧಿಕ ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಇಂತಹವರಿಗೆ ಅಂದು ಸಂಜೆ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದರು. ಈ ಕಾರ್ಯಕ್ರಮದಲ್ಲಿ ಸ್ವಯಂ ಉದ್ಯೋಗದ ತರಬೇತಿ ಪಡೆದುಕೊಂಡು ಉದ್ಯೋಗ ಆರಂಭಿಸಿರುವ 16 ಮಂದಿಯೂ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಿಆರ್‌ಸಿ ಸಿನಿಮಾಸ್‌ನ ವೈಶಾಲಿ ಹನುಮಂತ್ ಮತ್ತು ಫ್ಯಾಷನ್ ವಿನ್ಯಾಸಕಿ ಜಯಂತಿ ಬಲ್ಲಾಳ್ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಹಳೆ ಪಿಂಚಣಿ ಪದ್ಧತಿ ಜಾರಿಗೆ ಆಗ್ರಹಿಸಿ ನ.5ರಂದು ಸಮಾವೇಶ



ಮೈಸೂರು, ನ.2(ಜಿಎ)–ಅನುದಾನಿತ ನೌಕರರಿಗೆ ಮಾರಕವಾಗಿರುವ ಪಿಂಚಣಿ ನಿಯಂತ್ರಣ ಕಾಯ್ದೆಯನ್ನು ರದ್ದುಗೊಳಿಸಿ, ಹಳೆಯ ಪಿಂಚಣಿ ಪದ್ಧತಿ ಜಾರಿಗೊಳಿಸುವಂತೆ ಆಗ್ರಹಿಸಿ ನ.5 ರಂದು ಶಿವಮೊಗ್ಗದಲ್ಲಿ ರಾಜ್ಯಮಟ್ಟದ ಸಮಾವೇಶ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಅನುದಾನಿತ ಶಾಲಾ–ಕಾಲೇಜಿಗಳ ಪಿಂಚಣಿ ವಂಚಿತ ನೌಕರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಶಿಂಡೇನಹಳ್ಳಿ ಡಾ.ಶರತ್ ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಸರ್ಕಾರಿ ಮತ್ತು ಅನುದಾನಿತ ನೌಕರರಿಗೆ 2006ರ ಮಾ.31 ರವರೆಗೂ ನಿವೃತ್ತಿ ಭತ್ಯೆ ಇತ್ಯಾದಿ ಸೌಲಭ್ಯಗಳನ್ನು ಸಮಾನವಾಗಿ ನೀಡಲಾಗುತ್ತಿತ್ತು. ಆದರೆ, 2006ರ ಏಪ್ರಿಲ್‌ನಿಂದ ಅಂದಿನ ಸರ್ಕಾರ ಸರ್ಕಾರಿ ನೌಕರರಿಗೆ ಮಾತ್ರ ರಾಷ್ಟ್ರೀಯ ಪಿಂಚಣಿ(ಎನ್‌ಪಿಎಸ್) ಯೋಜನೆ ಜಾರಿಗೆ ತಂದು ಅನುದಾನಿತ ನೌಕರರನ್ನು ಈ ಪಿಂಚಣಿ ಸೌಲಭ್ಯದಿಂದ ಕೈಬಿಟ್ಟಿತ್ತು. ಇದರಿಂದ ನೊಂದ ನೌಕರರು ಇದನ್ನು ಪ್ರಶ್ನಿಸಿ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದರು.

ರಿಟ್ ಅರ್ಜಿ ಪರಿಶೀಲಿಸಿದ ನ್ಯಾಯಾಲಯ ರಾಷ್ಟ್ರೀಯ ಪಿಂಚಣಿ(ಎನ್‌ಪಿಎಸ್) ಯೋಜನೆಯ ವಿರುದ್ಧ ತೀರ್ಪು ನೀಡಿತ್ತು. ಆದರೆ, ರಾಜ್ಯ ಸರ್ಕಾರ ತೀರ್ಪಿನ ವಿರುದ್ಧ ರಿಟ್ ಅರ್ಜಿ ದಾಖಲಿಸಿದ್ದು, ಪ್ರಕರಣ ನ್ಯಾಯಾಲಯದಲ್ಲಿದೆ. ಆದ್ದರಿಂದ ರಾಜ್ಯ ಸರ್ಕಾರ ಇದನ್ನು ವಾಪಾಸ್ ಪಡೆದು 2014ರ ಕಾಯ್ದೆ ರದ್ದುಗೊಳಿಸಿ, ಹಿಂದಿನ ಪಿಂಚಣಿ ಪದ್ಧತಿ ಮತ್ತು ಸರ್ಕಾರಿ ನೌಕರರಿಗೆ ಇರುವಂತೆ ಅನುದಾನಿತ ನೌಕರರಿಗೂ ಜ್ಯೋತಿ, ಆರೋಗ್ಯ ಸಂಜೀವಿನಿಯನ್ನು ಜಾರಿಗೊಳಿಸಬೇಕೆಂದು ಸಮಾವೇಶದಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇವೆಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿ.ಆರ್. ಶಿವಕುಮಾರ್, ಸಿದ್ದರಾಮು, ಶಶಿ, ಸೈಯದ್ ಅಮೀನ್ ಉಪಸ್ಥಿತರಿದ್ದರು.

ಮನೆಗೆ ನುಗ್ಗಿ ಹಲ್ಲೆ ಮಾಡಿದವರ ವಿರುದ್ಧ ಕ್ರಮಕ್ಕೆ ಒತ್ತಾಯ



ಮೈಸೂರು, ನ.2(ಜಿಎ)–ಪಿರಿಯಾಪಟ್ಟಣದಲ್ಲಿ ಕ್ಷುಲ್ಲಕ ಕಾರಣಕ್ಕೆ ಅಲೆಮಾರಿ ಕೊರಮ(ಕುಳುವ)ಜನಾಂಗದ ಕುಟುಂಬದವರ ಮನೆಗೆ ನುಗ್ಗಿ ಹಲ್ಲೆ ಮಾಡಿರುವವರ ವಿರುದ್ಧ ಪೊಲೀಸರು ಸೂಕ್ತ ಕ್ರಮ ಕೈಗೊಳ್ಳುವಂತೆ ಅಖಿಲ ಕರ್ನಾಟಕ ಕುಳುವ ಮಹಾ ಸಂಘವು ಒತ್ತಾಯಿಸಿದೆ.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನ ನೀಲಂಗಾಲ ಗ್ರಾಮದ ಅಲೆಮಾರಿ ಕೊರಮ (ಕುಳುವ) ಜನಾಂಗದ ಪಾರ್ವತಮ್ಮ ಎಂಬುವರ ಕುಟುಂಬಸ್ಥರ ಮೇಲೆ ಕ್ಷುಲ್ಲಕ ಕಾರಣಕ್ಕೆ ಕೆಲವರ ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿ ಅವಾಚ್ಯ ಶಬ್ಧಗಳಿಂದ ನಿಂದಿಸಿರುವುದು ಖಂಡನೀಯ. ಹಲ್ಲೆ ಮಾಡಿರುವವರ ವಿರುದ್ಧ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಪಾರ್ವತಮ್ಮ ಹಾಗೂ ಕುಟುಂಬಸ್ಥರು ತೆರಳಿದಾಗ ಅವರ ದೂರನ್ನು ದಾಖಲಿಸಿಕೊಳ್ಳದೆ ಉದಾಸೀನ ತೋರಿದ್ದಾರೆ. ಅಲ್ಲದೆ, ಇದನ್ನು ಪ್ರಶ್ನಿಸಲು ತೆರಳಿದ ಸಮುದಾಯದ ಮುಖಂಡರ ವಿರುದ್ಧವೇ ದೂರು ದಾಖಲಿಸಿದ್ದಾರೆ ಎಂದು ಆರೋಪಿಸಿದರು.

ಈ ಸಂಬಂಧ ಡಿವೈಎಸ್‌ಪಿ ಮತ್ತು ಎಸ್‌ಪಿ ಅವರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಪೊಲೀಸರು ಸೂಕ್ತ ಕ್ರಮ ವಹಿಸದಿದ್ದರೆ, ನ್ಯಾಯಾಲಯದ ಮೊರೆ ಹೋಗುತ್ತೇವೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮುತ್ತುರಾಜ್ ದೊಡ್ಡಹರವೆ, ನಾಗರಾಜ್, ಮಹದೇವ್, ಜ್ಞಾನನಂದ, ರವಿಕುಮಾರ್ ಉಪಸ್ಥಿತರಿದ್ದರು.

ನಾಳೆ ಕನ್ನಡ ಚಲನಚಿತ್ರ ಗೀತೆ ಕಾರ್ಯಕ್ರಮ



ಮೈಸೂರು, ನ.2(ಜಿಎ)–ಮೈಸೂರಿನ ಹೊಸಬೆಳಕು ಗಾನಬಳಗ ತಂಡದ ಬೆಳ್ಳಿಹಬ್ಬ, ಕನ್ನಡ ರಾಜ್ಯೋತ್ಸವ ಹಾಗೂ ಪುನೀತ್ ರಾಜ್‌ಕುಮಾರ್ 2ನೇ ವರ್ಷದ ಪುಣ್ಯ ಸ್ಮರಣೆಯ ಅಂಗವಾಗಿ ಕನ್ನಡ ಚಲನಚಿತ್ರ ಗೀತೆಗಳ ಕಾರ್ಯಕ್ರಮವನ್ನು ನ.4ರಂದು ಏರ್ಪಡಿಸಲಾಗಿದೆ ಎಂದು ಆಯೋಜಕಿ ಉಷಾ ಸುಧಾಕರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4 ಗಂಟೆಗೆ ನಗರದ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿದ್ದು, ನಿವೃತ್ತ ಐಎಎಸ್ ಅಧಿಕಾರಿ ನಟರಾದ ಕೆ.ಶಿವರಾಮು, ನಟ ಆನಂದ್ ಆರ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆನಂದ್ ಶೆಟ್ಟಿ, ಮೇಘಶ್ರೀ ಸುರೇಶ್, ಸೌಭಾಗ್ಯ, ಶಿವು ಮತ್ತು ರಾಧಿಕ ಉಪಸ್ಥಿತರಿದ್ದರು.

ಮನೆಗಳಲ್ಲಿರುವ ವನ್ಯಜೀವಿಗಳ ಉತ್ಪನ್ನ ಹಿಂದಿರುಗಿಸಲು ಸಚಿವರು ಎರಡು ತಿಂಗಳು ಗಡುವು ನೀಡಿದ ಹಿನ್ನೆಲೆ

ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿದ ಬಳಿಕ ವನ್ಯಜೀವಿ ಉತ್ಪನ್ನ ಸ್ವೀಕರಿಸಲು ಅರಣ್ಯ ಇಲಾಖೆ ಕ್ರಮ

ಯಾವ ಯಾವ ವಸ್ತುಗಳು ನಿಯಮ ವ್ಯಾಪ್ತಿಗೆ ಬರಲಿವೆ ಎನ್ನುವ ಪಟ್ಟಿ ಸಿದ್ಧಪಡಿಸಲು ಮುಂದಾದ ಅಧಿಕಾರಿಗಳು



ಮೈಸೂರು,ನ.2(ಎಂಟಿವೈ)– ರಾಜ್ಯದಾದ್ಯಂತ ಸದ್ದು ಮಾಡುತ್ತಿರುವ ಹುಲಿ ಉಗುರಿನ ಪೆಂಡೆಂಟ್ ವಿವಾದದ ಹಿನ್ನೆಲೆಯಲ್ಲಿ ಹಲವರ ಮನೆಗಳಲ್ಲಿರುವ ವನ್ಯಜೀವಿ ಉತ್ಪನ್ನಗಳ ಹಿಂದಿರುಗಿಸಲು ಎರಡು ತಿಂಗಳ ಗಡುವು ನೀಡಿರುವ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ನಿಯಮ ವ್ಯಾಪ್ತಿಗೆ ಬರುವ ಯಾವ ಯಾವ ವಸ್ತುಗಳನ್ನು ಸ್ವೀಕರಿಸಬಹುದೆಂಬ ಪಟ್ಟಿ ಸಿದ್ಧಪಡಿಸಲು ಮುಂದಾಗಿದ್ದಾರೆ.

ರಾಜ್ಯದ ಹಲವೆಡೆ ಹುಲಿ ಉಗುರಿನ ಪೆಂಡೆಂಟ್ ಧರಿಸಿದ್ದವರ ವಿರುದ್ಧ ಕ್ರಮ ಕೈಗೊಂಡಿರುವ ಅರಣ್ಯ ಇಲಾಖೆ, ಕೆಲವರ ಮನೆ ಮೇಲೆ ದಾಳಿ ನಡೆಸಿ ಜಿಂಕೆ, ಕಡವೆ ಕೊಂಬು, ಜಿರತೆ ಚರ್ಮ ಸೇರಿದಂತೆ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದರು. ಈ ನಡುವೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಬೆಂಗಳೂರಲ್ಲಿ ಸುದ್ದಿಗೋಷ್ಠಿಯಲ್ಲಿ ವನ್ಯಜೀವಿಗಳ ಉತ್ಪನ್ನ ಹಿಂದಿರುಗಿಸಲು ಎರಡು ತಿಂಗಳು ಗಡುವು ನೀಡಿರುವುದಾಗಿ ತಿಳಿಸಿದ್ದರು. ಎರಡು ದಿನದ ಹಿಂದಷ್ಟೇ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್. ಪೊನ್ನಣ್ಣ ಮಡಿಕೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಪಾರಂಪರಿಕವಾಗಿ ಕುಟುಂಬಗಳಲ್ಲಿರುವ ವನ್ಯಜೀವಿ ಉತ್ಪನ್ನಗಳನ್ನು ಹೊಂದಿರುವವರು ಆತಂಕ ಪಡುವ ಅಗತ್ಯವಿಲ್ಲ ಎಂದಿದ್ದರು. ಇದರಿಂದ ಜನರಲ್ಲಿ ಉಂಟಾದ ಗೊಂದಲ ನಿವಾರಣೆಗೆ ಅರಣ್ಯ ಇಲಾಖೆ ಮುಂದಾಗಿದ್ದು, ಹಿರಿಯ ಅಧಿಕಾರಿಗಳ ಸಮಾಲೋಚನೆ ಬಳಿಕ ಸ್ಪಷ್ಟ ನಿಲುವು ತಾಳಲಿದೆ.

ಕೊಡಗು, ಚಿಕ್ಕಮಂಗಳೂರು, ಮಂಗಳೂರು ಸೇರಿದಂತೆ ವಿವಿಧೆಡೆ ಕೆಲ ಮನೆಗಳಲ್ಲಿ ಕೆಲ ವನ್ಯಜೀವಿಗಳ ಉತ್ಪನ್ನಗಳು ಪಾರಂಪರಿಕವಾಗಿ ಲಭ್ಯವಿದ್ದು, ಅದರ ಬಗ್ಗೆ ಕೆಲವರಲ್ಲಿ ಆತಂಕ ಮನೆ ಮಾಡಿದೆ. ಅಲ್ಲದೆ, ಅರಮನೆ, ವ್ಯಾನಿಗಂನ್ ಬಂಗಲೆ ಹಾಗೂ ಕೆಲವು ವಸ್ತುಸಂಗ್ರಹಾಲಯಗಳಲ್ಲಿ ಪ್ರದರ್ಶನಕ್ಕಿಟ್ಟಿರುವ ಟ್ರೋಫಿ (ಪ್ರಾಣಿ ಪ್ರಸಾದನ)ಗಳು ಹಿಂದಿರುಗಿಸುವ ವಸ್ತುಗಳ ಪಟ್ಟಿಯಲ್ಲಿ ಸೇರಲಿವೆಯೇ ಎಂಬ ಪ್ರಶ್ನೆ ಮೂಡಿದೆ. ಈ ಹಿನ್ನೆಲೆಯಲ್ಲಿ ಈ ವಾರ ಬೆಂಗಳೂರಲ್ಲಿ ನಡೆಯಲಿರುವ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಮಾತನಾಡಿ, ವನ್ಯಜೀವಿ ಉತ್ಪನ್ನಗಳನ್ನು ಹಿಂದಿರುಗಿಸುವ ಸಂಬಂಧ ಅರಣ್ಯ ಸಚಿವರು ನೀಡಿರುವ ಹೇಳಿಕೆ ಸಂಬಂಧಿಸಿದಂತೆ ನಮಗೆ ಇನ್ನೂ ಆದೇಶ ಬಂದಿಲ್ಲ. ಅಲ್ಲದೆ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಅವರು ಪಾರಂಪರಿಕವಾಗಿ ಮನೆಗಳಲ್ಲಿರುವ ವಸ್ತುಗಳು ಇದರ ವ್ಯಾಪ್ತಿಗೆ ಬರುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಈ ಸಂಬಂಧ ಬೆಂಗಳೂರಲ್ಲಿ ನಡೆಯುವ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಯಾವೆಲ್ಲಾ ವಸ್ತುಗಳನ್ನು ಹಿಂದಿರುಗಿಸಬಹುದು, ಅವುಗಳನ್ನು ಸ್ವೀಕಾರ ಮಾಡುವ ವಿಧಾನ, ಅನುಸರಿಸಬೇಕಾದ ಕ್ರಮ ಸೇರಿದಂತೆ ಇನ್ನಿತರ ಸ್ಪಷ್ಟ ಚಿತ್ರಣ ದೊರೆಯಲಿದೆ. ಆ ನಂತರವಷ್ಟೇ ಮೈಸೂರು ವ್ಯಾಪ್ತಿಯಲ್ಲಿ ವನ್ಯಜೀವಿ ಉತ್ಪನ್ನ ಸ್ವೀಕಾರ ಅಭಿಯಾನ ನಡೆಸಲಾಗುವುದು ಎಂದರು.



ಉಸಿರೇ ಉಸಿರೇ

ಟ್ರೈಲರ್ ಬಿಡುಗಡೆ

ಬಿಗ್‌ಬಾಸ್ ಖ್ಯಾತಿಯ ನಟ ರಾಜೀವ್ ನಾಯಕನಾಗಿ ನಟಿಸಿರುವ ಉಸಿರೇ ಉಸಿರೇ ಚಿತ್ರದ ಟ್ರೈಲರ್ ಇತ್ತೀಚೆಗಷ್ಟೇ ಬಿಡುಗಡೆಯಾಯಿತು. ಕಿಚ್ಚ ಸುದೀಪ್ ಟ್ರೈಲರ್ ಬಿಡುಗಡೆಗೊಳಿಸಿ ಶುಭ ಹಾರೈಸಿದರು, ಸಿ.ಎಂ.ವಿಜಯ್ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿರುವ ಈ ಚಿತ್ರವನ್ನು ಪ್ರದೀಪ್‌ಯಾದವ್ ನಿರ್ಮಾಣ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸುದೀಪ್, ಈ ಚಿತ್ರದಲ್ಲಿ ನನ್ನ ಗೆಳೆಯ ರಾಜೀವ್ ನಟಿಸಿದ್ದಾನೆ. ಚಿತ್ರದ ಕಥೆ ತುಂಬಾ ಚೆನ್ನಾಗಿದೆ. ಅಲ್ಲದೆ ಟ್ರೈಲರ್ ಕೂಡ ಸೊಗಸಾಗಿ ಬಂದಿದೆ. ತೆಲುಗು ಚಿತ್ರರಂಗದ ಹಿರಿಯರಾದ ಬ್ರಹ್ಮಾನಂದಂ, ಅಲಿಯಂಥ ಕಲಾವಿದರ ಜೊತೆಗೆ ನಾನು ಕೂಡ ಒಂದು ಪಾತ್ರ ಮಾಡಿದ್ದೇನೆ. ನಿರ್ಮಾಪಕರು, ನಿರ್ದೇಶಕ ವಿಜಯ್ ಹಾಗೂ ನಾಯಕ ರಾಜೀವ್ ಸಾಕಷ್ಟು ಶ್ರಮಪಟ್ಟು ಚಿತ್ರವನ್ನು ನಿರ್ಮಿಸಿದ್ದಾರೆ ಎಂದು ಹೇಳಿದರು.

ಚಿತ್ರದ ಹೆಸರು ಉಸಿರೇ ಉಸಿರೇ. ನನ್ನ ಉಸಿರೇ ಸುದೀಪ್ ಅವರು. ಅವರನ್ನು ಕಂಡರೆ ನನಗೆ ಅಷ್ಟೊಂದು ಪ್ರೀತಿ. ಚಿತ್ರತಂಡದ ಶ್ರಮದಿಂದ ಒಂದೊಳ್ಳೆ ಚಿತ್ರ ನಿರ್ಮಾಣವಾಗಿದೆ. ಸದ್ಯದಲ್ಲೇ ತೆರೆಗೆ ಬರಲಿದೆ ಎಂದು ನಾಯಕ ರಾಜೀವ್ ಹೇಳಿದರು. ಹಿರಿಯನಟ ಅಲಿ ಮಾತನಾಡಿ ಚಿತ್ರದಲ್ಲಿ ನನ್ನ, ಬ್ರಹ್ಮಾನಂದಂ, ಸಾಧುಕೋಕಿಲ ಹಾಗೂ ಮಂಜು ಪಾವಗಡ ಅವರ ಕಾಂಬಿನೇಶನ್‌ನಲ್ಲಿ ಹಾಸ್ಯ ಸನಿವೇಶಗಳು ತುಂಬಾ ಸೊಗಸಾಗಿ ಮೂಡಿಬಂದಿದೆ ಎಂದರು.

ನಿರ್ಮಾಪಕ ಪ್ರದೀಪ್‌ಯಾದವ್ ಮಾತನಾಡುತ್ತ ಚಿತ್ರ ಆರಂಭಿಸಿದಾಗಿನಿಂದಲೂ ಸುದೀಪ್ ಅವರು ನಮಗೆ ಪ್ರೋತ್ಸಾಹ ನೀಡುತ್ತಲೇ ಬಂದಿದ್ದಾರೆ. ಮೊದಲಬಾರಿಗೆ ಕನ್ನಡದಲ್ಲಿ ತೆಲುಗು ನಟರಾದ ಬ್ರಹ್ಮಾನಂದಂ ಹಾಗೂ ಅಲಿ ಒಟ್ಟಾಗಿ ಕಾಣಿಸಿಕೊಂಡಿದ್ದಾರೆ. ರಾಜೀವ್, ಶ್ರೀಜಿತ ಘೋಶ್ ಜೊತೆ ದೇವರಾಜ್, ತಾರಾ, ಸುಚೇಂದ್ರಪ್ರಸಾದ್ ಕೂಡ ಅಭಿನಯಿಸಿದ್ದಾರೆ. ಸದ್ಯದಲ್ಲೇ ಚಿತ್ರದ ಬಿಡುಗಡೆಯ ದಿನಾಂಕವನ್ನು ತಿಳಿಸುವುದಾಗಿ ಹೇಳಿದರು.

ನಿರ್ದೇಶಕ ಸಿ.ಎಂ.ವಿಜಯ್ ಮಾತನಾಡುತ್ತಾ, ತಂಡದ ಸಹಕಾರದಿಂದ ಉಸಿರೇ ಉಸಿರೇ ಚಿತ್ರ ಉತ್ತಮವಾಗಿ ಮೂಡಿಬಂದಿದೆ ಎಂದರು, ಇನ್ನು ಈ ಚಿತ್ರಕ್ಕೆ ಮನು ಬಿ.ಕೆ. ಅವರ ಛಾಯಾಗ್ರಹಣ, ವಿವೇಕ್ ಚಕ್ರವರ್ತಿ ಅವರ ಸಂಗೀತ ಸಂಯೋಜನೆ, ಕೆ.ಎಂ.ಪ್ರಕಾಶ್ ಅವರ ಸಂಕಲನ, ಟೈಗರ್‌ಶಿವು ಅವರ ಸಾಹಸ ಹಾಗೂ ಮೋಹನ್ ಮತ್ತು ಹೈಟ್ ಮಂಜು ಅವರ ನೃತ್ಯ ನಿರ್ದೇಶನವಿದೆ.

ಸದ್ಯದಲ್ಲೇ 'ಮಾಯಾನಗರಿ' ಟೀಸರ್



ಚಲನಚಿತ್ರ ನಿರ್ದೇಶಕನಾಗಬೇಕೆಂಬ ಕನಸುಹೊತ್ತು ಬರುವ ಯುವಕನಾಗಿ ಅನೀಶ್ ತೇಜೇಶ್ವರ್ ನಟಿಸಿರುವ ಮಾಯಾನಗರಿ ಚಿತ್ರವೀಗ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನೆಲ್ಲ ಮುಗಿಸಿಕೊಂಡು ಬಿಡುಗಡೆಗೆ ಸಿದ್ದವಾಗಿದೆ, ಶಂಕರ್ ಆರಾಧ್ಯ ಅವರು ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಸದ್ಯದಲ್ಲೇ 'ಮಾಯಾನಗರಿ' ಚಿತ್ರದ ಟೀಸರ್ ಬಿಡುಗಡೆ ಮಾಡಲು ಚಿತ್ರತಂಡ ಸಜ್ಜಾಗಿದೆ. ಈಗಾಗಲೇ ಚಿತ್ರದ ಸೆನ್ಸಾರ್ ಪ್ರಕ್ರಿಯೆಯೂ ಮುಗಿದಿದ್ದು, ಯು/ಎ ಅರ್ಹತಾ ಪತ್ರ ಪಡೆದುಕೊಂಡಿದೆ.

ಕಾಮಿಡಿ, ಲವ್, ಆಕ್ಷನ್, ಸೆಂಟಿಮೆಂಟ್‌ನಂಥ ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಮತ್ತೊಂದು ವಿಶೇಷತೆಯೂ ಇದೆ. ಅದನ್ನು ಟ್ರೈಲರ್ ಬಿಡುಗಡೆ ಮಾಡುವ ಸಂದರ್ಭದಲ್ಲಿ ಹೇಳುವುದಾಗಿ ನಿರ್ದೇಶಕ ಶಂಕರ್ ಆರಾಧ್ಯ ಹೇಳಿದ್ದಾರೆ, ಈ ಚಿತ್ರದಲ್ಲಿ ಸಾಕಷ್ಟು ವಿಶೇಷತೆಗಳಿದ್ದು, ಅದನ್ನು ಹಂತ ಹಂತವಾಗಿ ಪರಿಚಯಿಸುವ ಯೋಜನೆ ನಿರ್ದೇಶಕ ಶಂಕರ್ ಆರಾಧ್ಯ ಅವರದ್ದು. ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಶಂಕರ್‌ಆರಾಧ್ಯ ಜೊತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಮಹಿಸಿಕೊಂಡಿದ್ದಾರೆ. ಶ್ವೇತಾ ಶಂಕರ್ ಚಿತ್ರದ ಸಹ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ.

ಇನ್ನು ತಾಂತ್ರಿಕವಾಗಿಯೂ ಅದ್ದೂರಿಯಾಗಿ ಮೂಡಿಬಂದಿರುವ ಈ ಚಿತ್ರದ ಹಾಡುಗಳಿಗೆ ಅರ್ಜುನ್ ಜನ್ಯ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ರಾಷ್ಟ್ರಪ್ರಶಸ್ತಿ ಪುರಸ್ಕೃತ ವಿಕ್ರಮ್ ಮೋರ್ ಅವರು ಈ ಚಿತ್ರದಲ್ಲಿ ವಿಭಿನ್ನವಾಗಿ ಸಾಹಸದೃಶ್ಯಗಳನ್ನು ಕಂಪೋಸ್ ಮಾಡಿದ್ದಾರೆ. ವಿಜಯ್ ಎಂ.ಕುಮಾರ್ ಅವರ ಸಂಕಲನ, ಶ್ರೀನಿವಾಸ್ ಅವರ ಕ್ಯಾಮೆರಾ ಕೈಚಳಕ ಈ ಚಿತ್ರಕ್ಕಿದೆ. ಚಿತ್ರದಲ್ಲಿ ಅನೀಶ್ ತೇಜೇಶ್ವರ್ ಜೋಡಿಯಾಗಿ ಶ್ರಾವ್ಯರಾವ್ ಹಾಗೂ ತೇಜು ನಟಿಸಿದ್ದಾರೆ. ಹಿರಿಯನಟ, ನಿರ್ದೇಶಕ ದ್ವಾರಕೀಶ್, ಶರತ್ ಲೋಹಿತಾಶ್ವ, ಅವಿನಾಶ್, ಸುಚೇಂದ್ರ ಪ್ರಸಾದ್, ಚಂದ್ರಶೇಖರ್, ಚಿಕ್ಕಣ್ಣ ಹಾಗೂ ನಿಹಾರಿಕಾ ಪ್ರಮುಖ ತಾರಾಬಳಗದಲ್ಲಿದ್ದಾರೆ.

ಈ ವಾರ 'ಸೈಕಲ್ ಸವಾರಿ'

ಕಲಾರಂಗ್ ಫಿಲಂ ಪ್ರೊಡಕ್ಷನ್ಸ್ ಅಂಡ್ ಸ್ಟುಡಿಯೋಸ್ ಮೂಲಕ ನಿರ್ಮಾಣವಾಗಿರುವ, ದೇವು ಕೆ.ಅಂಬಿಗ ನಿರ್ದೇಶನದ ವಿಭಿನ್ನ ಪ್ರೇಮ ಕಥಾನಕ ಹೊಂದಿರುವ 'ಸೈಕಲ್ ಸವಾರಿ' ಚಿತ್ರವು ಇಂದಿನಿಂದ ರಾಜ್ಯಾದ್ಯಾಂತ 50ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

ಮಿಠಾಯಿ ಮಾರೋ ಯುವಕ ಹಾಗೂ ಶ್ರೀಮಂತ ಯುವತಿಯ ಮಧ್ಯೆ ಆಗುವ ಪ್ರೀತಿ ಹಾಗೂ ಮುಂದೆ ಅವರಿಂದಾಗುವ ಸಮಸ್ಯೆಗಳನ್ನು ಒಳಗೊಂಡ ಪ್ರೇಮಕಥೆ ಆಧಾರಿತ, ಉತ್ತರ ಕರ್ನಾಟಕ ಸೊಗಡಿನ ಕಥೆ, ಭಾಷೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ದೇವು ಕೆ.ಅಂಬಿಗ ನಾಯಕನಾಗಿ ನಟಿಸುವುದರೊಂದಿಗೆ ಕಥೆ ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿಯನ್ನೂ ಸಹ ಹೊತ್ತಿದ್ದಾರೆ. ಚಿತ್ರದ ನಾಯಕಿಯಾಗಿ ವಿಜಯಪುರ ಮೂಲದ ನೃತ್ಯಕಲಾವಿದೆ ದೀಕ್ಷಾ ಬೀಸೆ ಕಾಣಿಸಿಕೊಂಡಿದ್ದಾರೆ.

ಸುರೇಶ್ ಕೆ.ಶಿವೂರ ಹಾಗೂ ಲೋಕೇಶ ಸವದಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಚಿತ್ರದಲ್ಲಿ ಐದು ಹಾಡುಗಳಿದ್ದು ರೋಹನ್ ದೇಸಾಯಿ ಅವರು ಸಂಗೀತ ಸಂಯೋಜನೆ ಹಾಗೂ ಛಾಯಾಗ್ರಹಣದ ಜವಾಬ್ದಾರಿ ನಿಭಾಯಿಸಿದ್ದಾರೆ. ಖಳನಾಯಕನ ಪಾತ್ರದಲ್ಲಿ ವಿನೋದ ಹಿರೇಮಠ ಹಾಗೂ ಶಿವಾಜಿ ಅವರು ಕಾಣಿಸಿಕೊಂಡಿದ್ದಾರೆ. ಚಿತ್ರದ ಮತ್ತೊಬ್ಬ ನಾಯಕಿಯಾಗಿ ಕಾವ್ಯ ಹಾಗೂ ನಾಯಕನ ತಾಯಿ ಪಾತ್ರದಲ್ಲಿ ಗೀತಾ ರಾಘವೇಂದ್ರ ಅವರುಗಳು ನಟಿಸಿದ್ದಾರೆ.



ಪ್ರಜ್ವಲ್ ದೇವರಾಜ್ ಈಗ 'ಚೀತಾ'




ನೃತ್ಯನಿರ್ದೇಶಕ ಕಲೈಕುಮಾರ್ ಮೊದಲ ಬಾರಿಗೆ ನಿರ್ದೇಶಕನಾಗುತ್ತಿದ್ದು, ಪ್ರಜ್ವಲ್ ದೇವರಾಜ್ ಅವರಿಗೆ ಆಕ್ಷನ್‌ಕಟ್ ಹೇಳುತ್ತಿದ್ದಾರೆ. ಇವರಿಬ್ಬರ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಚೀತಾ ಚಿತ್ರದ ಮುಹೂರ್ತ ರಾಜ್ಯೋತ್ಸವದ ಶುಭದಿನದಂದೇ ನೆರವೇರಿತು. ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸುತ್ತಿರುವ ಈ ಚಿತ್ರವನ್ನು ರಾಜಲಕ್ಷ್ಮಿ ಎಂಟರ್‌ಟೈನ್‌ಮೆಂಟ್ ಮೂಲಕ ಪ್ರತಿಭಾ ನರೇಶ್ ನಿರ್ಮಾಣ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕ ಕಲೈಕುಮಾರ್ ಮಾತಾಡುತ್ತಾ, ಚೀತಾ ನನ್ನ ನಿರ್ದೇಶನದ ಮೊದಲ ಚಿತ್ರ ಹಾಗೂ ಪ್ರಜ್ವಲ್ ಅಭಿನಯದ 39ನೇ ಸಿನಿಮಾ. ಬಹುತೇಕ ಮಾರ್ಕೆಟ್‌ನಲ್ಲೇ ನಡೆಯುವ ಕಥೆ ಇದಾಗಿದ್ದು, ನಾಯಕ ಚಿರತೆಯಷ್ಟೇ ಚುರುಕಾದ, ವೇಗದ ವ್ಯಕ್ತಿಯಾಗಿರುತ್ತಾನೆ. ಅದೇ ಕಾರಣಕ್ಕೆ ಚೀತಾ ಶೀರ್ಷಿಕೆ ಇಟ್ಟಿದ್ದೇವೆ. ಕೆಜಿಎಫ್ ಶಿವಕುಮಾರ್ ಅವರು ಅದ್ದೂರಿಯಾದ ಮಾರ್ಕೆಟ್ ಸೆಟ್‌ನ್ನು ಹಾಕುತ್ತಿದ್ದಾರೆ. ಆ ಸೆಟ್‌ನಲ್ಲೇ ಶೇ.90ರಷ್ಟು ಚಿತ್ರೀಕರಣ ನಡೆಸಲಿದ್ದು, ಉಳಿದ ಭಾಗ ಹಳ್ಳಿಯಲ್ಲಿ ನಡೆಯಲಿದೆ. ಒಂದು ತಾಯಿ, ಮಗುವಿನ ನಡುವಿನ ಕರುಳುಬಳ್ಳಿ ಸಂಬಂಧದ ಕಥೆಯೂ ಚಿತ್ರದ ಮುಖ್ಯಭಾಗವಾಗಿದೆ. ರಿಯಲ್ ಮಾರ್ಕೆಟ್‌ಗೆ ಹೋಗಿ ಅಲ್ಲಿ ಏನೇನೆಲ್ಲ ನಡೆಯುತ್ತದೆ ಎಂಬುದನ್ನು ತಿಳಿದು ಚಿತ್ರದಲ್ಲಿ ಅಳವಡಿಸಿದ್ದೇನೆ. ಕಾಮಿಡಿ, ಲವ್, ಆಕ್ಷನ್ ಜೊತೆಗೆ ಫ್ಯಾಮಿಲಿ ಎಂಟರ್‌ಟೈನರ್ ಕಥೆ ಕೂಡ ಚಿತ್ರದಲ್ಲಿದೆ. ತೆಲುಗುನಟ ಸುನೀಲ್ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದು, ನಾಯಕಿಯ ಪಾತ್ರಕ್ಕೆ ಆಯ್ಕೆ ನಡೆಯುತ್ತಿದೆ. ನವೆಂಬರ್ ಆರರಿಂದ ಚಿತ್ರೀಕರಣ ಆರಂಭವಾಗಲಿದೆ ಎಂದು ವಿವರಿಸಿದರು.

ನಂತರ ಪ್ರಜ್ವಲ್ ಮಾತಾಡುತ್ತಾ, ಕಲೈಮಾಸ್ಟರ್ ನೃತ್ಯನಿರ್ದೇಶನದ ಮೊದಲ ಹಾಡಲ್ಲಿ ನಾನೇ ನಾಯಕನಾಗಿದ್ದೆ. ಈಗವರ ನಿರ್ದೇಶನದ ಮೊದಲ ಚಿತ್ರಕ್ಕೂ ನಾನೇ ನಾಯಕ. ಮಾರ್ಕೆಟ್‌ನಲ್ಲೇ ಹುಟ್ಟಿ ಬೆಳೆದಂಥ ಹುಡುಗನ ಪಾತ್ರ ನನ್ನದು ಎಂದು ತಿಳಿಸಿದರು. ಪ್ರಜ್ವಲ್‌ರ ಸ್ನೇಹಿತನ ಪಾತ್ರ ನಿರ್ವಹಿಸುತ್ತಿರುವುದಾಗಿ ಗುರುರಾಜ್ ಜಗ್ಗೇಶ್ ಹೇಳಿದರು. ಶೃತಿ ಹರಿಹರನ್, ಶಿವರಾಜ್ ಕೆ.ಆರ್.ಪೇಟೆ, ಗೋವಿಂದೇಗೌಡ ಅಭಯ್ ಪುನೀತ್ ಚಿತ್ರದ ಕುರಿತಂತೆ ಮಾತನಾಡಿದರು. ಈ ಚಿತ್ರದ ಮತ್ತೊಂದು ವಿಶೇಷವೆಂದರೆ ಮೊದಲ ಬಾರಿಗೆ ಸಿನಿಮಾದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ತಂತ್ರಜ್ಞರ ಭಾವಚಿತ್ರದ ಬ್ಯಾನರ್‌ಗಳನ್ನು ಕಾರ್ಯಕ್ರಮದ ಸುತ್ತಲೂ ನಿಲ್ಲಿಸಿ, ಅವರಿಗೆ ವಿಶೇಷ ಗೌರವ ಸಲ್ಲಿಸಿದ್ದಾರೆ. ಗುರುಪ್ರಸಾದ್ ನರ್ನಾಡ್ ಅವರ ಛಾಯಾಗ್ರಹಣ, ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ.

ಸಿನಿಪದಬಂಧ-498



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________



ವಿಜೇತರು: ಜಿ.ನಿಶ್ಮಿತಾ, 8ನೇ ತರಗತಿ 'ಎ' ವಿಭಾಗ, ಸಿಕೆಸಿ ಪ್ರೌಢಶಾಲೆ, ಲಕ್ಷ್ಮಿಪುರಂ, ಮೈಸೂರು-570004



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 497ರ ಉತ್ತರ

ಒಂ	ದು	ಹೆ	ಣ್ಣು	ಆ	ರು	ಕ	ಣ್ಣು			
ದೇ		ಣ್ಣು		ಸೆ		ಲ್ಕಿ		ಪ್ರ		
ರೂ		ಹು	ಲಿ	ಯ				ತಿ		ನಾ
ಪ		ಲಿ		ಬ		ಅ		ಮಾ	ಧ	ವಿ
ಎ			ಮ	ಲೆ	ಮ	ಕ್ಕ	ಳು			ಬ್ಬ
ರ	ವ	ಳಿ			ತ್ಸ			ಟ	ಗ	ರು
ಡು			ಸಾ	ವಿ	ರ	ಸು	ಳ್ಳು			ನ
ಗು	ಲಾ	ಮ		ಶ್ವ		ಥಾ		ಮೌ		ಮ
ಣ		ಡ				ಚಂ	ದ	ನ		ಗಿ
		ದಿ		ಲ		ದ್ರ		ರಾ		ಬ್ಬ
			ಲ	ವ್	ಇ	ನ್	ಬೆಂ	ಗ	ಳೂ	ರು

ಎಡದಿಂದ ಬಲಕ್ಕೆ

1. ವಿಷ್ಣು- ಮಂಜುಳಾಗೆ ಅದೃಷ್ಟ ತಾನಾಗಿಯೇ ಒಲಿದಿದೆ 8
6. ರವಿಚಂದ್ರನ್ ಪುತ್ರ ಮನೋರಂಜನ್‌ನನ್ನು ಗೌರವಿಸಿ ಕರೆಯಿರಿ 3
9. ತಾವರೆಯಂತಹ ನಟ ಹೆಸರಿನಲ್ಲಿ ಪ್ರಾಣವಿರಿಸಿಕೊಂಡಿದ್ದಾನೆ 3
10. ಈ ಭವ್ಯ ಸೌಧದಲ್ಲಿ ರಹಸ್ಯ ಅಡಗಿದೆ 5
12. " _ _ _ ಜೀವನ ಸಾಕ್ಷಾತ್ಕಾರ ಒಲವೇ ಮರೆಯದ ಮಮಕಾರ..." 3
13. "ಸಿರಿವಂತನಾದರೂ ಕನ್ನಡ ನಾಡಲ್ಲೇ ಮೆರೆವೆ...." ಗೀತೆಯ ಚಿತ್ರ 3
14. ದೇವರಾಜ್ ಚಿಕ್ಕಬಳ್ಳಾಪುರ ಜಿಲ್ಲೆಯ ಊರೊಂದನ್ನು ನೆನಪಿಸಿದ್ದಾನೆ 5
17. ಪ್ರಜ್ವಲ್ ದೇವರಾಜ್‌ನ 'ಸ್ನೇಹಿತ' 3
20. ಹೊಸಬೆಳಕು ಚಿತ್ರದ ಸರಿತಾಳ ಪಾತ್ರ 3
22. ಅಂಬರೀಶ್ ರಕುತದಿ ಬರೆದು ಮಂಜುಳಾ ಶರ್ಮಾಳಿಗೆ ನೀಡಿದ ಕಾಣಿಕೆ 8

ಮೇಲಿನಿಂದ ಕೆಳಕ್ಕೆ

1. ನವವಧು ಗಂಡನ ಮನೆ ಪ್ರವೇಶ ಮಾಡುವ ಸನ್ನಿವೇಶ ಹಿರಿಯರು ಹೇಳಿದ್ದು! 9
2. ಶಿವಣ್ಣ ಎಡಗೈಲಿ ಬಾಣ ಬಿಡಲು ಎಂ. ಎಸ್. ರಾಜಶೇಖರ್ ನಿರ್ದೇಶಕ 4
3. ಶಿವರಾಜ್ ಕುಮಾರ್-ಪೂನಂ ಕೌರ್ ಅಭಿನಯದಲ್ಲಿ ನೆಂಟರಿಷ್ಟರ ಸಮೂಹ 5
4. ಓ ಪ್ರೇಮವೇ ಚಿತ್ರದ ನಾಯಕಿ ಇಲ್ಲಿ ತಲೆಕೆಳಗು 2
5. ಒಂದು ಬಗೆಯ ತಂತಿ ವಾದ್ಯ ನೆನಪಿಸುವ ನಟಿ 3
7. ಮಾಲಾಶ್ರೀಗೆ ತಾಯಿಯ ಗೃಹದಿಂದ ನೀಡಿದ ಬಳುವಳಿ 9
8. ಈ ಚಿತ್ರಕ್ಕೆ "ಬಾಯಾರಿಕೆ"ಯಾಗಿದೆ 2
11. ಕೆಸರಿನ ಪುಷ್ಪವಿಲ್ಲಿ ಅಸ್ತವ್ಯಸ್ತಗೊಂಡಿದೆ 3
15. ಸಂಕಲನಕಾರನೊಬ್ಬ ಇಲ್ಲಿ ಇನ್ಸಿಲ್ ಕಳೆದುಕೊಂಡಿದ್ದಾನೆ 2
16. ಗಿರೀಶ್ ಕಾರ್ನಾಡ್ ಅವರ ನಾಟಕ "ಕುದುರೆಮುಖ" 5
18. ಗಂಗಾಳ ಜೊತೆ ಬಂದಾಕೆ 3
19. ಆದಿತ್ಯ ಚಿತ್ರದ ಹಾಡೊಂದರಲ್ಲಿ ಮರಳಾದ ಐತಿಹಾಸಿಕ ಸ್ಥಳವಿದೆ 4
21. 'ಸಂಶಯ'ದಲ್ಲೂ ದೊರೆತ 'ಲಾಭ' 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರು ಮಿತ್ರ

ಶುಕ್ರವಾರ 3 ನವೆಂಬರ್ 2023

ಹೆಚ್.ಎನ್. ಗಿರೀಶ್‌ಗೆ ರಾಷ್ಟ್ರ ಪ್ರಶಸ್ತಿ



ಮೈಸೂರು, ನ.2– ದೆಹಲಿಯ ಶಿಕ್ಷಣ ಮತ್ತು ಸಾಮಾಜಿಕ ಸಂಸ್ಥೆಯಿಂದ ಕೊಡ ಮಾಡುವ 'ಎಜುಕೇಷನ್ ಎಕ್ಸಲೆನ್ಸ್ ಅವಾರ್ಡ್'ಗೆ ಹುಣಸೂರಿನ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಜೀವಶಾಸ್ತ್ರ ಉಪನ್ಯಾಸಕ ಹೆಚ್.ಎನ್. ಗಿರೀಶ್ ಭಾಜನರಾಗಿದ್ದಾರೆ.

ಮೂರು ದಶಕಗಳ ಕಾಲ ಶೈಕ್ಷಣಿಕ, ಸಾಮಾಜಿಕ ಹಾಗೂ ಪರಿಸರ ಸಂಬಂಧಿತ ಸೇವೆಗಾಗಿ ಗಿರೀಶ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ನ.5ರಂದು ಉತ್ತರ ಪ್ರದೇಶದ ನೋಯಿಡಾದಲ್ಲಿ ನಡೆಯಲಿರುವ 4ನೇ ವಿಶ್ವ ಪರಿಸರ ಸಮ್ಮೇಳನದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಕರ್ನಾಟಕ ಸರ್ಕಾರವು 2023ನೇ ಸಾಲಿನಲ್ಲಿ ರಾಜ್ಯ ಉತ್ತಮ ಉಪನ್ಯಾಸಕ ಪ್ರಶಸ್ತಿಯನ್ನು ಹೆಚ್.ಎನ್.ಗಿರೀಶ್ ಅವರಿಗೆ ನೀಡಿದ್ದನ್ನು ಸ್ಮರಿಸಬಹುದು.

ಕೇರಳ ಗಡಿಯಲ್ಲಿ ಕನ್ನಡ ಭಾಷೆಗೆ ತನ್ನದೇ ಸ್ಥಾನ



ಹೆಚ್.ಡಿ.ಕೋಟೆ, ನ.2–ಕನ್ನಡಿಗರು ನಾಡಿನ ನೆಲ, ಜಲ, ಭಾಷೆಗೆ ಗೌರವ ಹಾಗೂ ಮಾತೃಭಾಷೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲು ನಿರಂತರವಾಗಿ ಶ್ರಮಿಸಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಪದವಿಪೂರ್ವ ಕಾಲೇಜು ಮೈದಾನದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕು ಕೇರಳದ ಗಡಿಯನ್ನು ಹಂಚಿಕೊಂಡಿದ್ದರೂ ಕನ್ನಡ ಭಾಷೆ ತನ್ನದೆ ಸ್ಥಾನ ಉಳಿಸಿಕೊಂಡಿದೆ. ಗಡಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಹಲವು ಬಾರಿ ಆಚರಿಸಿದ್ದೇವೆ. ಗಡಿನಾಡಿನಲ್ಲಿ ಕನ್ನಡಿಗರ ನೆರವಿಗೆ ಸದಾ ತಾಲೂಕು ಆಡಳಿತ ಸಿದ್ಧವಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ, ಶಿಕ್ಷಕರು, ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಪಠ್ಯೇತರ ಚಟುವಟಿಕೆಗಳಾದ ಕಲೆ, ಸಂಸ್ಕೃತಿಕ ಹಾಗೂ ಕ್ರೀಡೆಗಳಲ್ಲಿ ಹೆಚ್ಚು ಭಾಗವಹಿಸುವಂತೆ ಶ್ರಮಿಸಬೇಕಿದೆ. ಪಟ್ಟಣ ವ್ಯಾಪ್ತಿ ಕಲಾಮಂದಿರ ನಿರ್ಮಿಸಲು ಪುರಸಭೆ ಅಧಿಕಾರಿಗಳು, ತಹಶೀಲ್ದಾರ್ ಹಾಗೂ ಕಂದಾಯ ಅಧಿಕಾರಿಗಳು ಜಂಟಿ ಸರ್ವೆ ನಡೆಸಿ ಜಾಗ ಗುರುತಿಸುವಂತೆ ಸೂಚಿಸಿದರು.

ಸರ್ಕಾರಿ ಪದವಿ ಕಾಲೇಜಿನ ಪ್ರಾಧ್ಯಾಪಕ ಕೃಪ ಗಣೇಶ್ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳನ್ನು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪ್ರಮೋದ ಅಭಿನಂದಿಸಿದರು. ಇದೇ ವೇಳೆ ಪಟ್ಟಣದ ವರದರಾಜ ದೇವಾಲಯದ ಆವರಣದಿಂದ ನಾದಸ್ವರ, ನಂದಿಧ್ವಜ, ವಿವಿಧ ಕಲಾತಂಡ ಹಾಗೂ ನಾಡು ನುಡಿ ಸಂಸ್ಕೃತಿ ಮೆರೆಯುವ ಸ್ತಬ್ಧಚಿತ್ರಗಳೊಂದಿಗೆ ಬೆಳ್ಳಿ ರಥದಲ್ಲಿ ಭುವನೇಶ್ವರಿ ಭಾವಚಿತ್ರ ಇರಿಸಿ ಜೂನಿಯರ್ ಕಾಲೇಜು ವರೆಗೆ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಸಣ್ಣರಾಮಪ್ಪ, ತಾಪಂ ಇಓ ಧಣೇಶ್, ಪುರಸಭೆ ಸದಸ್ಯರಾದ ಎಚ್.ಸಿ.ನರಸಿಂಹ ಮೂರ್ತಿ, ನಂಜಪ್ಪ, ಆಸಿಫ್, ಪ್ರೇಮ್, ಮಧು, ಮುಖಂಡರಾದ ಕ್ಯಾತನಹಳ್ಳಿ ನಾಗರಾಜು, ಛಾಯಾಗ್ರಾಹಕ ಸಂಘದ ಅಧ್ಯಕ್ಷ ಬಾಲು, ಸರ್ಕಲ್ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಮೊತ್ತ ಬಸವರಾಜಪ್ಪ, ಸಣ್ಣಕುಮಾರ್, ಕೃಷ್ಣೇಗೌಡ ಮುದ್ದುಮಲ್ಲಯ್ಯ, ಶ್ರೀಕಾಂತ್, ಶೈಲಾ, ಸುಧಾಮಣಿ, ಅನುಷಾ, ಶಂಕರ್, ಶಾಲಾ ಮಕ್ಕಳು ಭಾಗವಹಿಸಿದರು.

ಕನ್ನಡದ ಸುವರ್ಣ ಮಹೋತ್ಸವ ಸಂಭ್ರಮಿಸೋಣ

● ಶಾಸಕ ಜಿ.ಡಿ.ಹರೀಶ್‌ಗೌಡ ಕರೆ ● ಹುಣಸೂರಿನಲ್ಲಿ ಅದ್ದೂರಿ ರಾಜ್ಯೋತ್ಸವ





ಹುಣಸೂರು, ನ.2– ಕನ್ನಡ ನಾಡಿಗೆ ಕರ್ನಾಟಕವೆಂದು ನಾಮಕರಣ ಮಾಡಿದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ ಅವರು ನಮ್ಮ ಕ್ಷೇತ್ರವನ್ನು ಪ್ರತಿನಿಧಿಸಿದವರೆಂಬ ಹೆಮ್ಮೆ ಇದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಸ್ಮರಿಸಿದರು.

ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಆಯೋಜಿಸಿದ್ದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, 1973ರ ನ.1ರಂದು ಮೈಸೂರು ರಾಜ್ಯವನ್ನು ಕರ್ನಾಟಕವೆಂದು ನಾಮಕರಣ ಮಾಡಿದ್ದು, ಇಂದಿಗೆ 50 ವರ್ಷವಾಗಿದೆ. ಈ ಸುವರ್ಣ ಸಂಭ್ರಮವನ್ನು ಎಲ್ಲರೂ ಸಂಭ್ರಮಿಸೋಣ. 1905ರಲ್ಲಿ ಕನ್ನಡದ ದಿಗ್ಗಜ ಆಲೂರು ವೆಂಕಟರಾಯರ ನೇತೃತ್ವದಲ್ಲಿ ಕರ್ನಾಟಕದ ಏಕೀಕರಣದ ಹೋರಾಟದಲ್ಲಿ ಭಾಗಿಯಾಗಿದ್ದ ನಾಡಿನ ಎಲ್ಲಾ ಸಾಹಿತಿಗಳು ಹಾಗೂ ಕನ್ನಡದ ಕಟ್ಟಾಳುಗಳನ್ನು ಸ್ಮರಿಸುವ ದಿನವಾಗಿದೆ. ಮಾತೃಭಾಷೆ ಬಗ್ಗೆ ಪ್ರೀತಿ, ವಿಶ್ವಾಸ, ನಂಬಿಕೆ ಇರಲಿ. ನಾಡು, ನುಡಿ, ಜಲ ಉಳಿಸಲು ಶ್ರಮಿಸೋಣವೆಂದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ನೂರಾರು ವರ್ಷಗಳ ಇತಿಹಾಸವಿರುವ ಕನ್ನಡ ನಾಡಿನ ಶ್ರೀಮಂತ ಸಂಸ್ಕೃತಿ, ಕಲೆ, ಸಂಗೀತಕ್ಕೆ ತನ್ನದೇ ಪರಂಪರೆ ಇದೆ. ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರನ್ನು ನೆನಪಿಸಿಕೊಳ್ಳಬೇಕು. ಕನ್ನಡ ನೆಲದ ಸಂಸ್ಕೃತಿಯ ಪ್ರತೀಕವಾಗಿರುವ ನಾಡಹಬ್ಬ ದಸರಾ, ಕನ್ನಡದ ಮೇರು ಸಾಹಿತಿ ಕುವೆಂಪು ಸೇರಿದಂತೆ ಸಾಹಿತಿವರ್ಯರನ್ನು ಸ್ಮರಿಸಬೇಕು ಎಂದರು.

ಟ್ಯಾಲೆಂಟ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳು ಐದು ಕನ್ನಡ ಭಾಷೆಯ ಗೀತೆಗಳನ್ನು ಹಾಡಿದರು. ಬಾಲಕಿಯರ ಪದವಿಪೂರ್ವ ಕಾಲೇಜು ವಿಭಾಗದ ಪ್ರೌಢಶಾಲೆ ವಿದ್ಯಾರ್ಥಿನಿಯರು ನಾಡಗೀತೆ ಪ್ರಸ್ತುತ ಪಡಿಸಿದರು. ತಹಶೀಲ್ದಾರ್ ಡಾ.ಅಶೋಕ್, ತಾಪಂ ಇಓ ಮನು, ಪೌರಾಯುಕ್ತೆ ಮಾನಸ, ಬಿಇಓ ರೇವಣ್ಣ, ಬಿ.ಆರ್.ಸಿ.ಸಂತೋಷ್‌ಕುಮಾರ್, ಕಸಾಪ ತಾಲೂಕು ಅಧ್ಯಕ್ಷ ಹರವೆ ಮಹದೇವ್, ಸಿಡಿಪಿಓ ರಶ್ಮಿ, ತೋಟಗಾರಿಕೆ ಇಲಾಖೆಯ ಅಧಿಕಾರಿ ನೇತ್ರಾವತಿ, ಎಇಇಗಳಾದ ಬೋಜರಾಜ್, ನರಸಿಂಹಯ್ಯ, ಪ್ರಭಾರ ದೈಹಿಕ ಶಿಕ್ಷಣ ಪರಿವೀಕ್ಷಕ ರಮೇಶ್, ನಗರಸಭೆ ಸದಸ್ಯರಾದ ಆಶಾ, ರಾಣಿ ಪೆರುಮಾಳ್, ಕೃಷ್ಣರಾಜಗುಪ್ತ, ಶರವಣ, ಸತೀಶ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಸ್.ಗೋವಿಂದೇಗೌಡ, ಇನ್ಸ್‌ಪೆಕ್ಟರ್ ದೇವೇಂದ್ರ, ದೈಹಿಕ ಶಿಕ್ಷಣ ಶಿಕ್ಷಕ ವಾಸುದೇವ್, ಕಾಂಗ್ರೆಸ್ ಅಧ್ಯಕ್ಷ ನಾರಾಯಣ್, ದಲಿತ ಮುಖಂಡರಾದ ನಿಂಗರಾಜ ಮಲ್ಲಾಡಿ, ವಿ.ಎನ್.ದಾಸ್ ಮತ್ತಿತರರು ಹಾಜರಿದ್ದರು.

ಅದ್ದೂರಿ ಮೆರವಣಿಗೆ: ಹುಣಸೂರಲ್ಲಿ ಗಮನ ಸೆಳೆದ ಕನ್ನಡ ಹಬ್ಬ ಸಾಂಸ್ಕೃತಿಕ ಕಲರವಗಳ ನಡುವೆ ಭುವನೇಶ್ವರಿ ದೇವಿಯ ಮೆರವಣಿಗೆಗೆ ನಗರದ ಕಲ್ಕುಣಿಕೆಯ ರಂಗನಾಥ ಬಡಾವಣೆಯಲ್ಲಿ ಚಾಲನೆ ನೀಡಲಾಯಿತು.

ವಿವಿಧ ಶಾಲಾ ಮಕ್ಕಳ ಆಕರ್ಷಕ ಬ್ಯಾಂಡ್ ಸೆಟ್, ಪಥಸಂಚಲನ, ಸ್ಯಾಕ್ಸಾಫೋನ್, ಸಂಗೀತದೊಂದಿಗೆ ಆರಂಭಗೊಂಡ ಮೆರವಣಿಗೆಯಲ್ಲಿ ಮಂಗಳವಾದ್ಯ, ವೀರಗಾಸೆ, ಚಂಡೆಮೇಳ, ದೊಳ್ಳು ಕುಣಿತ, ನಗಾರಿ, ನಾಸಿಕ್‌ಬ್ಯಾಂಡ್, ತಮಟೆ, ಕಟ್ಟೆಮಳಲವಾಡಿಯ ಅಂಬೇಡ್ಕರ್ ಕಲಾ ಸಂಘದ ಕೋಲಾಟ, ಸಿಡಿಯಮ್ಮ ಮಹಿಳಾ ಕಲಾ ತಂಡದ ಸೋಬಾನೆ ಗೀತೆ, ಅಲಂಕೃತ ಹೋರಿ, ಜೋಡೆತ್ತು, ಸ್ತಬ್ಧಚಿತ್ರಗಳ ಪ್ರದರ್ಶನ ಗಮನ ಸೆಳೆದವು.

ಅಲಂಕೃತ ಸಾರೋಟಿನಲ್ಲಿ ಭುವನೇಶ್ವರಿ ದೇವಿಯ ಕಂಚಿನ ವಿಗ್ರಹವನ್ನು ಮೆರವಣಿಗೆ ನಡೆಸಲಾಯಿತು. ನಗರದ ವಿವಿಧ ವೃತ್ತಗಳ ಆಟೋ ಸಂಘಗಳು, ಕಾರು–ಲಾರಿ ಚಾಲಕರು ತಮ್ಮ ನಿಲ್ದಾಣಗಳಲ್ಲಿ ಕನ್ನಡ ಸಂಸ್ಕೃತಿ ಬಿಂಬಿಸುವ ವೈವಿಧ್ಯಮಯ ಪ್ರಕಾರಗಳನ್ನು ಅಲಂಕಾರಗೊಳಿಸಲಾಗಿತ್ತು. ಮೆರವಣಿಗೆ ಯಶಸ್ವಿಗೆ ಹಬ್ಬಗಳ ಆಚರಣೆ ಸಮಿತಿಯ ವಿ.ಎನ್.ದಾಸ್, ರಾಚಪ್ಪ, ಜಯರಾಂ, ಸುಬ್ಬರಾವ್, ಚಂದ್ರಮೌಳಿ, ಗುರುರಾಜ್, ಶ್ರೀಹರಿ ಮತ್ತಿತರರು ಶ್ರಮಿಸಿದರು.

ಸ್ಕೇಟಿಂಗ್ ಪುಟಾಣಿಗಳ ಕನ್ನಡ ಪ್ರೇಮ: ರಾಜ್ಯೋತ್ಸವದ ಸುವರ್ಣ ಸಂಭ್ರಮದ ಅಂಗವಾಗಿ 7 ರಿಂದ 14 ವರ್ಷದ ಮಕ್ಕಳು ಕೈಯಲ್ಲಿ ಕನ್ನಡದ ಬಾವುಟ ಹಿಡಿದು ಕೆ.ಆರ್. ನಗರದಿಂದ ಹುಣಸೂರಿಗೆ ಸ್ಕೇಟಿಂಗ್ ಮೂಲಕ ಆಗಮಿಸಿ ಕನ್ನಡ ಪ್ರೇಮ ಮೆರೆದರು.

ಎಲ್ಲರೂ ಮಾತೃಭಾಷೆಯನ್ನು ಪ್ರೀತಿಸಬೇಕು



ಸರಗೂರು, ನ.2–ಎಲ್ಲರೂ ಮಾತೃ ಭಾಷೆ ಕನ್ನಡವನ್ನು ಪ್ರೀತಿಸಿ, ಗೌರವಿಸಬೇಕು ಎಂದು ವೈದ್ಯಾಧಿಕಾರಿ ಡಾ.ಶರತ್ ತಿಳಿಸಿದರು.

ಪಟ್ಟಣದ ಜೈ ಭುವನೇಶ್ವರಿ ಆಟೋ ಚಾಲಕರು ಹಾಗೂ ಮಾಲೀಕರ ಸಂಘದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡಿನ ನೆಲ–ಜಲ, ಭಾಷೆಯನ್ನು ಎಲ್ಲರಿಗೂ ಕಲಿಸುವಂತಾಗಬೇಕು. ಕನ್ನಡವನ್ನು ಕೇವಲ ನವೆಂಬರ್ ತಿಂಗಳಿನಲ್ಲಿ ಮಾತ್ರ ಜ್ಞಾಪಿಸಿಕೊಳ್ಳದೇ ವರ್ಷಪೂರ್ತಿ ಭಾಷೆ ಬಗ್ಗೆ ಆಳವಾದ ಜ್ಞಾನ ಹೊಂದುವ ಮೂಲಕ ಕನ್ನಡ ಉಳಿವುನ ಹಾಗೂ ಬೆಳವಣಿಗೆಗೆ ಶ್ರಮಿಸಬೇಕು ಎಂದರು.

ಯುವಕರು, ಮಕ್ಕಳಲ್ಲಿ ಭಾಷಾಭಿಮಾನ ಬೆಳೆಸಲು ಶಾಲಾ ಶಿಕ್ಷಕರು ಮುಂದಾಗಬೇಕು. ಇದಲ್ಲದೆ, ಕನ್ನಡ ಮಾಧ್ಯಮದಲ್ಲೇ ಮಕ್ಕಗಳು ಓದಲು ಪ್ರೇರಣೆ ನೀಡಬೇಕು. ಹೀಗಾಗಿ ಎಲ್ಲರೂ ಕನ್ನಡದ ಬಗ್ಗೆ ಅರಿವು ಹೊಂದಬೇಕು. ಮುಂದಿನ ದಿನಗಳಲ್ಲಿ ರಕ್ತ ಹೀನತೆಯಿಂದ ಬಳಲುತ್ತಿರುವ ಬಡವರಿಗಾಗಿ ರಕ್ತದಾನ ಶಿಬಿರವನ್ನು ಆಟೋ ಚಾಲಕರು ಹಾಗೂ ಮಾಲೀಕರ ಸಂಘದ ವತಿಯಿಂದ ನಡೆಸೋಣ ಎಂದು ಮನವಿ ಮಾಡಿದರು.

ಇದಕ್ಕೂ ಮುನ್ನ ಭುವನೇಶ್ವರಿ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ನಂತರ ಆಟೋಗಳಿಗೆ ಹೂವಿನಿಂದ ಅಲಂಕರಿಸಿ ಭುವನೇಶ್ವರಿ ಭಾವಚಿತ್ರವಿಟ್ಟು ಕನ್ನಡದ ಹಾಡುಗಳನ್ನು ಹಾಕಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಸಿಹಿ ಹಂಚಲಾಯಿತು. ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ.ಚಂದ್ರಶೇಖರ್, ಪಿಎಸ್‌ಐ ನಂದೀಶ್ ಕುಮಾರ್, ಆನಂದ್, ವರುಣ್ ಸೂಪರ್ ಮಾರ್ಕೆಟ್ ಸಂಸ್ಥಾಪಕ ವರಣ್, ಶ್ರೀಕಂಠೇಶ್ವರ ಆಟೋ ಪಾರ್ಟ್ಸ್ ಮಾಲೀಕ ಶ್ರೀಕಂಠಸ್ವಾಮಿ, ಯೋಗೀಶ್, ಹೆಚ್.ಕೆ.ಟ್ರಾವಲ್ಸ್ ಮಾಲೀಕ ಹಾಲಪ್ಪ, ಜೈ ಭುವನೇಶ್ವರಿ ಆಟೋ ಚಾಲಕರು ಹಾಗೂ ಮಾಲೀಕರ ಸಂಘದ ಅಧ್ಯಕ್ಷ ಮಹೇಶ್, ಗೌರವಾಧ್ಯಕ್ಷ ಶಿವಣ್ಣ, ಉಪಾಧ್ಯಕ್ಷ ಪ್ರವೀಣ, ಕಾರ್ಯದರ್ಶಿ ಸ್ವಾಮಿ, ಖಜಾಂಚಿ ಮೂರ್ತಿ, ಸದಸ್ಯರಾದ ಸತೀಶ್, ನಾಗೇಶ್, ಪುನೀತ ಚಂದ್ರ, ಅವಿನಾಶ್, ಮಧು ಡಿ.ಬಾನುಪ್ರಕಾಶ್, ಗೋಪಾಲ್, ಶಿವಣ್ಣ, ಶಿವಮೂರ್ತಿ, ಭರತ್, ಅಭಿ, ನಿಂಗೇಶ್, ಪ್ರಸನ್ನ, ಮಹೇಶ್, ಕುಮಾರ್, ಮಂಜು, ನಾಗೇಶ್, ಮಣಿ ರಾಜು, ಯೋಗೇಶ್, ಸಂದೇಶ್ ಇದ್ದರು.

ಅಡುಗೆ ಸಿಲಿಂಡರ್ ಗ್ಯಾಸ್ ಸೋರಿಕೆ: ಬೆಂಕಿ ಅನಾಹುತ

● ಇಬ್ಬರು ಶಿಕ್ಷಕರು, ಮೂವರು ವಿದ್ಯಾರ್ಥಿಗಳಿಗೆ ಗಾಯ
● ನಿಲಸೋಗೆ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಘಟನೆ



ತಿ.ನರಸೀಪುರ, ನ.2–ಅಡುಗೆ ಅನಿಲ ಸಿಲಿಂಡರ್ ಸೋರಿಕೆಯಿಂದಾಗಿ ಉಂಟಾದ ಬೆಂಕಿ ಅವಘಡದಲ್ಲಿ ಇಬ್ಬರು ಶಿಕ್ಷಕರು ಹಾಗೂ ಮೂವರು ವಿದ್ಯಾರ್ಥಿಗಳು ಗಾಯಗೊಂಡಿರುವ ಘಟನೆ ತಾಲೂಕಿನ ನಿಲಸೋಗೆ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಮಧ್ಯಾಹ್ನ ನಡೆದಿದೆ.

ಘಟನೆಯಲ್ಲಿ ಮುಖ್ಯ ಶಿಕ್ಷಕ ಮಹದೇವಯ್ಯ, ಸಹ ಶಿಕ್ಷಕಿ ಮೀನಾಕ್ಷಿ, ವಿದ್ಯಾರ್ಥಿಗಳಾದ ಎಂ.ಪೃಥ್ವಿ(12), ಧನುಶ್ ಎಂ.(12) ಹಾಗೂ ಗೌತಮ್(9) ಗಾಯಗೊಂಡಿದ್ದು, ಗಾಯಾಳುಗಳು ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಾಲೆಯ ಅಡುಗೆ ಕೋಣೆಯಲ್ಲಿದ್ದ ಸಿಲಿಂಡರ್‌ನಿಂದ ಅನಿಲ ಸೋರಿಕೆಯ ವಾಸನೆ ಬರುತ್ತಿದ್ದ ಹಿನ್ನೆಲೆಯಲ್ಲಿ ಕೊಠಡಿಯಲ್ಲಿ ಕತ್ತಲೆ ಇದ್ದ ಕಾರಣ ಮುಖ್ಯಶಿಕ್ಷಕ ಮಹದೇವಯ್ಯ ಬೆಳಕಿಗಾಗಿ ಬೆಂಕಿ ಕಡ್ಡಿ ಹಚ್ಚಿ ಒಳಗೆ ತೆರಳುವಾಗ ತಕ್ಷಣ ಬೆಂಕಿ ವ್ಯಾಪಿಸಿದ ಕಾರಣ ಶಿಕ್ಷಕರು, ಮಕ್ಕಳು ಗಾಯಗೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಶಾಲೆಗೆ ಅಗ್ನಿ ಶಾಮಕ ದಳದ ಅಧಿಕಾರಿಗಳು, ತಹಶೀಲ್ದಾರ್ ಸುರೇಶ್ ಆಚಾರ್, ತಾಪಂ ಇಓ ಸಿ.ಕೃಷ್ಣ ಹಾಗೂ ಬಿಇಓ ಜಿ.ಶೋಭಾ ಭೇಟಿ ನೀಡಿ ಪರಿಶೀಲಿಸಿದರು. ಇದಕ್ಕೂ ಮುನ್ನ ಆಸ್ಪತ್ರೆಗೆ ತಹಶೀಲ್ದಾರ್, ಬಿಇಓ ಹಾಗೂ ಬಿಆರ್‌ಸಿ, ಆಡಳಿತ ವೈದ್ಯಾಧಿಕಾರಿ ಡಾ.ಜಗನ್ನಾಥ್. ನೇತ್ರ ತಜ್ಞರಾದ ಡಾ.ಕೆಎನ್.ಭಾರತಿ, ರೇವಣ್ಣ, ಮುಖಂಡ ಶೇಖರಪ್ಪ ಭೇಟಿ ನೀಡಿದರು.

ಘಟನೆಯಿಂದ ಗಾಯಗೊಂಡಿರುವ ಮುಖ್ಯ ಶಿಕ್ಷಕರು, ಶಿಕ್ಷಕಿ ಹಾಗೂ ವಿದ್ಯಾರ್ಥಿಗಳು ಗಾಬರಿಯಾಗಿದ್ದು, ಅವರಿಂದ ಈ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಅನಿಲ ಸೋರಿಕೆಯಿಂದ ಘಟನೆ ನಡೆದಿದ್ದು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದೇವೆ. ಶಿಕ್ಷಕರಿಂದ ಘಟನೆಗೆ ಕಾರಣ ತಿಳಿಯಬೇಕಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಶೋಭಾ ತಿಳಿಸಿದ್ದಾರೆ. ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಧನಂಜಯ ಭೇಟಿ ನೀಡಿ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿ ಕೊಂಡಿದ್ದಾರೆ.




ನಂಜನಗೂಡಿನಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ 100ಕ್ಕೆ 100 ಅಂಕ ಪಡೆದ ನೇರಳೆ ಗ್ರಾಪಂ ಅಧ್ಯಕ್ಷ ಬಿ.ಆರ್. ಗಿರೀಶ್ ಅವರ ಪುತ್ರಿ ಜಿ.ಹೆಚ್. ಶಿವಾನಿ ಅವರನ್ನು ಅಭಿನಂದಿಸಲಾಯಿತು. ಶಾಸಕ ದರ್ಶನ್ ಧ್ರುವನಾರಾಯಣ್, ಬಿ.ಆರ್. ಗಿರೀಶ್, ಶ್ರೀಮತಿ ಪೂರ್ಣಿಮಾ ಗಿರೀಶ್ ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು.

ಉಪ ಅರಣ್ಯಾಧಿಕಾರಿ ಮೇಲೆ ಹಲ್ಲೆ: ದೂರು ದಾಖಲು

ನಂಜನಗೂಡು, ನ.2– ತಾಲೂಕಿನ ಹೆಡಿಯಾಲ ಸಮೀಪದ ಕುದುರೆಗುಂಡಿ ಹಿನ್ನೀರಿನ ಪ್ರದೇಶದಲ್ಲಿ ಮಂಗಳವಾರ ರೈತನ ಮೇಲೆ ಹುಲಿ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆಗೆ ತೆರಳಿದ್ದ ಉಪವಲಯ ಅರಣ್ಯಾಧಿಕಾರಿ ಮೇಲೆ ಹಲ್ಲೆ ನಡೆಸಿದ್ದ ಮೂವರು ಸ್ಥಳೀಯರ ವಿರುದ್ಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಗುರುವಾರ ದೂರು ದಾಖಲಾಗಿದೆ.

ತಾಲೂಕಿನ ಮಹದೇವನಗರ ಗ್ರಾಮದ ಪುಟ್ಟಸ್ವಾಮಿ, ಶಿವಣ್ಣ ಹಾಗೂ ಚಂದ್ರಕಲಾ ಅವರು ಹಲ್ಲೆ ನಡೆಸಿದ್ದಾರೆ ಎಂದು ಉಪ ಅರಣ್ಯಾಧಿಕಾರಿ ಮಹಾತೇಂಶ್ ದೂರು ನೀಡಿದ್ದಾರೆ. ಹೆಡಿಯಾಲ ಸುತ್ತಮುತ್ತಲ ಅರಣ್ಯದಂಚಿನ ಗ್ರಾಮಗಳಲ್ಲಿ ಪದೇ ಪದೆ ಕಾಡುಪ್ರಾಣಿಗಳು ಜನರ ಹಾಗೂ ಸಾಕುಪ್ರಾಣಿಗಳ ಮೇಲೆ ದಾಳಿ ನಡೆಸುತ್ತಿದ್ದರು ಅರಣ್ಯ ಇಲಾಖೆ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದು ಆರೋಪಿಸಿ ಈ ಮೂವರು ಸ್ಥಳೀಯರೊಂದಿಗೆ ಉಪ ಅರಣ್ಯಾಧಿಕಾರಿ ಮಹಾತೇಂಶ್ ಮೇಲೆ ಹಲ್ಲೆ ನಡೆಸಿದ್ದಾರೆ. ಮಹಾತೇಂಶ್ ಮೇಲೆ ಹಲ್ಲೆ ನಡೆಸುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಹುಲಿ ಸೆರೆಗೆ ಕೂಂಬಿಂಗ್ ಆರಂಭ




ನಂಜನಗೂಡು, ನ.2–ತಾಲೂಕಿನ ಮಹದೇವನಗರದ ರೈತ ವೀರಭದ್ರ ಭೋವಿ ಮೇಲೆ ದಾಳಿ ನಡೆಸಿ ತೀವ್ರ ಗಾಯಗೊಳಿಸಿ, ಹಸುವನ್ನು ಬಲಿ ಪಡೆದಿದ್ದ ಹುಲಿ ಸೆರೆಗೆ ಅರಣ್ಯಾಧಿಕಾರಿಗಳು ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ವಲಯ ಅರಣ್ಯಾಧಿಕಾರಿ ನಾರಾಯಣರಾವ್, ರೈತನ ಮೇಲೆ ದಾಳಿ ನಡೆಸಿದ್ದ ಹುಲಿ ಪತ್ತೆಗಾಗಿ ಗುರುವಾರ ಕುದುರೆಗುಂಡಿ ಹಿನ್ನೀರಿನ ಪ್ರದೇಶದ 6 ರಿಂದ 7 ಕಿ.ಮೀ ವ್ಯಾಪ್ತಿ ವಿಶೇಷ ಹುಲಿ ರಕ್ಷಾ ಪಡೆಯ 15 ಸಿಬ್ಬಂದಿ, ಅರಣ್ಯ ಇಲಾಖೆಯ 10 ಸಿಬ್ಬಂದಿಯೊಂದಿಗೆ ಕಾರ್ಯಾಚರಣೆ ಆರಂಭಿಸಲಾಗಿದೆ. ಹುಲಿ ಪತ್ತೆಗಾಗಿ 10 ಕಡೆ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದರು.

ಕುದುರೆಗುಂಡಿ ಹಿನ್ನೀರಿನ ಪ್ರದೇಶದಲ್ಲಿ 2 ಬಾರಿ ಹುಲಿ ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗಿದೆ. ಗುರುವಾರ ಸಂಜೆ ರಾಮಾಪುರ ಆನೆ ಶಿಬಿರದಿಂದ ಹುಲಿ ಸೆರೆ ಕಾರ್ಯಾಚರಣೆಗಾಗಿ ಧರ್ಮ ಹಾಗೂ ಪಾರ್ಥ2 ಸಾಕಾನೆಗಳನ್ನು ಕರೆಸಲಾಗಿದೆ. ಶುಕ್ರವಾರ ಆನೆ ಕೂಂಬಿಂಗ್ ಮೂಲಕ ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ಹೇಳಿದರು.

ಕನ್ನಡ ವಿರೋಧಿಗಳಿಗೆ ಕಾನೂನು ಕ್ರಮ ಜರುಗಿಸಿ

ಪುರಸಭೆ ಸದಸ್ಯ ಆರ್.ಅರ್ಜುನ್ ಒತ್ತಾಯ



ತಿ.ನರಸೀಪುರ, ನ.2–ಕರ್ನಾಟಕದಲ್ಲಿ ಇತ್ತೀಚಿಗೆ ಹೊರ ರಾಜ್ಯದವರು ಕನ್ನಡಿಗರ ಮೇಲೆ ನಡೆಸುತ್ತಿರುವ ದೌರ್ಜನ್ಯ ಮಿತಿ ಮೀರುತ್ತಿದ್ದು, ರಾಜ್ಯ ಸರ್ಕಾರ ವಿಶೇಷ ಕಾನೂನಿನ ಮೂಲಕ ಕನ್ನಡ ವಿರೋಧಿಗಳು ಹಾಗೂ ಮಾತೃಭಾಷೆ ಬಗ್ಗೆ ಹಗುರವಾಗಿ ಮಾತನಾಡುವವರ ವಿರುದ್ಧ ಕಾನೂನು ಕಠಿಣ ಕ್ರಮ ಜರುಗಿಸಬೇಕು ಎಂದು ಪುರಸಭೆ ಸದಸ್ಯ ಹಾಗೂ ಚಿತ್ರನಟ ಆರ್.ಅರ್ಜುನ್ ಒತ್ತಾಯಿಸಿದರು.

ಪಟ್ಟಣ ಪುರಸಭೆ ವ್ಯಾಪ್ತಿಯ ಗೋಪಾಲಪುರ ಗ್ರಾಮದ ಬಿಜೆಪಿ ಜನಸಂಪರ್ಕ ಕೇಂದ್ರದಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದಿ ಭಾಷಿಗರ ದಬ್ಬಾಳಿಕೆ ದಿನೇ ದಿನೆ ಹೆಚ್ಚಾಗುತ್ತಿದೆ. ಅಪಾರ್ಟ್‌ಮೆಂಟ್ ಸೇರಿದಂತೆ ಎಲ್ಲೆಂದರಲ್ಲಿ ಹೊರ ರಾಜ್ಯದಿಂದ ಬಂದವರು ಕುಮಿಟಿಗಳನ್ನೇ ಮಾಡಿಕೊಂಡು ಕನ್ನಡಿಗರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ಕನ್ನಡ ಕಲಿಯುವುದಿಲ್ಲ, ನಾವು ಹಿಂದಿಯಲ್ಲೇ ಮಾತನಾಡುತ್ತೇವೆ ಎಂದು ಉಡಾಫೆಯಿಂದ ಮಾತನಾಡಿ ಕನ್ನಡ ಭಾಷೆಗೆ ಅಗೌರವ ತೋರುತ್ತಿದ್ದಾರೆ ಎಂದರು.

ಇಂತಹ ಪುಂಡರ ಮೇಲೆ ಸರ್ಕಾರ ವಿಶೇಷ ಕಾನೂನು ರಚಿಸಿ ಶಿಕ್ಷೆಗೊಳಪಡಿಸಬೇಕಾದ ಅನಿವಾರ್ಯತೆ ಇದೆ. ಹಾಗಾಗಿ ಸರ್ಕಾರ ವಿಶೇಷ ಕಾನೂನು ರಚಿಸಿ ದಿಟ್ಟ ನಿರ್ಧಾರ ಕೈಗೊಂಡಲ್ಲಿ ಅದನ್ನು ಶ್ಲಾಘಿಸುವ ನಿಟ್ಟಿನಲ್ಲಿ ನಾನೇ ಮೊದಲಿಗನಾಗಿ ರುತ್ತೇನೆ ಎಂದರು. ಹಿಂದಿ ರಾಷ್ಟ್ರಭಾಷೆ ಎನ್ನುವ ತಪ್ಪು ತಿಳುವಳಿಕೆ ಹೋಗಲಾಡಿಸುವ ನಿಟ್ಟಿನಲ್ಲಿ ಜನತೆಗೆ ಅರಿವು ಮೂಡಿಸಬೇಕಾದ ಕೆಲಸ ಸಹ ಆಗಬೇಕಿದೆ ಎಂದು ಹೇಳಿದರು.

ಈ ವೇಳೆ ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವು, ಬಾಬು ಜಗಜೀವನರಾಂ ಸಂಘದ ತಾಲೂಕು ಅಧ್ಯಕ್ಷ ಸಿ.ಪುಟ್ಟಯ್ಯ, ಪ್ರಧಾನ ಕಾರ್ಯದರ್ಶಿ ಸಿ.ಡಿ.ವೆಂಕಟೇಶ್, ಕಳ್ಳೀಪುರ ನಾರಾಯಣ್, ವಿಜಾಪುರ ಲಿಂಗರಾಜು, ಬೈರಾಪುರ ಬಿ.ಮಹದೇವ್, ಮಹದೇವಸ್ವಾಮಿ, ರಾಜುಗೌಡ ಮತ್ತಿತರರಿದ್ದರು.

> ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಇತ್ತೀಚಿಗೆ ತನ್ನ ಮೌಲ್ಯ ಕಳೆದು ಕೊಳ್ಳುತ್ತಿದೆ. ಪ್ರಶಸ್ತಿ ಆಯ್ಕೆಯಲ್ಲಿ ಆಡಳಿತ ಪಕ್ಷ ತನ್ನ ಪಕ್ಷದ ಕಾರ್ಯಕರ್ತರು ಪಕ್ಷಕ್ಕಾಗಿ ದುಡಿದಿದ್ದಾರೆ ಎಂದು ಗುರುತಿಸಿ ಪ್ರಶಸ್ತಿ ನೀಡುವಂತಾಗಿದೆ. ಕನ್ನಡ ಭಾಷೆಗಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದವರನ್ನು ಗುರುತಿಸಿ ಗೌರವಿಸಬೇಕೆ ಹೊರತು, ತನ್ನ ಪಕ್ಷಕ್ಕಾಗಿ ದುಡಿದಿದ್ದಾನೆ ಎಂಬುದನ್ನು ಪರಿಗಣಿಸಿ ನೀಡಬಾರದು. ಹಾಗಾದಲ್ಲಿ ರಾಜ್ಯೋತ್ಸವ ಪ್ರಶಸ್ತಿಗೆ ಯಾವುದೇ ಮೌಲ್ಯ, ಘನತೆ ಇರುವುದಿಲ್ಲ. ಅನರ್ಹರಿಗೆ ಪ್ರಶಸ್ತಿ ನೀಡಿದರೆ ಅದು ಪ್ರಶಸ್ತಿಗೆ ಮಾಡಿದ ಅವಮಾನ. ಆಡಳಿತ ನಡೆಸುವ ಅಧಿಕಾರಿಗಳು, ಸರ್ಕಾರ, ಜನಪ್ರತಿನಿಧಿಗಳು ಒಟ್ಟಿಗೆ ಸೇರಿ ಕನ್ನಡಪರ ಸೇವೆ ಮಾಡುವವರನ್ನು ಗುರುತಿಸಿ ಪಕ್ಷಾತೀತವಾಗಿ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡುವಂತಾಗಲಿ.
>
> –ಆರ್.ಅರ್ಜುನ್, ಪುರಸಭೆ ಸದಸ್ಯ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಲಿಯೋ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಯಾರಿಯನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಭಗವತಿ ಕೇಸರಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಾ ಊರಿ ಪಾಲಿಮೆರಿ ಪಾರ್ಟ್–2 (ತೆ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಭಾವಪೂರ್ಣ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ಟಿಆರ್‌ಪಿ ರಾಮ(ಕ)	2 ಪ್ರದರ್ಶನಗಳು
ಗರುಡ ಪುರಾಣ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್ INOX LIVE THE MOVIE ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಢುಂಢ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್ PVR CINEMAS ಮೊ.ನಂ: 8951357139 ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

12ನೇ ವರ್ಷದ ಸವಿನೆನಪು




ಅಲ್ಪ ಕಾಲ ಜೊತೆಗಿದ್ದು ಚಿರನಿದ್ದೆಗೆ ಜಾರಿದ ನೀನು, ನಿನ್ನ ನೆನಪು ಎಂದೆಂದಿಗೂ ಅಮರ. ನಿನ್ನ ದಿವ್ಯಾತ್ಮಕ್ಕೆ ಆ ಭಗವಂತನು ಮುಕ್ತಿ ಮತ್ತು ಶಾಂತಿಯನ್ನು ಕರುಣಿಸಲಿ ಎಂದು ನಾವು ಸದಾ ಭಗವಂತನಲ್ಲಿ ಬೇಡಿಕೊಳ್ಳುತ್ತೇವೆ. ನಿನ್ನ ನೆನಪಿನಲ್ಲಿಯೇ ಬದುಕು ಸಾಗಿಸುತ್ತಿರುವ

ಅಚ್ಚಪಂಡ ಕೆ. ಕಾರ್ಯಪ್ಪ (ಕಿರಣ್ ಎ.ಕೆ)
(10.06.1994 - 03.11.2011)

ಇಂತಿ ದುಃಖತಪ್ತರು: ತಾಯಿ ಅಚ್ಚಪಂಡ ಕೆ. ಧರ್ಮವತಿ, ತಂದೆ ಅಚ್ಚಪಂಡ ಎ. ಕುಶಾಲಪ್ಪ, ಅಕ್ಕ ಚೇಪಂಡ ಬಿ. ಡಿಂಪಲ್, ಬಾವ ಚೇಪಂಡ ಕೆ. ಬೆಳ್ಯಪ್ಪ ಮತ್ತು ಕುಟುಂಬವರ್ಗ ಹಾಗೂ ಸ್ನೇಹಿತರು

SANKALPA — SAT - 24



MAHARAJA EDUCATION TRUST®
SANKALPA Institute for IIT-JEE/NEET/CET
SAT - 24
Test Date 05-11-2023 Sunday
Time 11.30 am to 12.30 pm
PUC + NEET
PUC + CET
PUC + JEE
Dear Students, By Writing **SAT-24** you can check your expertise and Golden opportunity to avail Scholarship
SEPARATE HOSTEL FOR GIRLS & BOYS
BUS FACILITY
SANKALPA Institute for IIT-JEE/NEET/CET
Integrated with GOPALASWAMY PU COLLEGE
Nanjumalige Circle, Lakshmipuram, Mysuru-04
For More details Contact Us: 94808 49424, 93534 66875

ಎ.ಶಂಕರ ಶೆಟ್ಟಿ ಅಂಡ್ ಸನ್ಸ್ — ಡೈಮಂಡ್ ಉತ್ಸವ

ವಜ್ರ ಪ್ರದರ್ಶನ ಮತ್ತು ಮಾರಾಟ
1 ರಿಂದ 6 ನವೆಂಬರ್ 2023



₹2500/- ರಿಯಾಯಿತಿ ಪ್ರತಿ ಕ್ಯಾರೆಟ್ ವಜ್ರ ಆಭರಣದ ಮೇಲೆ
ಹೊಳೆಯುವ ನೈಜ ವಜ್ರದ ಆಭರಣಗಳೊಂದಿಗೆ ಇನ್ನಷ್ಟು ತೇಜಸ್ಸನ್ನು ಹೆಚ್ಚಿಸಿಕೊಳ್ಳಿ
Since 1925
A. SHANKARA CHETTY & SONS
FOUNDER - A. GOPALA CHETTY
PLATINUM DIAMOND GOLD SILVER JEWELLERS
K R CIRCLE, MYSORE | 0821 - 2423882 | MOB : 88808 66661
EMI facility & Valet parking available | Store Timings : 11 AM to 8 PM

ATTENTION EMPLOYERS

JOB FAIR
Arranged on November 5th, 2023 Sunday, Timings 10am-6pm at Venue Basudev Somani College, Kuvempunagar, Mysore.
Nominal Participation Fee.
Contact Immediately
94499 23880 / 94486 28480 / 82175 80980

21ನೇ ವರ್ಷದ ಪುಣ್ಯ ಸ್ಮರಣೆ



ಟಿ.ಎಸ್.ದಶರಥ್
ಮಾಲೀಕರು, ಶ್ರೀ ತ್ರಿಪುರಾಂಭ ಮಾಡರ್ನ್ ರೈಸ್ ಮಿಲ್, ಮೂಗೂರು

ಮುಡಾ ಅನುಮೋದಿತ ಸೈಟ್ಸ್

30x40 & 30x50
Ready for construction
ತಾಂಡವಪುರ
ಮೈಸೂರು ನಂಜನಗೂಡು ರಸ್ತೆ, ಮೈಸೂರಿನಿಂದ 18 ಕಿ.ಮೀ
9035565773

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ಹಸಿರು ನಮ್ಮ ಉಸಿರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಲಕ್ಷ್ಮೀರವರು

ಇವರು ದಿ: 23-10-2023ನೇ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 03-11-2023ನೇ ಶುಕ್ರವಾರ ಬೆ. 11-00 ಗಂಟೆಗೆ ನಮ್ಮ ಸ್ವಗೃಹ # 123, 1ನೇ ಕ್ರಾಸ್, ಮುಡಿಮೊಹಲ್ಲಾ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ಭೋಜನ ಸ್ವಗೃಹದಲ್ಲಿ ಮಧ್ಯಾಹ್ನ 2 ಕ್ಕೆ

ದುಃಖತಪ್ತರು: ಶ್ರೀ ಆರ್.ಪ್ರಕಾಶ್ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಸೈಟು ಬೇಕಾಗಿದೆ

1) ಲಾಲ್ ಬಹದ್ದೂರ್‌ಶಾಸ್ತ್ರಿ ನಗರ
2) ಶಾಂತವೇರಿ ಗೋಪಾಲಗೌಡ ನಗರ
3) ಲಲಿತಾದ್ರಿ ನಗರದಲ್ಲಿ

20x30, 30x40, 60x40
ಮಾಲೀಕರು ಸಂಪರ್ಕಿಸಿ:
9844444767

AFFIDAVIT

I, **AISHASIDDIKHHA** residing at # 3, SBM Colony, Udayagiri, Mysore-19. In my Passport No L 7567994 my husband's Name is wrongly spelt as **MUJIRAHAMADKHAN** but my husband's name in Aadhar Card, Pan Card, Passport and other relevant documents is spelt as **MUJEER AHMED KHAN.** I Swear this in front of the Notary on 2.11.2023
-Sd-
AISHASIDDIKHHA

ಸಾರ್ವಜನಿಕ ಪ್ರಕಟಣೆ

ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಇಲವಾಲ ಹೋಬಳಿ, ದೊಡ್ಡಮಾರೇಗೌಡನಹಳ್ಳಿ ಅಂಚೆ, ಕಮರವಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಪ್ರದೀಪ ರವರ ಧರ್ಮಪತ್ನಿಯಾದ ಸುಮಾರು 24 ವರ್ಷ ವಯಸ್ಸಿನ ಶ್ರೀಮತಿ ಅಂಬಿಕ ರವರು ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಇಲವಾಲ ಹೋಬಳಿ, ಚಿಕ್ಕೇಗೌಡನಹಳ್ಳಿ ಗ್ರಾಮ, ಮನೆ ನಂ.78 ರಲ್ಲಿ ವಾಸವಾಗಿರುವ ಶ್ರೀ ವೆಂಕಟೇ ಶರವರ ಧರ್ಮಪತ್ನಿಯಾದ ಸುಮಾರು 34 ವರ್ಷ ವಯಸ್ಸಿನ ಶ್ರೀಮತಿ ಪದ್ಮಾವತಿ ರವರಿಂದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಅದರಂತೆ ಷೆಡ್ಯೂಲ್ ಸ್ವತ್ತಿನ ಸಂಬಂಧಿ ದಾಖಲೆಗಳನ್ನು ಸದರಿಯವರು ನಮ್ಮ ಕಕ್ಷಿದಾರರಿಗೆ ಒದಗಿ ಸಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಸಂಬಂಧ, ಹಕ್ಕು, ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನಮ್ಮ ಕಕ್ಷಿದಾರರಿಗಾಗಲಿ ಅಥವಾ ನಮಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲೆಗಳೊಡನೆ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು, ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್‌ನಲ್ಲಿ ತೋರಿಸಿರುವ ಸ್ವತ್ತಿಗೆ ಸಂಬಂಧಿ ಸಿದಂತೆ ನೊಂದಣಿ ಕ್ರಯ ಪತ್ರವನ್ನು ಮಾಡಿಸಿ ಕೊಳ್ಳಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಸಂಬಂಧ ಪತ್ರಿಕಾ ಪ್ರಕಟಣೆಯ ಅವಧಿಯ ತರುವಾಯ. ಬರುವ ಯಾವುದೇ ತಂಟೆ-ತಕರಾರು ಗಳಿಗೆ ನಮ್ಮ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತಾರೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮದಲ್ಲಿನ ಸರ್ವೆ ನಂ.221/47 (ಹಳೇ ಸರ್ವೆ ನಂ. 221/12) ರಲ್ಲಿರುವ 0.00.04 ಗುಂಟೆ(ಒಂದು ಕಾಲು ಗುಂಟೆ) ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಪ್ರೇಮಮ್ಮ ನವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.221/12 ರಲ್ಲಿನ ಜಮೀನು, ಉತ್ತರಕ್ಕೆ: ರಸ್ತೆ,, ದಕ್ಷಿಣಕ್ಕೆ: ವಿಶಾಲಕ್ಷಮ್ಮ ನವರ ಜಮೀನು,

ಸಹಿ/- ಜಿ.ವಿ.ಶ್ರೀನಿವಾಸ .B.comLLB ವಕೀಲರು.E.No 1613/2015, ನಂ.13/1, 1 ನೇ ಮಹಡಿ, 8 ನೇ ಮೇನ್, 5ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು
ಸ್ಥಳ : ಮೈಸೂರು. 9902438100.
ದಿನಾಂಕ.02.11.2023

ಸಾರ್ವಜನಿಕರ ಪ್ರಕಟಣೆ

ಮೈಸೂರು ಸಿಟಿ, ಜನತಾ ನಗರ, ಸಾಹುಕಾರ್ ಚನ್ನಯ್ಯ ರಸ್ತೆ, ಮನೆ, ನಂ. 68/ಎ ರಲ್ಲಿ ವಾಸವಾಗಿರುವ ಶ್ರೀ ಗೋಪರಾಮಜಿ ರವರ ಮಗನಾದ ಸುಮಾರು 55 ವರ್ಷ ವಯಸ್ಸುಳ್ಳ ಶ್ರೀ **ಲಿಕ್ಕರಾಮ್** ಮತ್ತು ಇವರ ಮಗನಾದ ಸುಮಾರು 28 ವರ್ಷ ವಯಸ್ಸುಳ್ಳ **ಶ್ರೀ ನರೇಶ್ ಕುಮಾವತ್ ಎಲ್.** ರವರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ, ಜನತಾನಗರ, ಸಾಹುಕಾರ್ ಚನ್ನಯ್ಯ ರಸ್ತೆ, ಮನೆ ನಂ.39 ರಲ್ಲಿ ವಾಸವಾಗಿರುವ ಲೇಟ್ ಶಿವಲಿಂಗು ರವರ ಧರ್ಮಪತ್ನಿಯಾದ ಸುಮಾರು 52 ವರ್ಷ ವಯಸ್ಸುಳ್ಳ **ಶ್ರೀಮತಿ ಪದ್ಮ**. ಇವರ 1ನೇ ಮಗನಾದ ಸುಮಾರು 28 ವರ್ಷ ವಯಸ್ಸುಳ್ಳ **ಶ್ರೀ ಸುರೇಶ್ ಎಸ್.** ಹಾಗೂ 2ನೇ ಮಗಳಾದ ಸುಮಾರು 26 ವರ್ಷ ವಯಸ್ಸುಳ್ಳ **ಸುಷ್ಮ ಎಸ್.** ರವರುಗಳಿಂದ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಕ್ರಯಪತ್ರವನ್ನು ಬರೆಸಿಕೊಳ್ಳಲು ಸಿದ್ಧರಿರುವ ಕಾರಣ ಮೇಲ್ಕಂಡವರನ್ನು ಬಿಟ್ಟು ಈ ಷೆಡ್ಯೂಲ್ ಸ್ವತ್ತಿಗೆ ಬೇರೆ ಯಾರಿಗಾದರೂ ಹಕ್ಕು, ಭಾದ್ಯತೆ, ಭೋಗ್ಯ, ದಾನ, ಕರಾರು ಅಥವಾ ಪರಭಾರ ಆಗಿದ್ದ ಪಕ್ಷದಲ್ಲಿ ಜೊತೆಗೆ ಜೀವನಾಂಶ, ಮೈನರ್ ಹಕ್ಕುಗಳು, ಸಿವಿಲ್, ರೆವಿನ್ಯೂ, ಕ್ರಿಮಿನಲ್ ಕೋರ್ಟ್, ಅಟಾಚ್‌ಮೆಂಟ್, ಡಿಕ್ರಿ ಇನ್ನಾವುದೇ ಜಪ್ತಿಗಳಿಗೆ ಈಡಾಗಿದ್ದ ಪಕ್ಷದಲ್ಲಿ ಈ ಕೆಳಕಂಡ ವಕೀಲರನ್ನು ಈ ಪ್ರಕಟಣೆಕೊಟ್ಟ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ವಕೀಲರ ಮೂಲಕ ಬಂದು ಭೇಟಿಯಾಗ ಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಂಟೆ ತಕರಾರುಗಳು ಮೇಲೆ ಹೇಳಿದ ಅವಧಿಯಲ್ಲಿ ಬರದಿದ್ದ ಪಕ್ಷದಲ್ಲಿ ಷೆಡ್ಯೂಲ್ ಸ್ವತ್ತಿಗೆ ಯಾರಿಂದಲೂ ಹಕ್ಕು, ಭಾದ್ಯತೆ, ಹಿತಾಸಕ್ತಿ ಇರುವುದಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವವರಿದ್ದು, ನಂತರ ಬರುವ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಭಾದ್ಯಸ್ಥರಾಗಿರುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸತ್ತಿನ ವಿವರ

ಮೈಸೂರು ತಾಲ್ಲೂಕು, ಚೋಗಾದಿ ಗ್ರಾಮಕ್ಕೆ ಸೇರಿದ ಸರ್ವೆ ನಂ.199 ರಲ್ಲಿ (ಜನತಾನಗರ) ನಿವೇಶನಕ್ಕೆ ಚಕ್ಕುಬಂದಿ : ಪೂರ್ವಕ್ಕೆ: ಡಿ' ಬ್ಲಾಕ್‌ನ ಮೂರನೆಯ ನಂಬರ್ ಸೈಟು, ಪಶ್ಚಿಮಕ್ಕೆ: 'ಬಿ' ಬ್ಲಾಕ್‌ನ ಐದನೇ ಸೈಟು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: 'ಸಿ' ಬ್ಲಾಕಿನ ನಾಲ್ಕು ಮತ್ತು ಐದನೆಯ ಸೈಟು, ಈ ಮಧ್ಯೆ ಇರುವ ಪೂರ್ವ ಪಶ್ಚಿಮ : 40 ಅಡಿ, ಉತ್ತರ ದಕ್ಷಿಣ : 60 ಅಡಿ ನಿವೇಶನದಲ್ಲಿ ಅರ್ಧ ಸ್ವತ್ತು, ಪೂರ್ವ ಪಶ್ಚಿಮ : 20 ಅಡಿ, ಉತ್ತರ ದಕ್ಷಿಣ : 60 ಅಡಿ ನಿವೇಶನವು ಮಾತ್ರ

ಸಹಿ/– ಸಿ, ಸಿದ್ದರಾಮ ಬಿ.ಎ.ಎಲ್.ಎಲ್.ಎಲ್.ಬಿ., ವಕೀಲರು, ಕೆ.ಎ.ಆರ್.1810/2015, ನಂ.ಬಿ–3, ಡಿ. ಕೆಂಚಪ್ಪ ಬಿಲ್ಡಿಂಗ್, 1ನೇ ಮೇನ್, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಎದುರು, ಸರಸ್ವತಿಪುರಂ, ಮೈಸೂರು–09.

ನೇರ ಸಂದರ್ಶನ

ಪ್ರತಿಷ್ಠಿತ ಸಮೂಹ ಸಂಸ್ಥೆಯು ನೇಮಕಾತಿ ಮಾಡಿಕೊಳ್ಳುತ್ತಿದೆ ವಿಳಂಬ ಮಾಡದೆ ಸಂಪರ್ಕಿಸಿ

1. **ಸರ್ವೀಸ್ ಮ್ಯಾನೇಜರ್:** ಬಿ.ಇ. / ಡಿಪ್ಲೊಮಾ / ಡಿಗ್ರಿ ಮತ್ತು ಕಂಪ್ಯೂಟರ್ ಜ್ಞಾನವಿರಬೇಕು, ಆಟೋಮೊಬೈಲ್ ಫೀಲ್ಡ್‌ನಲ್ಲಿ 3 ರಿಂದ 4 ವರ್ಷ ಅನುಭವವಿರಬೇಕು
2. **ನೆಟ್‌ವರ್ಕ್ ಮ್ಯಾನೇಜರ್:** ಡಿಗ್ರಿ ಮತ್ತು ಕಂಪ್ಯೂಟರ್ ಜ್ಞಾನವಿರಬೇಕು, ಸೇಲ್ಸ್ ಮತ್ತು ಸರ್ವೀಸ್ ಫೀಲ್ಡ್ ನಲ್ಲಿ ಅನುಭವವಿರಬೇಕು
3. **ಸೀನಿಯರ್ ಅಕೌಂಟೆಂಟ್:** ಬಿ.ಕಾಂ. ಪದವಿ ಮತ್ತು ಟ್ಯಾಲಿ ಜ್ಞಾನವಿರಬೇಕು, 5 ರಿಂದ 7 ವರ್ಷ ಅನುಭವವಿರಬೇಕು (ಪುರುಷರು ಮಾತ್ರ)
4. **ಜೂನಿಯರ್ ಅಕೌಂಟೆಂಟ್:** ಬಿ.ಕಾಂ. ಪದವಿ ಮತ್ತು ಟ್ಯಾಲಿ ಜ್ಞಾನವಿರಬೇಕು, 2 ರಿಂದ 3ವರ್ಷ ಅನುಭವವಿರಬೇಕು (ಪುರುಷರು ಮಾತ್ರ)
5. **ಸರ್ವೀಸ್ ಅಡ್ವೈಸರ್:** ಡಿಪ್ಲೊಮಾ / ಐ ಟಿ ಐ
6. **ಸೇಲ್ಸ್ ಎಕ್ಸಿಕ್ಯೂಟೀವ್:** ಪಿ.ಯು.ಸಿ/ ಡಿಪ್ಲೊಮಾ / ಡಿಗ್ರಿ ಮತ್ತು ಕಂಪ್ಯೂಟರ್ ಜ್ಞಾನವಿರಬೇಕು, 3ವರ್ಷ ಅನುಭವವಿರಬೇಕು, ಅನುಭವವಿಲ್ಲದಿರುವವರು ಕೂಡ ಅರ್ಜಿ ಸಲ್ಲಿಸಬಹುದು
7. **ಟೆಲಿ ಕಾಲರ್:** ಪಿ.ಯು.ಸಿ, ಉತ್ತಮ ಸಂವಾದದ ಕೌಶಲ್ಯವಿರಬೇಕು, ಮತ್ತು ಕಂಪ್ಯೂಟರ್ ಜ್ಞಾನವಿರಬೇಕು, ಅನುಭವವಿಲ್ಲದಿರುವವರು ಕೂಡ ಅರ್ಜಿ ಸಲ್ಲಿಸಬಹುದು (ಮಹಿಳೆಯರು ಮಾತ್ರ)
8. **ಟೆಕ್ನೀಷಿಯನ್ / ಫಿಟ್ಟರ್:** ಐ ಟಿ ಐ / ಡಿಪ್ಲೊಮಾ, ಅನುಭವವಿರಬೇಕು
9. **EDP ಬಿಲ್ಲಿಂಗ್** : ಡಿಗ್ರಿ ಮತ್ತು ಕಂಪ್ಯೂಟರ್ ಜ್ಞಾನವಿರಬೇಕು
10. **ಸಿ ಆರ್ ಎಮ್** : ಡಿಗ್ರಿ, 2 ರಿಂದ 3ವರ್ಷ ಅನುಭವವಿರಬೇಕು
11. **ಪಿ ಡಿ ಐ ಕೋ-ಆರ್ಡಿನೇಟರ್** : ಡಿಗ್ರಿ, ಅನುಭವವಿರಬೇಕು (ಪುರುಷರು ಮಾತ್ರ)

ಆಸಕ್ತಿಯುಳ್ಳ ಅಭ್ಯರ್ಥಿಗಳು ಸ್ವವಿವರಗಳನ್ನು phadmin@palacehonda.com ಗೆ ಕಳುಹಿಸಿ ಅಥವಾ 63618 10374 ಗೆ ವಾಟ್ಸಪ್ / ಕರೆ ಮಾಡಿ.
ನೇರ ಸಂದರ್ಶನ ದಿನಾಂಕ: **03.11.2023 & 04.11.2023**
ಸಮಯ: ಬೆಳಿಗ್ಗೆ 10 ರಿಂದ ಸಂಜೆ 4.00 ಗಂಟೆ
ಪ್ಯಾಲೆಸ್ ಹೋಂಡಾ
#67, ನ್ಯೂ ಕಾಂತರಾಜ ಅರಸ್ ರಸ್ತೆ, ಅಗ್ನಿಶಾಮಕ ದಳದ ಪಕ್ಕ, ಸರಸ್ವತಿಪುರಂ, ಮೈಸೂರು – 570 009

7ನೇ ವರ್ಷದ ಪುಣ್ಯಸ್ಮರಣೆ



ಎಸ್. ಮರಿಲಿಂಗಯ್ಯ
ನಿವೃತ್ತ ಹೆಡ್ ಕಾನ್ಸ್‌ಟೇಬಲ್

ದುಃಖತಪ್ತರು: ಪತ್ನಿ ಸಿ. ಜಯಮ್ಮ ಮತ್ತು ಮಕ್ಕಳು, ಅಳಿಯಂದಿರು & ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಮೈಸೂರು

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

SITES FOR SALE

MUDA APPROVED
in between Manipal Hospital & N.H. Hospital. Measuring
20x30, 30x40 & 40x60
Loan available from all major Banks.
Call : 8971119292 / 9611223444

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಶಿವಮ್ಮನವರು

ಇವರು ದಿನಾಂಕ 24.10.2023 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 03.11.2023ನೇ ಶುಕ್ರವಾರ ಮ.12ಕ್ಕೆ ಮೃತರ ಸ್ವಗೃಹ ಮೈಸೂರು ತಾ॥ ಇಲವಾಲ ಹೋ॥ ಕೂರ್ಗಳ್ಳಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಮೃತರ ಪತಿ ಡಿ.ಬೋರೇಗೌಡರು, ಗಂಡು ಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ

1. ದೋಸೆ ಭಟ್ಟರು – 20,000/-
2. ಇಡ್ಲಿ-ವಡೆ ಭಟ್ಟರು – 15,000/-
3. ಕಾಫಿ/ಟೀ – 15,000/-
4. ಕೌಂಟರ್ ಹುಡುಗರು – 11,000/-

ಇಎಸ್‌ಐ, ಪಿಎಫ್ ಹಾಗೂ ವಸತಿ ಸೌಲಭ್ಯವಿದೆ, ಸಂಪರ್ಕಿಸಿ
6362847848

neem BOND PLATINUM®

PLYWOOD & DOORS
@ FACTORY DEPOT RATES
10 YEARS WARRANTY*
9731591267, 9901291267

ಕಾಣೆಯಾಗಿದ್ದಾರೆ



ದಿನಾಂಕ: 27.10.2023 ರಂದು 7ನೇ ಕ್ರಾಸ್, 2ನೇ ಸ್ಟೇಜ್, ಹೆಬ್ಬಾಳ್, ಮೈಸೂರು. ನನ್ನ ಮಗನಾದ ರೇವಣ್ಣಸಿದ್ದಯ್ಯ ತಂದೆ ಬಸಯ್ಯ ಸಿಂದನಕೇರಿ ಯಾಗಿದ್ದು ಈತನು ಮನೆಯಿಂದ ಹೊರ ಹೋದವನ್ನು ಮರಳಿ ಮನೆಗೆ ಬಂದಿರುವುದಿಲ್ಲ ಈತನು ಬುದ್ಧಿಮಾಂದ್ಯನಾಗಿರುತ್ತಾನೆ. ಇವರನ್ನು ಯಾರಾದರು ಕಂಡಲ್ಲಿ ಈ ನಂಬರಿಗೆ ತಿಳಿಸಬೇಕಾಗಿ ವಿನಂತಿ.
ಇಂತಿ: ಬಸಯ್ಯ S/o ತೀರ್ಥಯ್ಯ, ಸಿಂದನಕೇರಿ, #757, 7ನೇ ಕ್ರಾಸ್, 2ನೇ ಹಂತ, ಹೆಬ್ಬಾಳ್,
9901239250, 8050905159

MUDA APPROVED SITES FOR SALE

Last 9
30X40 EAST FACING
Available.
Location: Adjacent J P Nagar, At Mysore-Ooty Road & Ring Road Junction.
Price @ Rs 65 lakhs onwards
Call: 96200 99122

REQUIRED

South North and Chinese Head Cook and Assistance also Other Staff Members for a reputed Veg Restaurant at Kuvempunagar, Mysuru
8971768648

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಚೇರಿ
ನಂ.1ನೇ ವಿಭಾಗ, ಮೈಸೂರು, ಹೈವೆ-ವೃತ್ತದ ಹತ್ತಿರ, ಜಾವ ಫ್ಯಾಕ್ಟರಿ ರಸ್ತೆ, ಮೈಸೂರು–570001
ನಂ.ಕಕೊಅಮ/ಕಾಪಾಅ/ನಂ.1ನೇ.ವಿ/ಗು.ಆ.ನೇ/2023–24/ ದಿನಾಂಕ:30–10–2023

ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿ ಪ್ರಕಟಣೆ
(Walk in Interview)

ಮೈಸೂರು ನಂ.1ನೇ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಬರುವ ಹಾಸನ ಉಪ-ವಿಭಾಗ ಕಛೇರಿಗೆ ಅವಶ್ಯವಿರುವ ಓರ್ವ ಸಹಾಯಕ ಅಭಿಯಂತರರು (ಸಿವಿಲ್ ಇಂಜಿನಿಯರ್) ರವರ ಸೇವೆಯನ್ನು **Open Transparent Process** (ಗುತ್ತಿಗೆ ಆಧಾರದ) ಮೂಲಕ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಗೆ ಮೈಸೂರು ನಂ.1ನೇ ವಿಭಾಗ ಕಛೇರಿಯಲ್ಲಿ ಸಂದರ್ಶನ ಏರ್ಪಡಿಸಲಾಗಿರುತ್ತದೆ. ಆಸಕ್ತಿಯುಳ್ಳವರು ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಂದರ್ಶನ ದಿನಾಂಕ: 06.11.2023
ಸಮಯ: ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.1ನೇ ವಿಭಾಗ, ಮೈಸೂರು

ಒಂದನೇ ವರ್ಷದ ಸವಿನೆನಪು



ಜನನ: 04.02.2004 ಮರಣ: 03.11.2021

ಕು॥ ಇಂಚರ.ಆರ್

ನೀನು ನಮ್ಮನಗಲಿ ಇಂದಿಗೆ 1 ವರ್ಷ ಕಳೆದರೂ ನಿನ್ನ ನೆನಪು ಸದಾ ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ

ದುಃಖತಪ್ತರು: ಶ್ರೀಮತಿ ನಳಿನಿ ಮತ್ತು ಶ್ರೀ ಹೆಚ್.ಜಿ.ರಾಘವೇಂದ್ರ
(ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮೈಸೂರು ಜಿಲ್ಲಾ ಹಾಗೂ ಮಾಜಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು)
ಶ್ರೀಮತಿ ಲೇ॥ ಕಲಾವತಿ ಮತ್ತು ಶ್ರೀ ಲೇ॥ ಜವರೇಗೌಡರ ಕುಟುಂಬ, ಶ್ರೀಮತಿ ಮಂಜುಳ ಮತ್ತು ಶ್ರೀ ನಾಗೇಂದ್ರ ಶ್ರೀಮತಿ ನಳಿನ ಮತ್ತು ಶ್ರೀ ಜಯಕುಮಾರ್, ಶ್ರೀಮತಿ ಪ್ರತಿಭಾ ಮತ್ತು ಶ್ರೀ ರವಿಶಂಕರ್ ಶ್ರೀಮತಿ ಮಾಲತಿ ಮತ್ತು ಶ್ರೀ ನಾಗರಾಜು, ಶ್ರೀಮತಿ ಪದ್ಮಿನಿ ಮತ್ತು ಶ್ರೀ ಜಯರಾಮು, ಕುಟುಂಬ ವರ್ಗ, ಸ್ನೇಹಿತರು ಮತ್ತು ಬಂಧುಮಿತ್ರರು ಹಾಗೂ ಹುಯಿಲಾಳು ಗ್ರಾಮಸ್ಥರು, ಮೈಸೂರು ತಾ॥

ಬೇಕಾಗಿದ್ದಾರೆ

ಮೈಸೂರು ನಗರದಲ್ಲಿರುವ ಎರಡು ಪೆಟ್ರೋಲ್ ಬಂಕ್‌ಗಳಿಗೆ ಮಾರಾಟ ಸಹಾಯಕರು ಬೇಕಾಗಿದ್ದಾರೆ.
ಕನಿಷ್ಠ **SSLC** ವಿದ್ಯಾಭ್ಯಾಸ ವಿರಬೇಕು. ಸಂಬಳದ ಜೊತೆ ಮಾರಾಟ ಉತ್ತೇಜಕ ಭತ್ಯೆ ದೊರೆಯುತ್ತದೆ. 20 ರಿಂದ 30 ವಯಸ್ಸಿನ ಯುವಕರು ಸಂಪರ್ಕಿಸಿ
9611022435, 9886209339

40 X 60 SITE FOR SALE

- BHARATHI ENCLAVE
- EAST FACING
- BOGADI ROAD
- OPPOSITE TRENDZ APARTMENT
- FULLY DEVELOPED AREA
- GOOD LOCATION

CONTACT
9035379769

ಗಾಯತ್ರಿ ಟಾಕೀಸ್

UFO Digital A/C ನಲ್ಲಿ ಮಾತ್ರ
(ವಿಜಯ್ ನಟಿಸಿರುವ)
ಲಿಯೋ
(ಕನ್ನಡ & ತಮಿಳು)



ಇಂದಿನಿಂದ
ದಿನ 4 ಪ್ರದರ್ಶನ
10.30, 1.30 ಕನ್ನಡ
4.45, 7.45 ತಮಿಳು
ಆನ್‌ಲೈನ್ ಟಿಕೆಟ್ಸ್ ಬುಕ್ ಮೈ ಶೋ ನಲ್ಲಿ ಲಭ್ಯವಿದೆ

REQUIRED

We are the leading IT Professionals in Mysore. We are looking for candidates for the following posts.
1. HARDWARE SERVICE ENGINEERS - 2 Nos. DIP/ITI with hardware and networking knowledge with 1 year experience.
Freshers can also apply for the trainee service engineers post.
Two wheeler is must for both the posts.
8073393505

ಒಂದನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಸತ್ಯವತಿ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರು ಸದಾ ನೀವು ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿರುತ್ತೀರಿ
ಇಂದ ಪತಿ ಕೃಷ್ಣಮೂರ್ತಿ, ಮೊಮ್ಮಕ್ಕಳು ಅಮಿತ್ ಶೆಟ್ಟಿ, ಕಾರುಣ್ಯ

ಎಂ.ಟಿ.ಎಸ್ ಕುಟುಂಬವರ್ಗ ದೊಡ್ಡಮರಳವಾಡಿ, ಕನಕಪುರ, ತಾಲ್ಲೂಕು | ಜೆ.ನಾಗರಾಜ್ ಕುಟುಂಬವರ್ಗ ಹಳೆ ಸೋಸಲೆ ಗ್ರಾಮ, ಟಿ.ಎನ್.ಪುರ

Remembering a Visionary




Prof. B. S. Pandit
01-06-1936 – 03-11-2008
Founder Secretary, GSSS (R)

ಕರ್ಮಣ್ಯೇ ವಾಧಿಕಾರಸ್ಥೇ ಮಾಫಲೇಷು ಕದಾಚನ
ಮಾ ಕರ್ಮಫಲ ಹೇತುರ್ಭೂರ್ಮಾ ತೇ ಸಂಗೋಸ್ತ್ವ ಕರ್ಮಣಿ

Managing Committee Members
Staff & Students
GSSS
GSSS Geetha Bharathi Higher Primary School
GSSS Bantwal Madhava Shenoy High School
GSSS Badriprasadji Pre-University College
GSSS Simha Subbamahalakshmi First Grade College
GSSS Institute of Engineering & Technology for Women
GSSS School of Architecture for Women

ಭಾವಪೂರ್ಣ ಶ್ರದ್ಧಾಂಜಲಿ



ಆರ್. ಪಿ. ಸುಬ್ರಮಣಿ
ನಿಧನ : 02–11–2023

ಈ ನಿಧನದ ಸುದ್ದಿಯನ್ನು ತಿಳಿಸಲು ನಾವು ವಿಷಾದಿಸುತ್ತೇವೆ.
ಪಾರ್ಥಿವ ಶರೀರದ ದರ್ಶನದ ವ್ಯವಸ್ಥೆ ಮಧ್ಯಾಹ್ನ 1.00 ಘಂಟೆಗೆವರೆಗೆ ಶಾಂತಲಾ ಚಿತ್ರಮಂದಿರದ ಹಿಂಭಾಗದಲ್ಲಿರುವ ನಿವಾಸದಲ್ಲಿ ಏರ್ಪಡಿಸಲಾಗಿದೆ.
ಮೃತರ ಅಂತ್ಯಕ್ರಿಯೆ ದಿನಾಂಕ : 03–11–2023, 1.00 ಘಂಟೆಗೆ ನೆರವೇರಲಿದೆ.

ದುಃಖ ತಪ್ತರು – ಕೆ.ಪಿ.ಆರ್ ಕುಟುಂಬದವರು, ಮೈಸೂರು

ಎರಡನೇ ವರ್ಷದ ಸವಿನೆನಪು



ದಿ॥ ನಾಗಲಿಂಗ.ಎನ್ (Rtd.CSR&TI)
ಮರಣ: 03.11.2021

"ದೇವರು ನಿಮ್ಮ ಆತ್ಮಕ್ಕೆ ಶಾಂತಿ ನೀಡಲಿ, ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ"

ದುಃಖತಪ್ತರು:
ಪತ್ನಿ-ಕುಸುಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧುಮಿತ್ರರು